
# ಅಪರಂಜಿ

ತಿಳಿನಗೆಯ ಕಾರಂಜಿ

ಆಗಸ್ಟ್ 2025




ಬಿಡಿ ಪ್ರತಿ: ರೂ. 10/–

# BSS Construction services

*Building Excellence, Delivered On Time !*

**ಪ್ರತಿಯೊಬ್ಬ ಗಂಡಸಿಗೂ ಮನೆ ಮತ್ತು ಹೆಂಡತಿ**
**ಇರಲೇ ಬೇಕು ... ಸ್ವಂತದ್ದಾದಷ್ಟೂ ಒಳ್ಳೇದು! –© ಬೀchi**

---

At BSS, we specialize in delivering top-notch construction services with a focus on quality, reliability, and timely delivery. Whether you're building your dream home or commercial project, we ensure exceptional craftsmanship and seamless execution from start to finish.

## Why Choose Us?

- On-time project completion
- Tailored solutions for every need
- Premium materials & expert craftsmanship
- Affordable pricing with transparent quotes

Contact us today for a consultation and see why we're the trusted choice for all your construction services.

---


**Ph : 080-29731414  Mobile : 9035007003**
**Email: bss1constructions@gmail.com**

# ಪೆದ್ದು ಪ್ರಶ್ನೆಗೆ ತಕ್ಕ ಉತ್ತರಗಳು




1. ಇಲ್ಲ ಮುಂಗೈ ನೋಯ್ತಾ ಇತ್ತು ಡಾಕ್ಟ್ರ
ಮುಂಗೈ ಆಡಿಸ್ತಾ ಇರು ಅಂತ ಹೇಳಿದಾರೆ !

2. ಇಲ್ಲ, ನಾನು ಅಂತರ್ಗ್ರಹ ಯಾತ್ರಿ. ಈಗ್ತಾನೆ ಬಂದೆ
ನನ್ನ ಸ್ಪೇಸ್‌ಷಿಪ್‌ನ ಬದಲಾಯಿಸ್ತಾ ಇದ್ದೇನೆ !"

3. ಮೂರು ಛಾನ್ಸು ಕೊಡ್ತೇನೆ. ನಾನು ಏನು
ಮಾಡ್ತಾ ಇರಬಹುದು ಗೆಸ್ ಮಾಡ್ತೀರಾ ಮೇಡಂ ?"

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457

www.mallige.com

NABH ACCREDITED · PATIENT SAFETY & QUALITY OF CARE

Certificate No.: MC-2068



Established in 1978 we are a multi-speciality, tertiary care hospital.

CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 42
ಸಂಚಿಕೆ – 11
ಆಗಸ್ಟ್ – 2025

## ಈ ಸಂಚಿಕೆಯಲ್ಲಿ...


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಅವಿಸ್ಮರಣೀಯ ನಗೆಗಾರರು..... | ಶಿವಕುಮಾರ್ | 5 |
| ಅಬ್ಲುಕ್–ಅದೃಷ್ಟ ಮಚ್ಚೆಯಿದ್ದ ಕುದುರೆ | ನರೇಂದ್ರ ಸುಂದರರಾವ್ | 9 |
| ವೈದ್ಯ ಕವಿ | ಎನ್. ಶಂಕರ ರಾವ್ | 14 |
| ಸುಗರ್ ಸಮಸ್ಯೆ | ಸುಮ ರಮೇಶ್ | 18 |
| ಸ್ಥಬ್ದ ಚಿತ್ರ | ರಾಜೇಶ್ವರಿ | 20 |
| ತುಂತುರು | ದಂನಆ | 22 |
| ಶ್ವಾನ ಪುರಾಣ | ಲತಾ ಹೆಗಡೆ | 23 |
| ಆಟೋ ಎಂಬ ರಸ್ತೆ ರಾಜ | ಕೆ.ಎಸ್.ಸೋಮೇಶ್ವರ | 27 |
| ದೋಸೆ ಮೀಮಾಂಸೆ | ನಿರ್ಮಲ ಮೃತ್ಯುಂಜಯಸ್ವಾಮಿ | 31 |
| ಉತ್ತರಕ್ಕಿಂತ ಪ್ರಶ್ನಪತ್ರಿಕೆಯಲ್ಲಿರುವ.... | ಜಿ. ವಿ. ಅರುಣ | 36 |
| ಚಪ್ಪಲಿಯ ಚಿಂತನೆಯಲ್ಲಿ.... | ಗೀತಾ ಕುಂದಾಪುರ | 38 |


ವ್ಯಂಗ್ಯ ಚಿತ್ರಗಳು : ಹೊರಪುಟ : ಜೆಮಿನಿ ಎಐ
ಒಳಪುಟಗಳು : ಜೆಮಿನಿ ಎಐ

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

***ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ***



# ಅಪರಂಜಿ ಕಿಡಿ

● ಪ್ರಕಾಶ್

ಅರ್ಜೆಂಟಿನಾಗೆ ಮೋದಿ ಭೇಟಿ

– ಪತ್ರಿಕೆ

ಅದೇನು ಅರ್ಜೆಂಟು ಅಂತ ಅಪರಂಜಿ ನಸು ನಕ್ಕಳಂತೆ

* * *

ಕ್ರಿಕೆಟ್ ಕಿಡಿ : ವೇರ್ ದೇರ್ ಈಸ್ ಎ ಗಿಲ್,

ದೇರ್ ಈಸ್ ಎ ವೇ !!

* * *

"ಭಾರತ ಎಚ್ಚರಿಕೆಯಿಂದ ಹೆಜ್ಜೆ ಇಡಲಿ."

– ದಲೈಲಾಮ ವಿಷಯದಲ್ಲಿ ಚೀನಾ

ಕುಂಬಳಕಾಯಿ ಕಳ್ಳ ಎಂದರೆ........

* * *

"ಕಸಾಪ ಸುತ್ತ ವಿವಾದಗಳ ಹುತ್ತ"

–ಪತ್ರಿಕೆ

ಆಹಾ, ಶೀರ್ಷಿಕೆ ಅಂದರೆ ಹೀಗಿರಬೇಕು !!

* * *

ನಂದಿನಿ ಪಾರ್ಲರ್‌ಗೆ ನುಗ್ಗಿ ದಾಂಧಲೆ

– ಸುದ್ದಿ

ಹಾ(ಕೋ)ಲಾಹಲ ಅನ್ನಬಹುದೇ ಇದನ್ನ !!

* * *

"ವಾಲ್ಮೀಕಿ ಹಗರಣ" ಮಂತ್ರಿಗಳು ಭಾಗಿ

– ದಿನ ಪತ್ರಿಕೆ

ಅರೆ, ಇನ್ನೊಂದು ಹುತ್ತ !!

* * *

"ಬಿ.ಜೆ.ಪಿ." ನಾಯಕರದ್ದು ಕೇವಲ ಹಗಲುಗನಸು.

ನಾನೇ ಐದು ವರ್ಷ ಸಿ.ಎಂ.

– ಸಿ.ಎಂ. ಹೇಳಿಕೆ

"ದುಃಸ್ವಪ್ನ" ಅನ್ನೋದು ಸೂಕ್ತ ಅಂತ

ಅಪರಂಜಿ ಪಲುಕಿದಳಂತೆ.

●

## ನಮ್ಮ ನಿಮ್ಮಲ್ಲಿ

**ಶಿವಕುಮಾರ್**

ಮೊನ್ನೆ ನನ್ನ ತಮ್ಮ ಓಂಪ್ರಕಾಶ್ ಸುಮ್ಮನಿರಲಾರದೆ, "ಅಪರಂಜಿ ಬಗ್ಗೆ ಏನು ಹೇಳ್ತೀಯಾ?" ಅಂತ ಛಾಟ್ ಜಿಪಿಟಿಯನ್ನ ಕೇಳಿದ. ಅದು ಕೊಟ್ಟ ಉತ್ತರ ಸುದೀರ್ಘವಾಗಿತ್ತು. ಕೊನೆಯ ಪ್ಯಾರಾದಲ್ಲಿ ಅದು ಹೇಳಿದ ಮಾತುಗಳನ್ನು ನೋಡಿ. (ಇಂಗ್ಲೀಷಿನಿಂದ ಕನ್ನಡೀಕರಿಸಿರುವೆ)

"ಕೊರವಂಜಿ ಅಪರಂಜಿ ಪತ್ರಿಕೆಗಳ ಪರಂಪರೆ ಕನ್ನಡ ಹಾಸ್ಯ ಸಂಸ್ಕೃತಿಯ ಒಂದು ಜೀವಂತ ದ್ಯೋತಕ. ಎಂಟು ದಶಕಗಳ ಅವಧಿಯಲ್ಲಿ ಹಿಂದಿನ ತಲೆಮಾರಿನ ನಾ. ಕಸ್ತೂರಿ, ಆರ್.ಕೆ.ಲಕ್ಷ್ಮಣ್ ಅವರನ್ನು ಇಂದಿನ ನಗೆಗಾರರೊಂದಿಗೆ ಒಟ್ಟುಗೂಡಿಸುವ ಪ್ರಯತ್ನವಿದು. ಮಾಸಿಕ ವೇದಿಕೆಯೊಂದರಲ್ಲಿ ಉದಯೋನ್ಮುಖ ನಗೆ ಬರಹಗಾಗರನ್ನ, ವ್ಯಂಗ್ಯಚಿತ್ರಕಾರರನ್ನ ಪೋಷಿಸುತ್ತಲೇ, ನಗೆ ಮನೋಭಾವ ಜನತೆಯಲ್ಲಿ ಅನುರಣಿಸುವಂತೆ ಮಾಡುತ್ತಿರುವುದು ಅಪರಂಜಿಯ ಹಿರಿಮೆ.

ಒಟ್ಟಿನಲ್ಲಿ ಹೇಳುವುದಾದರೆ, ಅಪರಂಜಿ ಕೇವಲ ಒಂದು ಹಾಸ್ಯ ಪತ್ರಿಕೆಯಲ್ಲ. ಅದೊಂದು ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಸಂಸ್ಥೆ. ಸದಭಿರುಚಿಯ ಸಂಪಾದಕತ್ವ, ಬರಹಗಾರರ ಕಸುಬುದಾರಿಕೆ, ಇವುಗಳನ್ನು ಮೈಗೂಡಿಸಿಕೊಂಡಿರುವ ಅಪರಂಜಿ ಹಾಸ್ಯವನ್ನು ಹಬ್ಬದಂತೆ ಆಚರಿಸುತ್ತಿದೆ. ನಿಮಗೆ ಕನ್ನಡ ನಗೆ ಸಾಹಿತ್ಯದಲ್ಲಿ ಆಸಕ್ತಿಯಿದ್ದಲ್ಲಿ, ಅಪರಂಜಿಯನ್ನು ಅಗತ್ಯವಾಗಿ ಓದಿ. ನಿಮ್ಮ ಸಾಹಿತ್ಯ ಜ್ಞಾನ ಶ್ರೀಮಂತವಾದೀತು."

ಇದನ್ನು ಓದಿ, ಪರವಾಗಿಲ್ಲವೇ. ವಿಶ್ವವ್ಯಾಪಿಯಾಗಿರುವ ಛಾಟ್ ಜಿಪಿಟಿಗೆ ಅಪರಂಜಿಯ ಇರವು ತಿಳಿದಿರುವುದೇ ಆಶ್ಚರ್ಯದ ಸಂಗತಿಯಾಗಿರುವಾಗ, ಅದು ಇಷ್ಟೆಲ್ಲಾ ಮಾಹಿತಿ ಸಂಗ್ರಹಿಸಿರುವುದನ್ನು ನೋಡಿ ನನ್ನ ಮನಸ್ಸು ಈ ಪರಂಪರೆಯ ಪ್ರಾರಂಭದ ದಿನಗಳ ಕಡೆ ತಿರುಗಿತು.


1942ರಲ್ಲಿ ಕೊರವಂಜಿ ಬಿತ್ತಿ ಬೆಳೆಸಿದ ಕನ್ನಡ ನಗೆ ಸಂಸ್ಕೃತಿ, ಈಗ ಅಪರಂಜಿಯಾಗಿ ರೂಪಾಂತರ ಹೊಂದಿ ಮುಕ್ಕಾಲು ಶತಮಾನಗಳಷ್ಟು ಕಾಲ ಜನತೆಯಲ್ಲಿ ನಗೆ ಮನೋಭಾವವನ್ನು ಉಳಿಸಿ ಪೋಷಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಎರಡನೇ ಮಹಾಯುದ್ಧದ ನೆರಳಿನಲ್ಲಿ ಕೊರವಂಜಿಯ ಜನ್ಮ. ಕೊರವಂಜಿಯ ಹುಟ್ಟಿಗೆ ಕಾರಣವನ್ನು ತಿಳಿಸುತ್ತ ರಾಶಿಯವರು ಮೊದಲ ಸಂಚಿಕೆಯ ಸಂಪಾದಕೀಯದಲ್ಲಿ ಹೀಗೆ ಬರೆಯುತ್ತಾರೆ.

"ಸಕಲವೂ ತಗ್ಗಾದ ಸಂಗ್ರಾಮಕಾಲದಲ್ಲಿ, ಮಾಸ ಪತ್ರಿಕೆಯು ಹೊರಬೀಳುತ್ತಿರುವುದು ಕೆಚ್ಚಿನ ಕೆಲಸ. ಅಲ್ಲವೇ ಹುಚ್ಚರ ಕೆಲಸ. ಜನರೆಲ್ಲರೂ ಕಳವಳಪಡುತ್ತಿರುವಾಗ ಕಷ್ಟಗಳನ್ನನುಭವಿಸುತ್ತಿರುವಾಗ ಹಾಸ್ಯದ ಅವಶ್ಯಕತೆ ಹೆಚ್ಚು. ಹಾಗಾಗಿ ಈಗ ಕೊರವಂಜಿ ಹೊರಟಿದೆ. ಕೊರವಂಜಿ ಕನ್ನಡಿಗರ ಮಗು. ಅದಕ್ಕೆ ಸಾಕಷ್ಟು ಚೈತನ್ಯವಿದ್ದರೆ, ಕನ್ನಡಿಗರ ಆದರ ಪ್ರೇಮಗಳು ಸಾಕಷ್ಟು ದೊರೆತರೆ ಅದು ಬೆಳೆದು ವೃದ್ಧಿಯಾದೀತು"

ಈ ಕಾಯಕದಲ್ಲಿ ಕೈ ಜೋಡಿಸಿ, ತಮ್ಮದೇ ಆದ ಸೃಜನಶೀಲತೆಯನ್ನು ಮೆರೆಸಿದವರು, ಅಸಂಖ್ಯಾತ ಲೇಖಕ ಬಳಗ. ಕೊರವಂಜಿಯ ಮೊದಲ ದಿನಗಳಲ್ಲಿ, ನಾ ಕಸ್ತೂರಿ, ಆರ್.ಕೆ.ಲಕ್ಷ್ಮಣ್, ಜಿ.ಪಿ.ರಾಜರತ್ನಂ, ಶ್ರೀರಂಗ, ಸುನಂದಮ್ಮ ಮತ್ತಿತರರು ರಾ.ಶಿ. ರವರ ಈ ಪ್ರಯತ್ನಕ್ಕೆ ಸಹಕರಿಸಿ ತಮ್ಮ ಪ್ರತಿಭಾನ್ವಿತ ಬರಹಗಳಿಂದ ಕೊರವಂಜಿಯ ನಗೆ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದರು.


ನನ್ನ ಬಾಲ್ಯದ ದಿನಗಳಲ್ಲಿ ನಮ್ಮ ಮನೆಗೆ ಆಗಾಗ ಬರುತ್ತಿದ್ದ ಈ ಎಲ್ಲ ಲೇಖಕರ

ಮಾತುಕತೆ, ನಡವಳಿಕೆ ನನಗೆ ಪರಿಚಯವಾಗತೊಡಗಿತು. ಕೈಲಾಸಮ್ ರವರಂತೂ ನಮ್ಮ ಮನೆಯಲ್ಲೇ ಸ್ವಲ್ಪಕಾಲ ನೆಲೆಸಿದ್ದರು. ಕೊರವಂಜಿಯ ಮೊದಲ ದಿನಗಳಲ್ಲಿ ನಮ್ಮ ಮನೆಯಲ್ಲಿನ ಸಾಹಿತ್ಯಕ ಪರಿಸರದ ಸೊಗಡನ್ನು ಈಗಿನ ಪೀಳಿಗೆಯ ಓದುಗರಿಗೆ ಪರಿಚಯಿಸಬಾರದೇಕೆ ? ಎಂದು ಗೆಳೆಯ ರಾಮನಾಥ್ ಒಮ್ಮೆ ನನ್ನನ್ನು ಪ್ರಶ್ನಿಸಿದ್ದರು. ಯುದ್ಧ ನಡೆಯುತ್ತಿದ್ದ ಆ ಪ್ರಕ್ಷುಬ್ಧ ದಿನಗಳಲ್ಲಿ, ಹಾಸ್ಯ ಮನೋಭಾವವನ್ನು ಜೀವಂತವಾಗಿ ಉಳಿಸಿಕೊಂಡು ಬಂದ ಆ ಮಹನೀಯರುಗಳ ಬಗ್ಗೆ ನನಗೆ ತಿಳಿದಿರುವುದನ್ನು ಇಂದಿನ ಓದುಗರೊಂದಿಗೆ ಒಂದು ಲೇಖನ ಮಾಲೆಯ ಮೂಲಕ ಹಂಚಿಕೊಳ್ಳುವ ಬಗ್ಗೆ ನಮ್ಮ ಉಪ ಸಂಪಾದಕ ಬೇಲೂರರನ್ನು ಕೇಳಿದೆ. ಅವರು ತುಂಬು ಮನಸ್ಸಿನಿಂದ ನನ್ನ ಅಭಿಪ್ರಾಯವನ್ನು ಅನುಮೋದಿಸಿದರು. ಕೊರವಂಜಿಯ ಬರಹಗಾರರಷ್ಟೇ ಅಲ್ಲದೆ, ಅಪರಂಜಿಯ ಪ್ರಾರಂಭದ ದಿನಗಳಲ್ಲಿನ ಲೇಖಕರುಗಳಾದ ಎಂ.ಎಸ್.ಕೆ.ಪ್ರಭು, ಬಾಗೂರು ಚಂದ್ರು, ಶ್ರೀನಿವಾಸ ವೈದ್ಯ ಕಮಲಾ ರಾಮಸ್ವಾಮಿ ಮತ್ತಿತರರ ಕೊಡುಗೆಗಳನ್ನೂ ಸಹಾ ನಿಮ್ಮ ಸರಣಿಯಲ್ಲಿ ದಾಖಲಿಸಿದರೆ ಚೆನ್ನ ಎಂದೂ ಸಲಹೆ ನೀಡಿದರು. ಈ ಸಂಚಿಕೆಯಲ್ಲಿನ ಪ್ರಾರಂಭದ ಲೇಖನದಲ್ಲಿ ಜಿ.ಪಿ.ರಾಜರತ್ನಮ್ ಅವರೊಂದಿಗಿನ ನನ್ನ ಅನುಭವಗಳನ್ನು ದಾಖಲಿಸಿರುವೆ. ಲೇಖನ ನಿಮಗೆ ಮುದ ನೀಡಲೆಂದು ಹಾರೈಸುವೆ. ■



# ಜಿ.ಪಿ.ರಾಜರತ್ನಂ

ಶಿವಕುಮಾರ್



ಆಗ ನಾನು ಹತ್ತು ವರ್ಷದ ಹುಡುಗ. ಪರೀಕ್ಷೆಗಳು ಮುಗಿದು ಬೇಸಗೆ ರಜ ಶುರುವಾಗಿತ್ತು. ಬುಗುರಿ ಆಡಿಸುವುದಕ್ಕೆ ನನ್ನ ಬಳಿ ಹೊಸೆದ ಚಾಟಿ ಇರಲಿಲ್ಲ. ಮನೆಯ ಆಳು ನಿಂಗ ನಮಗೆಲ್ಲಾ ಚಾಟಿ ಸಪ್ಲೈಯರ್. ಹಾಗಾಗಿ ಬೆಳಗ್ಗೆ ಎದ್ದ ತಕ್ಷಣ ಮುಖವನ್ನೂ ತೊಳೆದುಕೊಳ್ಳದೆ ಮನೆಯ ತೋಟದಲ್ಲಿ ಕೆಲಸಮಾಡುತ್ತಿದ್ದ ನಿಂಗನ ಬಳಿ ಓಡಿದೆ. ಅವನು ಎರಡು ಎಳೆ ದಪ್ಪ ದಾರಗಳನ್ನು ತೆಗೆದುಕೊಂಡು ತನ್ನ ತೊಡೆಯ ಮೇಲೆ ಸಮಾನಾಂತರವಾಗಿ ಜೋಡಿಸಿ ಹೊಸೆಯಲು ಪ್ರಾರಂಭಿಸಿದ. ಚೆನ್ನಾಗಿ ಸುರುಳಿಬಂದ ಚಾಟಿ ಕ್ರಮೇಣ ರೂಪುಗೊಳ್ಳಹತ್ತಿತು. ಅಷ್ಟುಹೊತ್ತಿಗೆ ಹೊರಗಿನ ಗೇಟು ತೆರೆದ ಸದ್ದಾಯಿತು. ಶುಭ್ರವಾದ ಖಾದಿ ಪಂಚೆ, ಖಾದಿ ಜುಬ್ಬಾ ಧರಿಸಿ, ಕೈಯ್ಯಲ್ಲಿ ಕೆಲವು ಪುಸ್ತಕಗಳನ್ನು ಹಿಡಿದಿದ್ದ ಮಧ್ಯವಯಸ್ಕರೊಬ್ಬರು ಗೇಟನ್ನು ದಾಟಿ ಒಳಗೆ ಬಂದು, ಮೆಟ್ಟಲು ಹತ್ತಿ ಮನೆಯೊಳಗೆ ಹೋದರು. ಅವರು ಯಾರೆಂದು ನಾನು ನಿಂಗನನ್ನು ಕೇಳಿದೆ.

"ಅವ್ರು ಯಜಮಾನ್ರ ಫ್ರೆಂಡ್ಸು. ರಾಜಾರತ್ನಂ ಅಂತ್ಲೋ ಏನೋ ಅವ್ರ ಹೆಸ್ರು" ಅಂದ ನಿಂಗ. ತಕ್ಷಣ ನನಗೆ ಅವರ ಬಗ್ಗೆ ಅತೀವ ಭಕ್ತಿ ಭಾವ ಉಕ್ಕಿ, ಓಡಿ ಹೋಗಿ ಅವರ ಕಾಲಿಗೆ ಬಿದ್ದು ಗೌರವ ಸಲ್ಲಿಸುವ ಯೋಚನೆಯೊಂದು ಮನದಲ್ಲಿ ಹಾದುಹೋಯಿತು. ಅದನ್ನೇನು ಕಾರ್ಯರೂಪಕ್ಕೆ ತರಲಿಲ್ಲ ಅನ್ನಿ.

ಈ ಇಂಸ್ಟಂಟ್ ಭಕ್ತಿಗೆ ಒಂದು ಬಲವಾದ ಕಾರಣವಿತ್ತು. ಆಗ್ಗೆ ಸುಮಾರು ಎರಡು ವರ್ಷಗಳ ಹಿಂದಿನಿಂದ ನಾನು ನಮ್ಮ ತಂದೆ ರಾ.ಶಿ.ಯವರ  ಪುಸ್ತಕದ ಬೀರುವಿನಿಂದ ಪುಸ್ತಕಗಳನ್ನು ಕದ್ದು ಓದುವ ಪರಿಪಾಠ ಬೆಳೆಸಿಕೊಂಡಿದ್ದೆ. "ಓದು, ಓದು" ಅಂತ ನಮ್ಮ ತಾಯಿ ದುಂಬಾಲು ಬೀಳುತ್ತಿದ್ದುದರಿಂದ, ಹಾಗೂ ಪಠ್ಯ ಪುಸ್ತಕಗಳ ಬಗ್ಗೆ ತೀವ್ರ ಅನಾಸಕ್ತಿಯಿದ್ದುದರಿಂದ ನನಗೆ ಈ ಬಗೆಯ ಓದುವ ನಟನೆ ಅನಿವಾರ್ಯವಾಗಿತ್ತು. ಈ ಓದುವ ಪ್ರಕ್ರಿಯೆ ನಡೆದಿದ್ದಾಗ ಒಮ್ಮೆ ನನಗೆ "ರಾಬಿನ್ ಹುಡ್" ಎಂಬ ಪುಸ್ತಕ ಸಿಕ್ಕಿತ್ತು. ಷೆರ್ವುಡ್ ವನದಲ್ಲಿ ರಾಬ್ ಎಂಬ ಹುಡುಗ ಜಿಂಕೆಗಳ ಬೇಟೆಯಾಡುವ ಪ್ರಸಂಗದಿಂದ ಮೊದಲ ಅಧ್ಯಾಯ ಪ್ರಾರಂಭವಾಗಿತ್ತು. ಬಾಲಕರಿಗೆ ಸುಲಭವಾಗಿ ಅರ್ಥವಾಗುವಂತಿದ್ದ ಸರಳ ಶೈಲಿ . ಅತ್ಯಂತ ಆಸಕ್ತಿ ಮೂಡಿಸುವಂತಹ ಸಾಹಸದ ಕತೆ. ಆಟಪಾಠಗಳಿಗೆ ಪೂರ್ಣವಿರಾಮ ಕೊಟ್ಟು, ಒಂದೆರಡು ದಿನಗಳಲ್ಲಿ ಪುಸ್ತಕ ಓದಿ ಮುಗಿಸಿದೆ. ಲೇಖಕರ ಹೆಸರು ಜಿ.ಪಿ.ರಾಜರತ್ನಂ ಅಂತ ಇತ್ತು. ಸರಿ, ಇದೇ ಲೇಖಕರ ಇತರ ಪುಸ್ತಕಗಳನ್ನು ಹುಡುಕಿದೆ. ನನ್ನ ಅದೃಷ್ಟಕ್ಕೆ ನಮ್ಮ ತಂದೆಯವರ ಪುಸ್ತಕದ ಬೀರು, ಒಂದು ಚಿನ್ನದ ಗಣಿಯಾಗಿ ಪರಿಣಮಿಸಿತು. "ಆಲಿವರ್ ಟ್ವಿಸ್ಟ್", "ಮಕ್ಕಳ ಮಂಛೌಸನ್", "ವಿಲಿಯಂ ಟೆಲ್",  "ಶ್ರೀರಾಮಚಂದ್ರ", "ಗೌತಮ ಬುದ್ಧ" ಇವೇ ಮೊದಲಾಗಿ ಹತ್ತಾರು ಪುಸ್ತಕಗಳು ಓದಲು ದೊರಕಿದವು. ಒಂದಾದಮೇಲೊಂದರಂತೆ ಜ್ವರ ಬಂದವರ ಹಾಗೆ ಓದಿದೆ. ಬರೆದರೆ ಹೀಗೆ ಬರೆಯಬೇಕು. ಲೇಖಕರೆಂದರೆ ರಾಜರತ್ನಂ ಎಂಬ ನಂಬಿಕೆ ಮೊಳೆತು ಬೆಳೆಯಿತು.

"ಚಾಟಿ ಪ್ರಸಂಗ" ನಡೆದು ಸುಮಾರು ಎರಡು ವಾರಗಳಾಗಿರಬಹುದು. ಬೆಳಗ್ಗೆ ತಿಂಡಿ ತಿನ್ನುತ್ತಿದ್ದಾಗ ನಮ್ಮ ತಂದೆ ನನ್ನನ್ನು ಕರೆದರು. ಈ "ಕರೆಯುವಿಕೆ", ಪುತ್ರವಾತ್ಸಲ್ಯದಿಂದ ಅಪ್ಪ ಮಗನನ್ನು ಕರೆಯುವ ರೀತಿಯದ್ದಲ್ಲ. ತಪ್ಪಿತಸ್ಥ ಖೈದಿಯೊಬ್ಬನನ್ನು ರಾಜ ದರ್ಬಾರಿಗೆ ವಿಚಾರಣೆಗೆ ಕರೆಸುತ್ತಿದ್ದ ವೈಖರಿಯನ್ನು ಹೋಲುತ್ತಿತ್ತು. ನಾನು ಹೆದರುತ್ತಲೇ ಡ್ರಾಯಿಂಗ್ ರೂಮಿಗೆ ಹೋದೆ. ಅಲ್ಲಿ ನಮ್ಮ ತಂದೆಯವರೊಡನೆ ರಾಜರತ್ನಂ ಮಸಾಲೆ ದೋಸೆ ತಿನ್ನುತ್ತಾ ಕುಳಿತಿದ್ದರು. ಅವರುಗಳ ಜೊತೆ ನಮ್ಮ ತಂದೆಯ ಇನ್ನೊಬ್ಬ ಮಿತ್ರ ವರದನ್.

"ಇವರೇ ರಾಜರತ್ನಂ. ನಮಸ್ಕಾರ ಮಾಡು." ರಾಜಾಜ್ಞೆ, ಮಾಡಿದೆ.

"ನಿನಗೆ ಒಂದು ಪುಸ್ತಕ ಪ್ರೆಸೆಂಟ್ ಮಾಡ್ತಾರಂತೆ. ಸುಮ್ನೆ ತಗೊಂಡು ಹೋಗಿ ಬೀರೂಲಿಟ್ಟು ಪೂಜೆ ಮಾಡ್ತೀ ತಾನೆ?"

ಇದು ಸರ್ಕಾಸಮ್ ಅಂತ ನನಗೆ ಒಡನೆಯೇ ಗೊತ್ತಾಯಿತು.

"ಇಲ್ಲ. ಅವರ ಪುಸ್ತಕ ಎಲ್ಲಾ ನನಗೆ ತುಂಬಾ ಇಷ್ಟ"

ರಾಜರತ್ನಂ ನನ್ನ ಹೆಸರು ಬರೆದಿದ್ದ ಪುಸ್ತಕವೊಂದನ್ನು ವಿಶ್ವಾಸದಿಂದ ಕೊಟ್ಟರು. ಪುಸ್ತಕ, "ನಾಳೀಜಂಘ" ಎಂಬ ಸಣ್ಣ ಕತೆಗಳ ಸಂಕಲನ. ನನಗೋ ಅಫಿಷಿಯಲ್ಲಾಗಿ ಅತ್ಯಂತ ಪ್ರಿಯವಾದ ಕೆಲಸವನ್ನು ಮಾಡುವಂತಾಯಿತಲ್ಲಾ ಎಂಬ ಖುಷಿ. ನಾಳೀಜಂಘ, ಪಲಿತ ಎಂಬ ಇಲಿ, ಸತ್ತು ಬದುಕಿದ ಬಾಲಕ, ಇವೇ ಮೊದಲಾಗಿ ಎಲ್ಲ ಕತೆಗಳನ್ನೂ ಒಂದೇ ಉಸಿರಿನಲ್ಲಿ ಓದಿ ಮುಗಿಸಿದೆ.

ರಾಜರತ್ನಂ ಅವರು ಬೌದ್ಧ ಧರ್ಮವನ್ನು ಕುರಿತು ಬರೆದಿರುವ ಪುಸ್ತಕಗಳಿಗೆ ಒಂದು ಸ್ವಾರಸ್ಯವಾದ ಹಿನ್ನೆಲೆಯಿದೆ. ಇದನ್ನು ರಾಜರತ್ನಂ ಅವರೇ ತಮ್ಮ "ಹತ್ತು ವರುಷ" ಎಂಬ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ. ವಿದ್ಯಾರ್ಥಿ ದೆಸೆ ಮುಗಿಸಿ, ರತ್ನ ಕೆಲಸಕ್ಕಾಗಿ ಅಲೆದಾಡುತ್ತಿದ್ದಾಗ, ಮೈಸೂರಿನಲ್ಲಿ ಸೆನ್ಸಸ್ ಸಾರ್ಟರ್ ಕೆಲಸಕ್ಕೆ ಅರ್ಜಿಗಳನ್ನು ಸ್ವೀಕರಿಸುತ್ತಿರುವುದು ತಿಳಿದುಬಂತು. ರತ್ನನೂ ಅರ್ಜಿ ಗುಜರಾಯಿಸಿದ. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಆಗ ಸೆನ್ಸಸ್ ಕಮಿಷನರ್. ಕೆಲಸವನ್ನು ಖಚಿತಮಾಡಿಕೊಳ್ಳುವ ಉದ್ದೇಶದಿಂದ ರತ್ನ ಮಾಸ್ತಿಯವರನ್ನು ನೋಡಲು ಹೋದ. ಅಷ್ಟು ಹೊತ್ತಿಗಾಗಲೇ ಸಾಹಿತಿಯೆಂದು ಹೆಸರು ಗಳಿಸಿದ್ದ ರತ್ನನಿಗೆ ಮಾಸ್ತಿಯವರ ಪರಿಚಯ ಸ್ವಲ್ಪ ಮಟ್ಟಿಗೆ ಇತ್ತು. ರತ್ನ ಬಂದಿದ್ದನ್ನು ನೋಡಿ ಮಾಸ್ತಿಯವರು, "ನೀವು ಈ ಇಪ್ಪತ್ತೈದು ರೂಪಾಯಿ ಸಾರ್ಟರ್ ಕೆಲಸಕ್ಕೆ ಸೇರುವುದಕ್ಕಿಂತ ಒಂದುಹೊತ್ತು ಊಟ ಮಾಡಿಕೊಂಡು ನಿಮ್ಮ ಬರವಣಿಗೆ ಬೆಳೆಸಿಕೊಳ್ಳಬಾರದೆ" ಎಂದರಂತೆ.

"ಒಂದು ಹೊತ್ತಿಗೆ ಊಟಮಾಡುವುದಕ್ಕೆ ಇದ್ದಿದ್ದರೆ, ಈ ಇಪ್ಪತ್ತೈದು ರೂಪಾಯಿಗೆ ಯಾರು ಸಾರ್ ಬರ್ತಾ ಇದ್ದರು?" ಎಂದನಂತೆ ರತ್ನ.

'ಶ್ರೀನಿವಾಸ' ರು ತಮ್ಮ ಸಹಜ ಸ್ಮಿತದಿಂದ "ಹಾಗಾದರೆ ಈ ಸಾರ್ಟರ್ ಕೆಲಸ ಆರು ತಿಂಗಳು ಮಾತ್ರ ನಡೆಯುತ್ತೆ. ಅದೇ ಇಪ್ಪತ್ತೈದು ರೂಪಾಯನ್ನು ನಾನು ನಿಮಗೆ ಆರು ತಿಂಗಳು ಕೊಟ್ಟರೆ ನಿಮ್ಮ ಬರವಣಿಗೆಯನ್ನು ಬರೆದುಕೊಂಡು ಹೋಗುತ್ತೀರಾ ?" ಎಂದರು. ರತ್ನ ದಮ್ಮಯ್ಯ ಎಂದು ಒಪ್ಪಿದ. ಮಾಸ್ತಿಯವರು ಫಾಹಿಯಾನನ ಯಾತ್ರೆಗಳನ್ನು ಭಾಷಾಂತರ ಮಾಡುವಂತೆ ರತ್ನನಿಗೆ ಪ್ರೇರೇಪಿಸಿದರು. ಮುಂದೆ ಈ ಲೇಖನಮಾಲೆ "ಚೀನಾ ದೇಶದ ಬೌದ್ಧ ಯಾತ್ರಿಕರು" ಎಂಬ ಹೆಸರಿನಿಂದ ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದ ಪ್ರಕಟಣೆಯಾಗಿ ಹೊರಬಂತು.

ನಾನು ಇಂಟರ್‌ಮೀಡಿಯಟ್ ಹಂತಕ್ಕೆ ಬಂದಾಗ ಸಂಸರ "ಬೆಟ್ಟದ ಅರಸು" ನಮಗೆ ಪಠ್ಯಪುಸ್ತಕವಾಗಿತ್ತು. ರಾಜರತ್ನಂ ಆಗ ಸೆಂಟ್ರಲ್ ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದರು. ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ರಾಜರತ್ನಂ ಪ್ರಜಾಮತದಲ್ಲಿ, "ಬೆಟ್ಟದ ಅರಸು" ಕುರಿತು ಒಂದು ವಿವರಣಾತ್ಮಕ ಲೇಖನಮಾಲೆಯನ್ನು ಬರೆದರು. ನಾನು ಇಂಟರ್ ಪರೀಕ್ಷೆ ಇದುರಿಸುತ್ತಿದ್ದುದನ್ನು ಅವರು ತಿಳಿದಿದ್ದರಿಂದ, ಒಂದು ಬೆಳಗ್ಗೆ ಅವರು ನಮ್ಮ ಮನೆಗೆ ಬಂದು, "ಪ್ರಜಾಮತದಲ್ಲಿ "ಬೆಟ್ಟದಅರಸು" ಮೇಲೆ ಬರೆದಿದ್ದೇನೆ. ಕೊಂಡು ಓದಿ "ಎಂದು ಹೇಳಿಹೋದರು. ವಿಚಿತ್ರವೆಂದರೆ ಅವರು ನನ್ನನಾಗಲೀ, ನಮ್ಮ ಅಕ್ಕಂದಿರನ್ನಾಗಲೀ, ಯಾವಾಗಲೂ ಬಹುವಚನದಲ್ಲಿಯೇ ಮಾತನಾಡಿಸುತ್ತಿದ್ದರು. ನಾನು ಪ್ರಜಾಮತ ಕೊಂಡು ಅವರ ಲೇಖನವನ್ನು ಓದಿ ಮುಖ್ಯ ಅಂಶಗಳನ್ನು ಅಂಡರ್‌ಲೈನ್ ಮಾಡಿ ಇಟ್ಟುಕೊಂಡೆ. ಮಾರನೆಯ ದಿನ ರಾಜರತ್ನಂ ಅವರು ಪುನಃ ನಮ್ಮ ಮನೆಗೆ ಬಂದು, ನಮ್ಮ ತಂದೆಯವರೊಡನೆ ಮಾತನಾಡುತ್ತಿದ್ದಾಗ, ಹಿಂದಿನ ದಿನ ನನಗೆ ಹೇಳಿದ್ದನ್ನು ನೆನಪಿಸಿಕೊಂಡು, ನನ್ನನ್ನು ಕರೆದು ಆ ಕುರಿತು ಕೇಳಿದರು. ನಾನು ಅವರಿಗೆ ಮುಖ್ಯ ಅಂಶಗಳನ್ನು ಗುರುತು ಮಾಡಿಟ್ಟಿದ್ದ ಅವರ ಲೇಖನವನ್ನು ತೋರಿಸಿದಾಗ ಅವರ ಸಂತಸ ಅಷ್ಟಿಷ್ಟಲ್ಲ. "ಸುಮ್ಮನೆ ಲೇಖನ ಓದಿದರೆ ಸಾಲದು. ಮನನ ಮಾಡಬೇಕು. ನೀವು ಆ ಕೆಲಸ ಮಾಡಿದ್ದೀರಿ ಎಂಬುದು ನನಗೆ ಸ್ಪಷ್ಟವಾಗಿದೆ." ಎಂದರು ರಾಜರತ್ನಂ.

ರಾ.ಶಿ. ಮತ್ತು ರಾಜರತ್ನಂ ಇವರುಗಳ ನಡುವಣ ಸ್ನೇಹ ಬಹು ಆಪ್ತವಾದದ್ದು. ಸಹಜವಾಗಿಯೇ ರಾಜರತ್ನಂ ಕೊರವಂಜಿಗೆ ಅನೇಕ ಲೇಖನಗಳನ್ನ ಹಾಗೂ ಕವನಗಳನ್ನು ಬರೆದರು. ಆ ಕಾಲಘಟ್ಟದಲ್ಲಿ ಪ್ರತಿದಿನ ಬೆಳಗ್ಗೆ ರಾಜರತ್ನಂ ನಮ್ಮ ಮನೆಗೆ ಬಂದು ತಮ್ಮ ಮಿತ್ರನೊಡನೆ ಹರಟೆ ಹೋಗುತ್ತಿದ್ದರು. ರಾಜರತ್ನಂ ಬುದ್ಧನ ಕುರಿತು ಕೊರವಂಜಿಗೆ ಬರೆದ ಒಂದು ಪದ್ಯವನ್ನು ಇಲ್ಲಿ ಉದ್ಧರಿಸಿರುವೆ.

**ಬುದ್ದ**

ಎಡ್ತಿ ಮೊಗೀನ್ ಬಿಟ್ಟು
ಸಿಂಮಾಸ್ನ ಬುಟ್ಬುಟ್ಟು
ಕಾಡ್ಗೋದೆ ನಮ್ಮಪ್ಪ ಬುದ್ದ
ಸಾಸ್ವತ ಸುಕಾ ಕಂಡಿ
ಒಳ್ಳೇ ಬೆಳಕಿನ್ ಕಂಡಿ
ನೀನಾದೆ ಲೋಕಕ್ಕೆ ಬುದ್ದ.

"ಆಡೋ ಮಾತ್ನಲ್ಲೂನೂ
ಮಾಡೋ ಕೆಲಸ್ದಲ್ಲೂನೂ
ಮನಸು ಮೊದಲಾಗಿರ್ಲಿ ಸುದ್ದ !"–
"ಇವತ್ ನಮ್ ಮನಸೆಂಗೊ
ನಾಳಿನ್ ಜೀವ್ನ ಅಂಗೆ" –
ಇಂತೋವೆ ನಿನ್ ಮಾತು ಬುದ್ದ !

ದರ್ಮದ್ ದಾರಿ ನಿಂದು
ನಮಿಗ್ಯಾಕೋ ತಕಲೀಪು
– ಇದ್ಕೇನ್ ಮಾಡಾದ್ಯೋಳು ಬುದ್ದ !
ನಿನ್ ಯೆಸರನ್ ಯೋಳ್ತೀವಿ
ನಾವ್ ಮಾಡಾದ್ ಮಾಡ್ತೀವಿ
ನೆಗಬೇಡ ನಮ್ಮಪ್ಪ ಬುದ್ದ !

"ಯೋಳ್ದೋ ಸಾವ್ರದೈನೂರು !"
–ನೆಪ್ಪಾದ್ರೂ ಐತಲ್ಲ
ಪರ್ಪಂಚ ಕೆಟ್ಟಿಲ್ಲ ಪೂರ್ತ
ನಿನ್ ಯೆಸರಿನ್ ಮಾತ್ವಾನ
ಮರಿಗಿರಿಯೋಕಾಗ್ದಿದ್ರೆ
ಲೋಕ ಬಾಳ್ತೈತಂತ್ಲೆ ಅರ್ತ !

ರಾಜರತ್ನಂ ಅವರಿಗೆ ಅರುವತ್ತು ತುಂಬಿದಾಗ ಎಲ್ಲ ಹಿರಿಯ ಕಿರಿಯ ಸಾಹಿತಿಗಳೂ

ಸೇರಿ ಒಂದು ಅದ್ದೂರಿ ಸಮಾರಂಭವನ್ನು ಏರ್ಪಡಿಸಿದ್ದರು. ಈ ಸಮಾರಂಭದಲ್ಲಿ ರಾಜರತ್ನಂ ಅವರಿಗೆ ಅರ್ಪಿಸುವುದಕ್ಕೋಸ್ಕರವಾಗಿಯೇ ರಾ.ಶಿ.ಅವರು ಒಂದು ಪುಸ್ತಕವನ್ನು ಬರೆದರು. ಹಳೆಯ ನೀತಿಯ ಕತೆಗಳಿಗೆ ಆಧುನಿಕ ಉಡುಗೆಯನ್ನು ತೊಡಿಸಿ ಸ್ವಾರಸ್ಯಮಯವಾಗಿ ಹೇಳುವ ಯತ್ನ, "ಇಂದಾನೊಂದು ಕಾಲದಲ್ಲಿ" ಎಂಬ ಆ ಪುಸ್ತಕ. ಇದರ ಒಳಪುಟದಲ್ಲಿ ರಾ.ಶಿ.ಯವರು, ರಾಜರತ್ನಂ ಕುರಿತು ಪುರುಷ ಸರಸ್ವತಿಯ ಶೈಲಿಯಲ್ಲಿ ಹೀಗೆ ಬರೆದಿದ್ದಾರೆ.

ರಾಜರತ್ನಂ ಜಿ. ಪಿ. ಎಂಬ
ಏಜು ಅರವತ್ತರ ಕನ್ನಡದ ಸರ್ವೆಂಟು
ಬಾರ್ಜು ಬುಕ್ಕುಗಳವಗೆ, ಬೀಯಿಂಗು ಬಿಕಮಿಂಗಕ್ಕು
ಕ್ರೇಜಿಯಾಗುವ ತನಕ ಫ್ರೆಂಡ್ಸರನೆ
ನ್ರೇಜಿಸವರ ಹ್ಯಾಂಡ್ಸಲ್ಲಿ ರೈಟಿಸುವನಿವನು
ಗಾರ್ಜಿಯಸ್ ವರ್ಕಿದು ಎಂಬೆ, ಬೆಸ್ಟು ಪರಿಚಾರಿಕೆಯು.

ಸಾರ್ಥಕ ಜೀವನವನ್ನು ನಡೆಸಿ, ಬೈಬಲ್ಲಿನಲ್ಲಿ ಹೇಳಿರುವಂತೆ ತ್ರೀ ಸ್ಕೋರ್ ಎಂಡ್ ಟೆನ್ ವರುಷಗಳ ಆಯುಷ್ಯವನ್ನು ಮುಗಿಸಿ ರಾಜರತ್ನಂ ಅನಾಯಾಸ ಮರಣವನ್ನು ಪಡೆದರು. ಅವರ ಸಾಹಿತ್ಯ, ಅವರ ಚಿಂತನೆ ಎಂದೆಂದಿಗೂ ಜೀವಂತ. ■

1. ಗುಂಡನಿಗೆ. ಅಂದು ಬೆಳಿಗ್ಗೆ..ಲೂಸ್ ಮೋಷನ್ ಆಗಿ..ಡಾಕ್ಟರ ಹತ್ರ ಹೋದ..ಔಷಧಿ ಕೊಟ್ಟು ಕಳಿಸಿ, ಎರಡು ದಿನಗಳಾದ ಮೇಲೆ ಬರಲು ತಿಳಿಸಿದ ಡಾಕ್ಟರು ಪುನಃ ಮಧ್ಯಾಹ್ನವೇ ಬಂದ ಗುಂಡನನ್ನು ಡಾಕ್ಟರ್ ಕೇಳಿದ್ರು ಈಗೇನಾಯ್ತಪ್ಪಾ?? ಅಂದ್ರು.. ಡಾಕ್ಟರೇ ನಂಗೆ ಒಂದು ಡೌಟ್ ಇತ್ತು, ನೆನ್ನೆ ರಾತ್ರಿ ತಿಂದ ಆ ತಿಂಡೀನೇ ಕಾರಣಾನಾ ಅಂತ ಚೆಕ್ ಮಾಡೋಕ್ಕೆ ಮತ್ತೆ ತಿಂದೆ..ಆದ್ರೆ ತಿರ್ಗಾ ಬೇಧಿ ಶುರುವಾಯ್ತು..ಅಂದ ಗುಂಡನ ಮಾತು ಕೇಳಿದ ಡಾಕ್ಟರು ಸುಸ್ತಾದ್ರು.ಅಲ್ಲಪ್ಪಾ ನಾನು ಬೇಧಿ ನಿಲ್ಲೋಕೆ ಮಾತ್ರೆ ಕೊಟ್ರೆ ನೀನು ಅದ್ಯಾವುದೋ ಬೇಡದ ಆಹಾರ ತಿಂದು ಇನ್ನೊಂದ್ಸರ್ತಿ ಬೇಧಿ ಮಾತ್ರೆ ತೊಗೊಂಡಿದೀಯಲ್ಲ..ಅಂತ ನಕ್ಕರು.

*****

**2. ಹೋಂ ಗಾಡ್..**

ಹೊಸದಾಗಿ ಗೆಳೆಯ ನಾಗಿದ್ದ..ಮಂಜನ್ನ ಗುಂಡ ಕೇಳಿದ..ಏ..ಮಂಜಾ ನಿಮ್ಮ ಹೋಂ ಗಾಡ್ ಯಾರೋ?? ಅರೆ ಕಿವುಡ ಮಂಜ ಅಂದ ನಮ್ಮಪ್ಪ ಹೋಂ ಗಾರ್ಡ್ ಕಣೋ..ನಿಂಗ್ಹೇಗೆ ಗೊತ್ತಾಯ್ತು..?? ಏ..ಅಲ್ಲಾ ಕಣೋ..ನಾವು ನೆನ್ನೆ ತಿರುಪತಿಗೆ ಹೋಗಿದ್ವಿ, ತಿಮ್ಮಪ್ಪ ನಮ್ಮ ಹೋಂ ಗಾಡ್ ಅಂದ್ರೆ ಮನೇ ದೇವ್ರು..

ಹಾಗೇ ನಿಮ್ಮ ಹೋಂ ಗಾಡ್ ನ ಬಗ್ಗೆ ಕೇಳಿದ್ದು.. ಅಂದಾಗ ಮಂಜ ಅಂದ..ಓ ಹೌದಾ ..ನಂಗೆ ಅರೆ ಕಿವುಡು, ಅದಕ್ಕೆ ಹಾಗಂದೆ, ನಮ್ಮ ಹೋಂ ಗಾಡ್ ಧರ್ಮ ಸ್ಥಳದ ಮಂಜುನಾಥ ಕಣೋ..ಅಂದ..ಅಲ್ಲ, ಅದ್ಸರಿ ಪ್ರತಿ ಮನೆಯ ಹೋಂ ಗಾರ್ಡ್ ಆಯಾ ಮನೆಯ ಅಪ್ಪಾನೇ, ಆದ್ರೆ ಈ ಪ್ರಪಂಚದ ಮನೆಯ ಹೋಂ ಗಾರ್ಡು ಆ ಭಗವಂತನೇ ತಾನೇ ಅಂತ ನಗ್ತಾ ಅಂದ ಗುಂಡ..

******

# ಅಬ್ಲುಕ್–ಅದೃಷ್ಟ ಮಚ್ಚೆಯಿದ್ದ ಕುದುರೆ

**ನರೇಂದ್ರ ಸುಂದರರಾವ್, ಗುರುಗ್ರಾಮ**

ನಮ್ಮ ಕುಟುಂಬ ಮೈಸೂರಿನ ಮುಖ್ಯ ಸಯಾಜಿರಾವ್ ರಸ್ತೆಯ ಪೂರ್ವದಿಕ್ಕಿನಲ್ಲಿರುವ ವಾಣಿವಿಲಾಸ್ ಮಾರುಕಟ್ಟೆ ಬಳಿ ವಾಸವಾಗಿದ್ದ ಸಮಯ, ಸುಮಾರು 1942 43ನೇ ವರ್ಷ. ಮನೆಯ ಮಾಲೀಕರು ಬಾಡಿಗೆಯನ್ನು ಬಹಳ ಹೆಚ್ಚಿಸಿದ್ದರಿಂದ ನಮ್ಮ ತಂದೆಯವರು ಬೇರೆ ಮನೆ ಹುಡುಕುತ್ತಿದ್ದರು. ಆದರೆ

ಊರಿನ ಒಳಗೆ ತಂದೆಯವರ ಬಜೆಟ್ಟಿನಲ್ಲಿ ಮನೆ ಸಿಗುವುದು ಕಷ್ಟವಾಗಿತ್ತು. ಸಮಯಕ್ಕೆ ಸರಿಯಾಗಿ ತಂದೆಯವರ ಶ್ರೀಮಂತ ಅಣ್ಣ (ಬಕ್ಷಿ ನರಸಪ್ಪವರ ದತ್ತು ಪುತ್ರ) ತಮ್ಮ ವಶದಲ್ಲಿದ್ದ ಮನೆಯನ್ನು ಕೇವಲ ಹನ್ನೆರಡು ರೂಪಾಯಿ ಬಾಡಿಗೆಗೆ ಕೊಡಲು ಮುಂದೆ ಬಂದರು. ಬಾಡಿಗೆ ತಂದೆಯ ಬಜೆಟ್ಟಿನಲ್ಲಿದ್ದರೂ, ಈ ಮನೆ ಮೈಸೂರಿನಿಂದ ದೂರದ ಕೊಂಪೆಯಾದ ನಜರ್ಬಾದ್ ಮೊಹಲ್ಲಾದಲ್ಲಿತ್ತು. ಭೂತದ ಮನೆಯೆಂದು ಖ್ಯಾತಿ ಪಡೆದಿದ್ದ ಈ ದೊಡ್ಡ ಬಂಗಲೆ ಮನೆ ಹಲವಾರು ದಶಕಗಳಿಂದ ಯಾರೂ ವಾಸಿಸದ ಶಿಥಿಲವಾದ ಮನೆ. ನಮ್ಮ ತಂದೆಯವರು ಈ ಮನೆಯನ್ನು ನೋಡಿಯೂ ಇರಲಿಲ್ಲ. ಈ ಒಂಟಿ ಬಂಗಲೆಗೆ ಕಾಲಿಟ್ಟಮೇಲೆ ತಿಳಿದ ವಿಷಯವೆಂದರೆ ಬಂಗಲೆ ರಾಜಮನೆತನದ ಪಾಳೇಗಾರರು ಕಟ್ಟಿಸಿದ್ದ ಮನೆಯೆಂದೂ, ಮನೆಯ ಹಿಂದಣ ದೊಡ್ಡ ಕೊಳದಲ್ಲಿ ಹಲವಾರು ಮಹಿಳೆಯರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದರೆಂದು ಗುಸು ಗುಸು ಮಾತು. ವಾಸದ ಮನೆಯ ಸಮಸ್ಯೆಯೇನೋ ಕಳೆಯಿತು, ಆದರೆ ತಂದೆಯವರು ಲಾಯರು, ಅವರ ಕೋರ್ಟು ಕಚೇರಿಗಳು ಮೈಸೂರಿನ ಇನ್ನೊಂದು ಮೂಲೆಯಾದ ಜಯನಗರದಲ್ಲಿದ್ದವು. ನನ್ನ ದೊಡ್ಡಕ್ಕನ ಕಾಲೇಜು ಒಂಟಿಕೊಪ್ಪಲಿನ ಚೆಲುವಾಂಬ ಅರಮನೆಯಲ್ಲಿ (ಈಗಿನ ಸಿ ಎಫ್ ಟಿ ಆರ್ ಐ) ಈಗಿನಂತೆ ಬಸ್ಸಿನ ಸೌಕರ್ಯವಿರಲಿಲ್ಲ. ಖಾಸಗಿ ಉದ್ಯಮಿ ಸಿ.ಪೆರುಮಾಲ್ ಚೆಟ್ಟಿ ಸಿಪಿಸಿ ಬಸ್ ಸರ್ವಿಸ್ ಬಸ್ಸುಗಳು ಘಂಟೆಗೆ ಒಮ್ಮೆ ದೇವರಾಜ ಮಾರುಕಟ್ಟೆಯಿಂದ ಓಡುತ್ತಿದ್ದ ಕಾಲ. ಕುದುರೆಗಾಡಿಗಳೂ ಸಹ ಹೆಚ್ಚಾಗಿ ಇರಲಿಲ್ಲ. ಹೆಚ್ಚಿನ ಬಾಡಿಗೆ ಕೊಟ್ಟರೂ, ನಜರಬಾದಿಗೆ ಬರಲು ಹಿಂದು ಮುಂದು. ವಯಸ್ಸಿಗೆ ಬಂದಿದ್ದ ಮಗಳು ಕಾಲೇಜಿಗೆ ಒಂಟಿಯಾಗಿ ನಡೆದುಕೊಂಡು ಹೋಗುವುದು ಸರಿಯೆನಿಸದೆ ನಮ್ಮ ತಂದೆ–ತಾಯಿ ಪೇಚಾಟದಲ್ಲಿದ್ದರು.

ಈ ತಂದೆಯವರು ಪರಿಚಿತನಾದ ಕೆಂಪನಂಜಪ್ಪನ ಬಳಿ ತಮ್ಮ ಕಳವಳವನ್ನು ತೋಡಿಕೊಂಡರು. ಈ ಕೆಂಪನಂಜ ಹಳ್ಳಿಗರಿಗೆ ಕೋರ್ಟು ಕಚೇರಿಯಲ್ಲಿ ಕೆಲಸಕ್ಕೆ ಸಹಾಯ ಮಾಡುವ ಮಧ್ಯಸ್ಥಗಾರ, ಪಕ್ಕ ದಳ್ಳಾಳಿ. ಎಲ್ಲ ಕಡೆಯಿಂದಲೂ ಕಮಿಷನ್ ಪಡೆಯುತ್ತಿದ್ದ ಖಿಲಾಡಿ. ಲಾಯರ ಸಮಸ್ಯೆಯನ್ನು ಕೇಳುತ್ತಿದ್ದಂತೆಯೇ, ಕೆಂಪನಂಜ "ರಾಯರೇ, ಯೋಚನೆ ಯಾಕೆ, ನಿಮ್ಮ ಆಫೀಸಿನ ಹತ್ತಿರವೇ ದೇವರಾಜ ಮಾರ್ಕೆಟ್ಟಿದೆ. ಅದರ ಮುಂದೆ ಹಲವಾರು ಜಟಕಾ ಗಾಡಿಗಳು ಬಾಡಿಗೆ ಕಾದು ನಿಂತಿರುತ್ತೆ. ನೀವ್ಯಾಕೆ ಒಂದು ಜಟಕಾ 'ಶಾಹ್ ಪಸಂದ್'" ಗಾಡಿ ಖರೀದಿ ಮಾಡಬಾರದು ?. ನೀವುಗಳೂ ಉಪಯೋಗಿಸಬಹುದು, ಹಾಗೆಯೇ ಬಾಡಿಗೆಗೂ ಬಿಡಬಹುದು. ಅದರಿಂದ ಕುದುರೆಯ ಖರ್ಚು, ಗಾಡಿ ನಡೆಸುವನ ಖರ್ಚು ಬಂದುಬಿಡುತ್ತದೆ. ಕೆಂಪನಂಜನ ಸಲಹೆ ರಾಯರಿಗೆ ಸರಿಯೆಣಿಸಿ 'ಹೌದಲ್ಲವೇ' ಎಂದರು. ಒಳ್ಳೆಯ ಬೆಲೆಯಲ್ಲಿ ಕುದುರೆ ಗಾಡಿಯನ್ನು ಹುಡುಕಿಕೊಡುವುದಾಗಿ ಕೆಂಪನಂಜ ಮುಂದೆ ಬಂದ. ಖರೀದಿಗೆ ನೂರಾರು ರೂಪಾಯಿಗಳನ್ನು ಹೊಂದಿಸುವ ಆಫೀಸಿನ ಕೆಂಪನಂಜ ಯೋಚನೆಯಲ್ಲಿದ್ದಾಗ ರಾಯರೇ, ಯೋಚನೆ ಯಾಕೆ, ಅಲ್ಪಸ್ವಲ್ಪ ಬೆಳ್ಳಿ ,ಬಂಗಾರ ಅಡವಿಟ್ಟು ಐನೂರೋ ಆರು ನೂರೋ

ರೂಪಾಯಿ ಸಾಲ ತೆಗೆದುಕೊಂಡರಾಯಿತು. ಗಾಡಿ ಬಾಡಿಗೆಯಿಂದ ಸಾಲ ತೀರಿಸಿದರಾಯಿತು ಅಂತ ಸಲಹೆ ನೀಡಿದ ನಮ್ಮ ತಂದೆಗೆ ಜಟಕಾ ಗಾಡಿಯಲ್ಲಿ ಚೌಕಾಸಿ ಮಾಡಿ ನಾಲ್ಕು ಆಣೆ, ಆರು ಆಣೆ ಬಾಡಿಗೆ ಕೊಟ್ಟು ಪ್ರಯಾಣಮಾಡಿದ ಪರಿಚಯವಿತ್ತೇ ಹೊರತೂ, ಕುದುರೆ ಮತ್ತು ಗಾಡಿಯ ಮಾಲೀಕರಾಗಿರುವ ಯಾವ ಅನುಭವವೂ ಇರಲಿಲ್ಲ. ಸ್ವಲ್ಪ ದಿನಗಳ ನಂತರ ಕೆಂಪನಂಜ ಬಂದು 'ರಾಯರೆ, ಬಹಳ. ಹುಡುಕಿ ಒಂದು ಒಳ್ಳೆಯ ಕುದುರೆ ಗಾಡಿ ನೋಡಿದ್ದೇನೆ. ಚೆನ್ನಾಗಿ ಚೌಕಾಸಿ ಮಾಡಿದರೆ, ಒಳ್ಳೆ ಬೆಲೆಗೆ ಗಾಡಿಯನ್ನು ಹೊಡೆದುಕೊಳ್ಳಬಹುದು. ಕುದುರೆಗಾಡಿ ಮಾಲೀಕರನ್ನು ಕಂಡಾಗ ನೀವು ಕುದುರೆಗಾಡಿಯನ್ನು ಕೊಳ್ಳಲು ಹೆಚ್ಚಿನ ಆಸಕ್ತಿ ತೋರಿಸಬೇಡಿ, ಬಾಕಿ ವಿಚಾರ ನಾನು ನೋಡಿಕೊಳ್ಳುವೆ ಎಂದ.

ಕೆಂಪನಂಜ ಹೆಚ್ಚಾಗಿ ಮುಸ್ಲಿಂ ಜನ ವಾಸಿಸುತ್ತಿದ್ದ ಮಂಡಿ ಮೊಹಲ್ಲಾದ ಗಲ್ಲಿಯ ಓಣಿಯ ಮನೆಗೆ ತಂದೆಯವರನ್ನು ಕರೆದುಕೊಂಡು ಹೋದ. ಸಣ್ಣ ಓಣಿ. ಪುಟ್ಟ ಪುಟ್ಟ ಮನೆಗಳು, ಜನಜಂಗುಳಿ, ಎಲ್ಲಿ ನೋಡಿದರೂ ಕೊಳಕು. ಒಂದು ಕಿರುತೆರೆದ ಬಾಗಿಲಿನ ಮುಂದೆ ನಿಂತು ಕೆಂಪನಂಜ ಸಾಹೇಬ್ರೆ, ರಾಯರು ಬಂದಿದ್ದಾರೆ, ಬನ್ನಿ' ಎಂದು ಕೂಗಿದ. 'ಸಲಾಂ, ನಮಸ್ಕಾರ ದೊಡ್ಡವರು ತಾವು, ಗರೀಬ್ ಮನೆಗೆ ಬಂದಿದ್ದೀರಿ, ಕುಂತಕೊಳ್ಳಿ, ಎಂದು ಹೇಳಿ ಅಲ್ಲಿಯೇ ಇದ್ದ ಮುರುಕಲು ಕುರ್ಚಿಯನ್ನು ರಾಯರ ಮುಂದಿಟ್ಟ. ರಾಯರು ಮುಜುಗರದಿಂದ ಆಕಡೆ ಈಕಡೆ ಕಣ್ಣು ಹಾಯಿಸಿದರು. ಹತ್ತಿರದಲ್ಲಿ ಕುದುರೆಯಾಗಲೀ, ಶಾಹ್ ಪಸಂದ್ ಗಾಡಿಯಾಗಲೀ ಕಾಣಿಸಲಿಲ್ಲ. ಮುಸ್ಲಿಂ ಮಾಲೀಕ 'ಸಾಹೇಬ್ರೆ, ಗಾಡಿ ಷಾಪಸಂದ್, ಅರಸು ಮನೆಗಳಿಗೆ ಇದೇ ತರಹದ ಗಾಡಿ ಕೊಡಿಸಿದ್ದೀನಿ. ಇಲ್ಲಿ ಗಾಡಿ ಇಟ್ಟರೆ ಜನ ಗಲೀಜು ಮಾಡ್ತಾರೆ. ಬನ್ನಿ, ಸ್ವಲ್ಪ ನಡೀಬೇಕು, ಎರಡನೇ ಗಲ್ಲೀಲಿ ನಂಬರ್ ಒನ್ ಗಾಡಿ, ಪಕ್ಕ ಶಾಹ್ ಪಸಂದ್, ನೋಡ್ತಿರಿ ಅಂದು ನಮ್ಮನ್ನು ಕರೆದುಕೊಂಡು ಹೋದ.




ಸುತ್ತಿ ಬಳಸಿ ಗಾಡಿ ನಿಲ್ಲಿಸಿದ್ದ ಗಲ್ಲಿಗೆ ಪ್ರವೇಶ ಮಾಡುತ್ತಲೇ, ಶಾಹ್ ಪಸಂದ್ ಕಣ್ಣಿಗೆ ಬಿದ್ದಿತು. ಹೊಸದಾಗಿ ಬಣ್ಣ ಹೊಡೆಸಿದ್ದ ಟಾಂಗಾ ಅದರ ಮುಂದಿನ ಕಮಾನಿನ ಎರಡು ಪಕ್ಕದಲ್ಲಿಯೂ ಹಿತ್ತಾಳೆಯ ದೀಪಗಳು, ಗಾಡಿಯ ಒಳಗೆ ಕನ್ನಡಿಗಳು ಬಿಸಿಲಿನಲ್ಲಿ ಮಿಂಚುತ್ತಿದ್ದವು. ರಾಯರು ಗಾಡಿಗೆ ಎರಡು ಮೂರು ಪ್ರದಕ್ಷಿಣೆ ಹಾಕಿ, ಗಾಡಿಯನ್ನು ಮುಟ್ಟಿ ನೋಡಿ, ಗಾಡಿಯ ಸೀಟುಗಳು ಮೆತ್ತಗಿವೆಯೆಂದು ಗುದ್ದಿ ನೋಡಿ, ಎಲ್ಲವೂ ಸರಿಯಾಗಿದೆಯೆಂದು ಖಚಿತಪಡಿಸಿಕೊಂಡರು. ರಾಯರ ಹಿಂದೆಯೇ ಇದ್ದ ಕೆಂಪನಂಜ ರಾಯರ ಕಿವಿಯಲ್ಲಿ ಊದಿದ 'ತಾವು ಮಾತನಾಡಬೇಡಿ. ಸ್ವಲ್ಪ ಬೇಸರ ತೋರಿಸಿ'.

ಸಾಹೇಬ 'ರಾಯರು ಖಾಸಾ ಬಂದಿದ್ದೀರಿ, ನಿಮ್ದುಕೆ ಅಂತ ಒಳ್ಳೆ ಬೆಲೆ ಹೇಳ್ತಾ ಇದ್ದೀನಿ, ಬೇರೆಯವರು ಕೇಳಿದರೆ ಅಲಗ್ ಬೆಲೆ, ಸಿರ್ಫ್ ಮುನ್ನೂರ ಐವತ್ತು' ಅಂದ. ಅಷ್ಟರಲ್ಲಿಯೇ ಕೆಂಪನಂಜ ಮುಂದೆ ಬಂದು 'ಸಾಹೇಬ್ರೆ ಇಲ್ಲಿ ಬನ್ನಿ ಎಂದು ಹೇಳಿ ಕರೆದುಕೊಂಡು ಹೋದ. ಅವರುಗಳಲ್ಲಿ ಪಿಸುಮಾತು ಷುರುವಾಯಿತು. ಮತ್ತೆ ರಾಯರ

ಬಳಿ ಬಂದು ಪಿಸುಮಾತು. ಕೊನೆಗೆ, ಇನ್ನೂರ ಐವತ್ತು ರೂಪಾಯಿ ರಾಯರ ಕೈಬಿಟ್ಟಿತು.

ಗಾಡಿಯ ಮುಂದೆ ಕುದುರೆ ಇರಲೇಬೇಕಲ್ಲವೇ. ಬನ್ನಿ ಸಾಹೇಬ್ರೆ ನಿಮ್ ನಸೀಬ್ ಚೆನ್ನಾಗಿದೆ. ಮೂರನೇ ಗಲ್ಲೀಲಿ ನಮ್ ರಿಸ್ತೆದಾರ್ ಭೇಷ್ ಕುದುರೆ ಇಟ್ಟವ್ರೆ ಅಂದು ಕರೆದುಕೊಂಡು ಹೋದ. ಗಲ್ಲಿ ಗಲ್ಲಿ ಸುತ್ತಿ ಬಳಸಿ, ಕುದುರೆ ಮಾಲೀಕನ ಮನೆ ಬಾಗಿಲಲ್ಲಿ ನಿಂತರು. ಒಳಗಿನಿಂದಲೇ ಬನ್ನಿ ಬನ್ನಿ ಸ್ವಾಮಿ ಇಬ್ರಾಹಿಂ ನೀವ್ ಬರ್ತೀರಾಂತ ಹೇಳಿದ್ದ, ದಯಮಾಡಿ ಬನ್ನಿ. ಕಿರಿದಾದ ಮನೆ, ಸಣ್ಣ ಓಣಿ, ಕುದುರೆ ಲದ್ದಿಯಾಗಲೀ, ತಿನ್ನುವ ಹುಲ್ಲಾಗಲೀ ಎಲ್ಲೂ ಕಾಣಿಸದು. ಸಾಹೇಬ ರಾಯರ ಸಂದೇಹವನ್ನು ನಿವಾರಿಸುತ್ತಾ "ಸಾಹೇಬ್ರೆ, ಕುದುರೆ ದೂಸ್ರ ಗಲ್ಲೀಲಿದೆ. ನಮಗೆ ಮಾರೋಕ್ಕೆ ಇಷ್ಟಇಲ್ಲ, ಬಡಾ ನಸೀಬ್ ಕ ಘೋಡಾ, ಬೇರೆ ಗಾಡಿ ಕುದುರೆ ಹಂಗಿಲ್ಲ. ರೇಸ್ ಕೋರ್ಸ್‌ಲ್ಲಿ ಓಡಕ್ಕೆ ಲಾಯಕ್ಕು ಏನ್ ಮಾಡೋದು, ಹಣ ಬೇಕಾಗಿದೆ, ಬನ್ನಿ ಕುದುರೆ ತೋರಿಸ್ತೀನಿ ಅಂದು ಕರೆದುಕೊಂಡು ಹೋದ. ಟಾಂಗಾದಲ್ಲಿ ಕೂತು, ಹೆಜ್ಜೆಗೊಂದು ಬಾರಿ 'ಫುರ್ ಫುರ್' ಶಬ್ದಮಾಡುತ್ತಾ, ಲದ್ದಿ ಹಾಕುವ ಜಟಕಾ ಗಾಡಿ ಕುದುರೆಯನ್ನು ನೋಡಿದ ಅನುಭವವಿತ್ತು ರಾಯರಿಗೆ. ಅರಮನೆಯ ಬಣ್ಣ ಬಣ್ಣದ ಗಾಡಿಗಳಿಗೆ ಬಿಳಿಯ, ಅಚ್ಚ ಕರಿಯ ಎತ್ತರದ ಕುದುರೆಗಳು ಎಳೆಯುತಿದ್ದ ಸಾರೋಟು ನೋಡಿದ್ದರು. ತಾವು ಒಂದು ಷಾ ಪಸಂದ್ ಮಾಲೀಕರಾಗಿ, ತಮ್ಮ ಊರಿನವರ ಮುಂದೆ ಮೆರೆಯುವ ಸ್ವಪ್ನ ರಾಯರ ಕಣ್ಣ ಮುಂದೆ ಬಂತು. ಈ ಸ್ವಪ್ನದ ಮೆಲುಕು ಹಾಕುತ್ತಿರುವಾಗಲೇ ಕುದುರೆಯಿದ್ದ ಓಣಿಯನ್ನು ಪ್ರವೇಶಿಸಿದರು. ಅಲ್ಲಿಯೂ ಕುದುರೆಯ ಸೂಚನೆಯಿರಲಿಲ್ಲ. "ಸ್ವಾಮಿ ಕುದುರೆ ಮನೆ ಮುಂದೆ ಇರಬಾರದು, ನಝುರ್ ಹಾಕ್ತಾರೆ ಬೇಕಾರ್ ಜನಗೊಳು, ತಡೀರಿ ಕುದುರೆ ತರ್ತೀನಿ' ಎಂದು ಹೇಳಿ, ಮನೆಯ ಹಿಂದಿನಿಂದ ಕುದುರೆ ತಂದ ನಸೀಬ್ ಕ ಘೋಡಾ, ನೋಡಿ ಇದರ ಹಣೆ, ಬಿಳೀ ಮಚ್ಚೆ ಬಡ ನಸೀಬ್.

ಬಹಳ ಜನ ಕುದುರೆ ಖರೀದಿಗೆ ಇದ್ದಾರೆ. ಈ ಹೊತ್ತು ನೀವು ಬಂದಿದ್ದೀರಿ, ನಮಗೆ ಸಂತೋಷ. ಕುದುರೆ ಪರೀಕ್ಷೆ ಮಾಡಿಕೊಳ್ಳಿ ಅಂದ. ಪಾಪ, ನಮ್ಮ ತಂದೆಗೆ ಕುದುರೆ ಪರೀಕ್ಷೆ ಹೇಗೆ ಮಾಡೋದು ಅನ್ನುವ ಸಮಸ್ಯೆ. ತಕ್ಷಣ ಕೆಂಪನಂಜ ಹಾಜರ್. ಎಲ್ಲಿ ಕುದುರೆ ಈ ಕಡೆ ನಿಲ್ಲಿಸಿ ಸಾಹೇಬ್ರೆ, ಅದರ ವಯಸ್ಸು ಎಷ್ಟು ? ಸ್ವಲ್ಪ ಹಲ್ಲು ನೋಡಿ ಕುದುರೆಯ ಸುಳಿ ನೋಡಬೇಕು ? ಕೆಂಪನಂಜನ ಕುದುರೆ ಪರೀಕ್ಷೆಯ ವಿಧಾನವನ್ನು ನೋಡಿ ರಾಯರು ಅಚ್ಚರಿ ಪಟ್ಟರಲ್ಲದೆ, ಕೆಂಪನಂಜನ ಮೇಲಿನ ನಂಬಿಕೆ ಹೆಚ್ಚಾಯಿತು. ಕುದುರೆಯ ಮಾಲೀಕನೂ ನಂಜನನ್ನು ಹೊಗಳಿ, ಸಾಹೇಬ್ರೆ ಚೆನ್ನಾಗಿ ಕುದುರೆ ಪರೀಕ್ಷೆ ಮಾಡಿ ಖರೀದಿ ಮಾಡಿದರೆ ದಿಲ್ ಖುಷ್ ಆಗುತ್ತೆ ಅಂದ. ನಂತರ ಕೆಂಪನಂಜ ನೋಡಿ ನಮ್ಮ ಸಾಹೇಬ್ರು ಭಾಳಾ ಸೀದಾ ಮನುಷ್ಯರು ಚೌಕಾಸಿ ಬೇಡ. ಒಂದೇ ಬೆಲೆ ಹೇಳಿ ಅಂದ. ಸಾಹೇಬ 'ಅಲ್ಲಾ ಕಸಮ್. ನಾನೂರ ಐವತ್ತು ಕೆಂಪನಂಜನ ಮಧ್ಯಸ್ಥಿಕೆಯಿಂದ ಮುನ್ನೂರು ರುಪಾಯಿಗೆ ಅಬ್ಲುಕ್ ಕುದುರೆ ರಾಯರದಾಯಿತು. ಕುದುರೆ ಮತ್ತು ಗಾಡಿ ಮಾಲೀಕರಿಂದ ಕೆಂಪನಂಜ ಸಂಪಾದಿಸಿದ ಕಮಿಷನ್ ರಾಯರಿಗೆ ತಿಳಿಯದು.

ಅಬ್ಲುಕ್ ಟಾಂಗಾಗೆ ಕಟ್ಟಿ, ಸಾಹೇಬ ಖುದ್ದಾಗಿ ಗಾಡಿಯನ್ನು ರಾಯರ ಮನೆಗೆ ಕರೆದುಕೊಂಡು ಹೋಗಲು ಮುಂದೆ ಬಂದ. ಖುಷಿಯಿಂದ ರಾಯರು ಶಾಹ್ ಪಸಂದ್ ಹಿಂದಿನ ಸೀಟಿನಲ್ಲಿ ಆಸೀನರಾಗಿ ತಮ್ಮ ಬಂಗಲೆಗೆ ಬಂದಿಳಿದರು. ನಮ್ಮ ತಾಯಿ ಸಡಗರದಿಂದ ಸಾಂಪ್ರದಾಯಿಕ ಆರತಿಯೊಂದಿಗೆ ಅಬ್ಲುಕ್ ಮತ್ತು ಟಾಂಗಾ ಸ್ವಾಗತಿಸಿದರು. ನಾವು ಮಕ್ಕಳೆಲ್ಲರೂ ಕುದುರೆ ಗಾಡಿಯನ್ನು ಸುತ್ತುಹಾಕಿ ಸರದಿಯೊಂದಿಗೆ ಗಾಡಿಯಲ್ಲಿ ಕುಳಿತು ಮೊಹಲ್ಲಾದ ಸುತ್ತು ಹಾಕಿ ಮೆರವಣಿಗೆಯ ಸುಖವನ್ನು ಅನುಭವಿಸಿದೆವು.

ನಮ್ಮ ಚಿಕ್ಕಪ್ಪನ ಕಾಫಿಪುಡಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಯುವಕ ಮಾದನ ಸಹಾಯದಿಂದ ಹಿರಿಯ ಸಹೋದರ ಯೆಶೋನಾಥ್ ಕುದುರೆ ಮತ್ತು ಬಂಡಿಯನ್ನು ಬೇರ್ಪಡಿಸುವಲ್ಲಿ ಯಶಸ್ವಿಯಾದರು ಮತ್ತು ಪ್ರಾಣಿಯನ್ನು ತಾತ್ಕಾಲಿಕವಾಗಿ ಪ್ರವೇಶದ್ವಾರದಲ್ಲಿರುವ ತೆರೆದ ವರಾಂಡಾದಲ್ಲಿ ಕಟ್ಟಲಾಯಿತು.

ಇನ್ನು ಕುದುರೆ ತಂಗಲು ಲಾಯ ಕಟ್ಟಿಸಿ, ಅದಕ್ಕೆ ಮೂರು–ನಾಲ್ಕು ಸೇರು ಹುರುಳಿ ಕೂಳು, ಅದನ್ನು ತಿಂದ ಪರಿಣಾಮವಾಗಿ ಹೊಟ್ಟೆಯ ಗ್ಯಾಸ್ ನಿವಾರಿಸಲು ಬೆಳ್ಳುಳ್ಳಿ ಚಿಗುರುಗಳು ಮತ್ತು ಕತ್ತರಿಸಿದ ಹಸಿ ಹುಲ್ಲು ಹವಣಿಸಲಾಯಿತು. ಕಮ್ಮಿಯೆಂದರೆ ದಿನಕ್ಕೆ ಮೂರು ರೂಪಾಯಿ ಖರ್ಚು. ಮಾದನ ಸಹಾಯದಿಂದ ಪ್ರತಿದಿನ ಮಾಲೀಷು, ತಿಂದ ಹುರಳಿ ಜೀರ್ಣವಾಗಬೇಕಾದರೆ, ಕುದುರೆ ಓಡಿಸಿ, ವ್ಯಾಯಾಮ ಮಾಡಿಸುವ ಸಮಸ್ಯೆ ಉಂಟಾಯಿತು. ಕುದುರೆ ಗಾಡಿಯನ್ನು ಕೊಳ್ಳುವ ಮುಂಚೆ ಇಂಥ ವಿಚಾರವನ್ನು ಯಾರೂ ಯೋಚಿಸಿರಲಿಲ್ಲ. ಅಬ್ಲುಕ್ ಕುದುರೆ ಬಹಳ ಚಂಚಲ ಸ್ವಭಾವವುಳ್ಳ ಪ್ರಾಣಿ ಲಾಯದಲ್ಲಿ ಕಟ್ಟಿ ಹಾಕಿದರೆ ಅದರ ಪ್ರತಿಭಟನೆ. ಸಾಲದ್ದಕ್ಕೆ, ನಮ್ಮ ಪಾಳೆಗಾರರ ಬಂಗಲೆಯ ಕೆಳಗೆ ವಿಸ್ತಾರವಾದ ಬಾಗಿಲುಗಳಿಲ್ಲದ ನೆಲಮನೆ; ಅದರರೊಳಗೆ ಸುರಂಗವೂ ಇತ್ತು. ಅಬ್ಲುಕ್ಕಿಗೆ ನೆಲಮನೆಯ ಶೀತದ ವಾತಾವರಣ ಬಹಳ ಇಷ್ಟ ಸ್ವತಂತ್ರವಾಗ್ಗಿ ನಮ್ಮ ಕಂಪೌಂಡಿನಲ್ಲಿ ಹುಲ್ಲು ಮೇಯಲು ಬಿಟ್ಟರೆ, ಅಬ್ಲುಕ್ ಬಾಗಿಲುಗಳಿಲ್ಲದ ನೆಲಮನೆಯ ದ್ವಾರದಿಂದ ಜಿಗಿದು ಒಳಗೆ ಹೋಗಿಬಿಡುತ್ತಿತ್ತು. ಕುದರೆಯನ್ನು ವಾಪಸು ತರುವುದು ಸುಲಭದ ಕೆಲಸವಾಗಿರಲಿಲ್ಲ.

ನಿಧಾನವಾಗಿ ಸೇರುಗಟ್ಟಲೆ ಹುರಳಿಯನ್ನು ಬೇಯಿಸಲು ನೆಲಮಾಳಿಗೆಯಲ್ಲಿ ದೊಡ್ಡ ಗಾತ್ರದ ಕಲ್ಲಿದ್ದಲು ಸುಡುವ ಒಲೆ ಅಥವಾ ಅಗ್ಗಿಷ್ಟಿಕೆ ಬಂತು. ಎರಡನೇ ಯುದ್ಧದ ಸಮಯದ ರೇಷನ್ ಬೇರೆ. ಬ್ಲಾಕ್ ಮಾರುಕಟ್ಟೆಯಲ್ಲಿ ಹುರಳಿಯನ್ನು, ಕೊಂಡು ತರುವುದು ದೈನಂದಿನ ಸಮಸ್ಯೆಯಾಯಿತು.

ನಮ್ಮ ತಂದೆಯವರು ಜಾಗ್ರತೆಯಾಗಿ ಗಾಡಿಯ ಚಾಲಕನನ್ನು ನೌಕರಿಗೆ ತಂದು ಗಾಡಿಯ ಬಾಡಿಗೆಯಿಂದ ಖರ್ಚು ಪೂರೈಸುವ ಉದ್ದೇಶದಿಂದ ಊರಿನ ಟಾಂಗಾ ಚಾಲಕರ ಸಹಾಯ ಕೋರಿದರು. ಹಲವಾರು ಮುಸ್ಲಿಂ ಚಾಲಕರು ಕೆಲಸಕ್ಕಾಗಿ ಬಂದು, ಅಬ್ಲುಕ್ ಕುದರೆಯನ್ನು ತಮ್ಮ ಹತೋಟಿಗೆಗೆ ತರುವ ಪ್ರಯತ್ನದಲ್ಲಿ ವಿಫಲರಾದರು. ಈ ಅಬ್ಲುಕ್ಕಿನ 'ಗಾಂಚಾಲಿ' ಸ್ವಭಾವ ಟಾಂಗಾ ಚಾಲಕರ ಗುಂಪಿನಲ್ಲಿ ಪ್ರಚಾರವಾಗಿ, ನೌಕರಿಗೆ ಬಂದವರು ಹೆಚ್ಚಿನ ಸಂಬಳ ಡಿಮ್ಯಾಂಡ್ ಮಾಡತೊಡಗಿದರು. ಹೀಗಾಗಿ ನಮ್ಮ ಟಾಂಗಾ ಮತ್ತು ಕುದುರೆ ಬೇರೆ ಬೇರೆಯಾಗಿ ಮನೆಯ ಕಂಪೌಂಡಿನಲ್ಲಿ ವಿರಾಜಮಾನವಾಗಿ ನಿಂತವು. ಟಾಂಗಾ ಕೊಂಡರೆ ದಿನನಿತ್ಯದ ಪ್ರಯಾಣದ ಸಮಸ್ಯೆ ಪರಿಹರಿಸುತ್ತದೆಯೆಂದೂ ಮತ್ತು ಉಳಿದ ಸಮಯದಲ್ಲಿ ಗಾಡಿಯಿಂದ ಹಣ ಸಂಪಾದಿಸುವ ರಾಯರ ಎಣಿಕೆ ಹೊಸ ಚಿಂತೆಗೆ ಕಾರಣವಾಯಿತು. ಈ ಕಷ್ಟ ಪರಿಸ್ಥಿತಿಯಲ್ಲಿದ್ದಾಗ ಎಲ್ಲಿಂದಲೋ ದೇವರೇ ಕಳುಹಿಸಿದಂತೆ ದಲಿತರ ಕಾಲೋನಿಯಲ್ಲಿ ವಾಸಿಸುಸುತ್ತಿದ್ದ ರಂಗಪ್ಪ ಗಾಡಿಯ ಚಾಲಕನ ಕೆಲಸ ಹುಡುಕಿಕೊಂಡು ಬಂದ. ಕೇವಲ ಹದಿನೈದು ರೂಪಾಯಿ ಸಂಬಳ. ತಂದೆ ತಾಯಿಗಳು ಹಸನ್ಮುಖಿಗಳಾದರು.

ಈ ವ್ಯವಸ್ಥೆಯು ಸ್ವಲ್ಪ ಸಮಯದವರೆಗೆ ಚೆನ್ನಾಗಿಯೇ ನಡೆಯುತ್ತಿತ್ತು ಆದರೆ ಈ ಸುಗಮ ವ್ಯವಸ್ಥೆಯು ಕುಟುಂಬದ ಅಲ್ಪ ಬಜೆಟ್‌ನಲ್ಲಿ ದೊಡ್ಡ ರಂಧ್ರವನ್ನು ಕತ್ತರಿಸುತ್ತಿತ್ತು. ದಿನದಿಂದ ದಿನಕ್ಕೆ ದೈನಂದಿನ ಬಾಡಿಗೆ ಗಳಿಕೆಯಲ್ಲಿ ನಷ್ಟವನ್ನು ವರದಿಮಾಡುವ ಮತ್ತು ರಂಗಪ್ಪನ ಸೆರೆ ಕುಡಿಯುವ ಅಭ್ಯಾಸ ತಲೆನೋವನ್ನು ತಂದಿತು. ಅವನಿಗೆ ನಿಗದಿತ

ಸಂಬಳವನ್ನು ಕೊಡುವುದಲ್ಲದೇ, ಅಬ್ಲುಕ್ ತಿನ್ನುವ ಹುರಳಿ-ಹುಲ್ಲಿನ ಖರ್ಚು ಹೇಗೆ ಪೂರೈಸುವುದೆಂಬ ಚಿಂತೆ ಕಾಡಿತು. ಬೇರೆ ದಾರಿಯಿಲ್ಲದೆ ರಂಗಪ್ಪನನ್ನು ಮನೆಗೆ ಕಳಿಸಲಾಯಿತು.

ಈಗ ಟಾಂಗಾ ನಮ್ಮ ಆವರಣದೊಳಗೆ ಬಿಸಿಲಿನಲ್ಲಿ ಮೈಯೊಡ್ಡಿ ಕುಳಿತಿತು. ಅಬ್ಲುಕ್‌ಗೆ ಪದೇ ಪದೇ ನೀರು ಕುಡಿಸಿ, ಆಹಾರ ಮತ್ತು ವಿಹಾರ ವಿಚಾರಣೆಯ ಕೆಲಸ ನಮ್ಮ ಪಾಲಿನದಾಯಿತು. ಅಬ್ಲುಕ್ ನಮ್ಮ ಸ್ವಾತಂತ್ರ್ಯದ ವೆಚ್ಚದಲ್ಲಿ ತನ್ನ ಹೊಸ ಸ್ವಾತಂತ್ರ್ಯವನ್ನು ಆನಂದಿಸಿದನು. ಮೇಯಲು ಸಡಿಲವಾಗಿ ಬಿಡುತ್ತಿದ್ದುದರಿಂದ ಮಕ್ಕಳಲ್ಲಿ ಒಬ್ಬರು ಅವನ ಚಲನವಲನಗಳನ್ನು ಗಮನಿಸಲು ಮನೆಯಲ್ಲಿಯೇ ಇರಬೇಕಾಯಿತು. ವಿಶೇಷವಾಗಿ ಯಾರಾದರೂ ಭೇಟಿ ನೀಡುವವರು ಅಥವಾ ಬರುವವರು ಮನೆಯ ಕಂಪೌಂಡಿನ ದೊಡ್ಡ ಗೇಟನ್ನು ತೆರೆದಿಡುತ್ತಿದ್ದರು. ಅಬ್ಲುಕ್ ಇಂಥಾ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಹೊರಗೆ ನುಗ್ಗಿ ರಸ್ತೆಯಲ್ಲಿ ಓಡುಬಿಡುವ. ರಸ್ತೆಗೆ ಇಳಿದ ನಂತರ, ಎತ್ತರದ ಕುದುರೆಯಾದ ಅಬ್ಲುಕ್ ಬೀದಿಗಳಲ್ಲಿ ಜನರಿಗೆ ಪ್ರಮುಖ ಆಕರ್ಷಣೆಯಾಗುತ್ತಿದ್ದ. ನಾವುಗಳು ಉಟ್ಟ ಬಟ್ಟೆಯಲ್ಲಿ, ಅಂದರೆ, ಪೈಜಾಮ, ಲುಂಗಿ, ಚೆಡ್ಡಿಧಾರಿಗಳಾಗಿ ಲಗಾಮ್ ಇಲ್ಲದ ಈ ಪ್ರಾಣಿಯನ್ನು ಹಿಡಿಯಲು ಓಡುತ್ತಿದ್ದಂತೆ, ಅದು ವೇಗವಾಗಿ ಓಡಿ, ಗಲ್ಲಿ, ಗಲ್ಲಿಗಳಲ್ಲಿ ಮರೆಯಾಗುವುದು. ನಮ್ಮ ಸಹಾಯಕ್ಕೆ ಬೀದಿಗಳಲ್ಲಿದ್ದ ಜನರು ಕುದುರೆಯ ಬೆನ್ನಟ್ಟುವಿಕೆಗೆ ಸೇರಿದಾಗ ಮೂಡಿಬರುತ್ತಿದ್ದ ದೃಶ್ಯ ಬಹಳ ನಗೆತರುವ ವ್ಯಂಗ್ಯ ಚಿತ್ರದಂತಿರುತ್ತಿತ್ತು. ಇಂತಹ ಅಪರೂಪದ ದೃಶ್ಯ ಸೆರೆಹಿಡಿಯಲು ಮೊಬೈಲ್ ಫೋನ್ ಛಾಯಾಗ್ರಹಣ ಲಭ್ಯವಿರಲಿಲ್ಲ.

ಅದೃಷ್ಟ ಚಿಹ್ನೆಯಿದ್ದ ಅಬ್ಲುಕ್, ಷಾ ಪಸಂದ್ ಗಾಡಿ ಎಳೆಯಲು ತಕ್ಕ ಪ್ರಾಣಿಯಲ್ಲವೆಂಬ ಅನುಭವ ನಮ್ಮ ಕುಟುಂಬಕ್ಕೆ ಹೊಸದೇನೂ ಆಗಿರಲಿಲ್ಲ. ಎತ್ತರವಾದ ಅಬ್ಲುಕ್ಕನ್ನು ಷಾ ಪಸಂದ್ ಗಾಡಿಗೆ ಕಟ್ಟಿ ಗಾಡಿಯ ಒಳಗೆ ಕುಳಿತ ನಮಗೆ ಜಾರುಬಂಡೆಯಲ್ಲಿ ಕುಳಿತಂತೆ ಅನ್ನಿಸುತ್ತಿತ್ತು. ಹಿಂದಿನ ಸೀಟಿನಲ್ಲಿ ಕುಳಿತ ಪ್ರಯಾಣಿಕರ ಸುರಕ್ಷತೆಗಾಗಿ ಕಾರುಗಳ ಸೀಟುಬೆಲ್ಟಿನಂತೆ ಹಗ್ಗವನ್ನು ಅಳವಡಿಸಲಾಗಿತ್ತಲ್ಲದೆ, ಗಾಡಿಯ ಮುಂಭಾಗದಲ್ಲಿ ಭಾರವಾದ ಕಲ್ಲನ್ನು ಹೇರಿ, ಗಾಡಿಯ ಹಿಂಭಾರವನ್ನು ತಡೆಯುವ ಪ್ರಯತ್ನ ಯಸಸ್ವಿಯಾಗುತ್ತಿರಲಿಲ್ಲ.

ಮೈಸೂರಿನಲಿ ಜಟಕಾಗಾಡಿಗಳನ್ನು ನಡೆಸುತ್ತಿದ್ದವರು ಬಹುತೇಕವಾಗಿ ಬಡ ಮುಸ್ಲಿಮ ಜನಾಂಗದವರು. ಅವರಲ್ಲಿ ಹಲವಾರು ಜನ ಕುದುರೆ ಗಾಡಿಯನ್ನು ಖರೀದಿಮಾಡುವ ಇಚ್ಛೆಯನ್ನು ತೋರಿಸಿದರು. ಆದರೆ ಖರೀದಿಯ ಹಣವನ್ನು ಕಂತುಗಳಲ್ಲಿ ಪಾವತಿಮಾಡುವ ಷರತ್ತಿಗೆ ನಾವು ಒಪ್ಪುವಂತಿರಲಿಲ್ಲ. ಡೌನ್ ಪೇಮೆಂಟ್ ನಂತರ ನಾವು ಬಾಕಿಯ ಹಣವನ್ನು ಕಾಣುವ ಭರವಸೆಯಿರಲಿಲ್ಲ.

ಅಬ್ಲುಕ್ ಕುದುರೆ ಕೂಳಿನ ದಿನನಿತ್ಯದ ಖರ್ಚಲ್ಲದೆ, ಸಾಲ ತೆಗೆದುಕೊಳ್ಳಲು ಅಡವಿಟ್ಟ ಬೆಳ್ಳಿ-ಬಂಗಾರದ ಮೇಲಿನ ಬಡ್ಡಿ ದಿನದಿನಕ್ಕೆ ಬೆಳೆಯುತ್ತಿತ್ತು. ಈ ಎಲ್ಲ ಸಮಸ್ಯೆಗಳಿಂದ ಮುಕ್ತರಾಗಲು, ತಂದೆಯವರು ಷಾ ಪಸಂದ್ ಕುದುರೆ ಸಮೇತ ಕೇವಲ ಇನ್ನೂರ ಐವತ್ತು ರೂಪಾಯಿಗೆ ಮಾರಿ ಉಸ್ಸಪ್ಪ ಎಂದು ಆರಾಮ ಕುರ್ಚಿಯಲ್ಲಿ ಕುಳಿತರು. ಅದೃಷ್ಟ ಮಚ್ಚೆಯ ಅಬ್ಲುಕ್ ಕೇವಲ ತಾನು ಮಾತ್ರ ಹೊರಗೆ ಹೋದದ್ದಲ್ಲದೇ ನಮ್ಮ ಮನೆಯಲ್ಲಿ ಹರಡುತ್ತಿದ್ದ ಹುರಳಿಕಟ್ಟು ಸಾರಿನ ಪರಿಮಳವನ್ನೂ ತೆಗೆದುಕೊಂಡುಹೋದ.

■

# ವೈದ್ಯ ಕವಿ

ಎನ್. ಶಂಕರ ರಾವ್. ಬೆಂಗಳೂರು

"ಅಜ್ಜಿ ನಾವಿಬ್ಬರೂ ಏಕೆ ಅವಳಿ ಜವಳಿಯಾಗಿ ಹುಟ್ಟಿದೆವೋ."?

ತುಂಬಾ ಪಜೀತಿ ಅಜ್ಜಿ.. ಕನ್ನಡ ಉಪನ್ಯಾಸಕ ಮತ್ತು ಕವಿ ಸುರೇಶ, ತನ್ನ ಅಜ್ಜಿಯನ್ನು ಕೇಳಿದ. "ಏಕೋ ಮಗು ಏನಾಯ್ತು.."

"ನಿನ್ನ ಆ ಡಾಕ್ಟರ್ ಮುದ್ದು ಮೊಮ್ಮಗ ರಮೇಶ ಮತ್ತು ನಾನು ಇಬ್ಬರೂ ಒಂದೇ ತರಹ ಇದ್ದೀವಲ್ಲಾ,? ಯಾರಾದರೂ ಮಾತನಾಡಿಸಬೇಕು ಅಂದರೆ, ನೀವು ಸುರೇಶ ನಾ ಅಥವಾ ರಮೇಶ ನಾ?" ಎಂಬ ಪೀಠಿಕೆ..

"ಮುಂದೆ ಮಾತನಾಡೋಕೆ ಮೂಡ್ ಇರಲ್ಲ ಅಜ್ಜಿ..ಈಗೇನೋ ಸರಿ, ಮುಂದೆ ನಮ್ಮಿಬ್ಬರಿಗೆ ಮದುವೆ ಆಗಿ, ನಮ್ಮ ಹೆಂಡತಿ ಸಹ ಈ ಪ್ರಶ್ನೆ ಕೇಳಿದ್ರೇ, ದೇವರೇ ಗತಿ.!!.."

"ಅಯ್ಯೋ ಏನು ಹೇಳಲಿ ಆ ಕಥೆ.. ನಿಮ್ಮ ಅಮ್ಮನ ಹರಕೆ, ನಿಮ್ಮ ಅಪ್ಪ ಅಮ್ಮ ಮದುವೆಯಾಗಿ, ಐದು ವರ್ಷಗಳು ಆದರೂ ಮಕ್ಕಳಾಗಲಿಲ್ಲ. ನಿಮ್ಮ ಅಮ್ಮ ಒಂದಲ್ಲ ಎರಡು ದೇವರುಗಳಿಗೆ ಮೊರೆ ಹೋದ್ಲು! ವಿಷ್ಣು, ಈಶ್ವರ ಇಬ್ಬರೂ ಅಸ್ತು ಅಂದ್ರು ಅಂತ ಕಾಣುತ್ತೆ... ನಿಮ್ಮ ಅಮ್ಮನಿಗೆ, ಒಬ್ಬ ಸುರೇಶ, ಇನ್ನೊಬ್ಬ ಮಹೇಶ .. ಅವಳಿ ಜವಳಿ ಫಲ!!"

"ಅಜ್ಜಿಯ ತಮಾಷೆಗೆ ಸುರೇಶ ನಕ್ಕು, ಚೆನ್ನಾಗಿದೆ ನಿನ್ನ ಸೆನ್ಸ್ ಆಫ್ ಹ್ಯೂಮರ್, ಅಜ್ಜಿ" ಅಂದ.

ಹೆಚ್ಚು ಗದ್ದಲವಿಲ್ಲದ, ಸುಂದರ ಮೈಸೂರು ನಗರದಲ್ಲಿ, ರಾಮರಾಯರು ಮತ್ತು ಸುಶೀಲಮ್ಮ ದಂಪತಿಗಳಿಗೆ, ರಮೇಶ್ ಮತ್ತು ಸುರೇಶ್, ಇಬ್ಬರು ಅವಳಿ ಮಕ್ಕಳು. ನೋಟದಲ್ಲಿ ಒಂದೇ ರೀತಿಯಿದ್ದರೂ, ವೃತ್ತಿಯಲ್ಲಿ ಅವರು ಪರಸ್ಪರ ಭಿನ್ನರಾಗಿದ್ದರು. ರಮೇಶ ಗಂಭೀರ ಸ್ವಭಾವದ, ಪ್ರಖ್ಯಾತ ವೈದ್ಯನಾಗಿದ್ದನು, ಯಾವಾಗಲೂ ರೋಗಿಗಳು ಮತ್ತು ಅವರ ಕಾಯಿಲೆಗಳೊಂದಿಗೆ ನಿರತರಾಗಿದ್ದನು. ಆದರೆ ಸುರೇಶ, ಹಾಸ್ಯ ಪ್ರಜ್ಞೆಯ ಸೃಜನಶೀಲ, ಭಾವಜೀವಿ. ಕನ್ನಡ ಉಪನ್ಯಾಸಕ ಮತ್ತು ಕವಿ.

ದಿನವಿಡೀ ಪ್ರಾಸ ಮತ್ತು ದ್ವಿಪದಿಗಳಲ್ಲಿ ಕನಸು ಕಾಣುತ್ತಿದ್ದನು. ಅಣ್ಣ ತಮ್ಮಂದಿರ ಅನ್ಯೋನ್ಯತೆ, ವಾತ್ಸಲ್ಯ, ಅನುಕರಣೀಯ. ಇಬ್ಬರ ಮಿದುಳುಗಳನ್ನು ಬದಲಾಯಿಸಿದರೂ ಸಹ, ಅವರು ಅದನ್ನು ಅರಿತುಕೊಳ್ಳುವುದಿಲ್ಲ ಎಂದು ಜನರು ಸಾಮಾನ್ಯವಾಗಿ ತಮಾಷೆ ಮಾಡುತ್ತಾರೆ.

"ಅಜ್ಜಿ ಸ್ವಲ್ಪ ಹೊತ್ತು ನಿಮ್ಮ ತೊಡೆಯ ಮೇಲೆ ಮರಗಿರುತ್ತೇನೆ "ಅಂದ ಸುರೇಶ. "ಅಯ್ಯೋ ಮಲಗೋ ಮಗು" ಎಂದು ತಲೆ ಸವರಿದರು. ಸುರೇಶನಿಗೆ ನಿದ್ದೆ ಹತ್ತಿತು.

ಒಂದು ಸುಂದರ ಮುಂಜಾನೆ. ಮೂಡಣದಿ ರವಿಯ ಆಗಮನ. ಆಹ್ಲಾದಕರ ವಾತಾವರಣ. ಕವಿ ಸುರೇಶ ಒಂದು ವಿಶೇಷ ವಿಭಿನ್ನ ಯೋಜನೆಯೊಂದಿಗೆ ರಮೇಶನ ರೂಮಿಗೆ ಬಂದನು. "ಅಣ್ಣಾ, ಏನು ಮಾಡ್ತಾ ಇದ್ದೀಯ? ನನಗೆ ನಮ್ಮ ಒಂದೇ ತರಹದ ರೂಪದ ಒಂದು ಪರೀಕ್ಷೆ ಮಾಡೋಣ."

ಜನ ನಮ್ಮ ವೃತ್ತಿಯ ಆಧಾರದ ಮೇರೆಗೆ ಗುರುತಿಸುತ್ತಾರ ? ನೋಡೋಣ.

"ನಾವು ಒಂದು ದಿನಕ್ಕೆ ನಮ್ಮ ವೃತ್ತಿಯ ಸ್ಥಳಗಳನ್ನು ವಿನಿಮಯ ಮಾಡಿಕೊಳ್ಳೋಣ!"

"ನಾನು ವೈದ್ಯನಾಗುತ್ತೇನೆ, ಮತ್ತು ನೀನು ಕವಿಯಾಗಿ ನಾಳೆಯ ಕವಿಗೋಷ್ಠಿಯ ಅಧ್ಯಕ್ಷತೆಗೆ ಹೋಗು. ಏನು ಮಾತನಾಡಬೇಕು ನಾನು ನಿನಗೆ ತಿಳಿಸುತ್ತೇನೆ."

"ನಿನ್ನ ಕ್ಲಿನಿಕ್ ಮತ್ತು ನಿನ್ನ ದಿನಚರಿಯ ಪರಿಚಯ ನನಗೆ ಮಾಡು. ಏನಂತೀಯ?"

ರಮೇಶನಿಗೆ ಈ ಸಲಹೆ ವಿಚಿತ್ರವಾಗಿ ಕಂಡರೂ, ಪ್ರಯತ್ನಿಸಬಹುದು ಅನಿಸಿತು.

ರಮೇಶ, ತನ್ನ ಪ್ರತಿ ದಿನದ ರೋಗಿಗಳ ಮಧ್ಯೆ ಇರುವ ಜೀವನದಿಂದ ಒಂದು ದಿನದ ವಿರಾಮಕ್ಕಾಗಿ ಒಪ್ಪಿಕೊಂಡನು. ಹೀಗಾಗಿ, ಇಬ್ಬರೂ ತಮ್ಮ ನೂತನ ಪ್ರವೃತ್ತಿಯ ಅನುಭವಕ್ಕೆ ಚೆನ್ನಾಗಿ ತಯಾರಿ ಮಾಡಿಕೊಂಡರು.

ಯಾರಿಗೂ ಅನುಮಾನ ಬರದಂತೆ ಆತ್ಮವಿಶ್ವಾಸದಿಂದ, ಸುರೇಶ್ ಕ್ಲಿನಿಕ್‌ಗೆ ಹೊರಟನು. ಸುರೇಶ್ ಕ್ಲಿನಿಕ್‌ಗೆ, ಆತ್ಮವಿಶ್ವಾಸ ತುಂಬಿದ ನಡೆಯಿಂದ ಬಂದನು. ಕೆಲವು ವೈದ್ಯಕೀಯ ಫೈಲ್‌ಗಳನ್ನು ಪರೀಕ್ಷಿಸುವಂತೆ ನಟಿಸುತ್ತಾ ಕುಳಿತನು. ಮೊದಲ ರೋಗಿ, ಒಬ್ಬ ಮಧ್ಯವಯಸ್ಕ ವ್ಯಕ್ತಿಯು ತನ್ನ ಹೊಟ್ಟೆಯನ್ನು ಅಸ್ವಸ್ಥತೆಯಿಂದ ಹಿಡಿದುಕೊಂಡು ಬಂದನು.

"ಡಾಕ್ಟರ್ ಸರ್, ತುಂಬಾ ನೋವು, ಅಮ್ಮ !" ಎಂದು ನರಳಿದನು.

ಸುರೇಶ ಗಡ್ಡವನ್ನು ಕೆರೆದುಕೊಳ್ಳುತ್ತಾ ಗಂಭೀರವಾಗಿ ತಲೆಯಾಡಿಸಿದ. ನಂತರ ಅವನು ಹಾ ಹೂಂ ಎನ್ನುತ್ತಾ, " ನೋವು ನೋವೇ..ನಾವು ಅದನ್ನು ಸಹಿಸಿಕೊಳ್ಳಬೇಕು... ತಿಳಿಯಿತಾ.. ನೋವು ನಲಿವುಗಳು ಒಂದು ಏಕ್ ಕವಿತೇ ಇದ್ದ ಹಾಗೇ!!..."

ರೋಗಿಯು ಗೊಂದಲದಿಂದ "ಡಾಕ್ಟರ್.. ಎಂದನು." ಸುರೇಶ ಮುಂದುವರಿದು, ಹೊಟ್ಟೆ ನೋವು ಒಂದು ದುಃಖ ಭರಿತ ಕವಿತೆ.. ಯೋಚಿಸಬೇಡ.. ಧೈರ್ಯ ಧೈರ್ಯ ಇರಲಿ...

"ಓಹ್...ಡಾಕ್ಟರ್ ಎಂದು ರೋಗಿ ನರಳಿದನು" ರೋಗಿಯು ಹೆಚ್ಚು ದಿಗ್ಭ್ರಮೆಗೊಂಡಂತೆ ಕಂಡನು. ಆದರೆ ಸುರೇಶ್ ವಿಚಲಿತನಾಗದೆ, ನಿನ್ನ ನೋವಿಗೆ ಒಂದು ಗಜಲ್ ಹೇಳುವೆ, ಮತ್ತು ಅವರ ಅಜ್ಜಿ ಹೇಳುತ್ತಿದ್ದ ಒಂದು ಮೂಲಿಕೆ ಕಷಾಯವನ್ನು ಸಹ ಸೂಚಿಸಿದನು. ಒಂದು ಒಳ್ಳೆಯ ಕೆಲಸ ಅಂದರೆ, ಫೀಸ್ ಮಾಫಿ ಮಾಡಿದನು ಸುರೇಶ.

ಸಂಜೆಯ ವೇಳೆಗೆ, ಸುರೇಶ ಕನಿಷ್ಠ ಹತ್ತು ರೋಗಿಗಳಿಗೆ ಕವಿತೆಯ ವಿವಿಧ ರೂಪಗಳನ್ನು "ಸೂಚಿಸಿದನು", ಕೆಲವರಿಗೆ ನಿನ್ನ ಅನಾರೋಗ್ಯಕ್ಕೆ ದುರಾಸೆಯೇ ಕಾರಣ ಎಂದು ಕಗ್ಗದ ನುಡಿಗಳನ್ನು ಹೇಳಿ, ಕೆಲವರಿಗೆ ಮಕ್ಕುತಿಮ್ಮನ ಕಗ್ಗವನ್ನು ಉಡುಗೊರೆಯಾಗಿ ನೀಡಿದನು. ಕೆಲವರು ಸಮಾಧಾನ ಚಿತ್ತದಿಂದ ಮತ್ತೆ ಕೆಲವರು ತಲೆ ಕೆರೆದುಕೊಳ್ಳುತ್ತಾ ಹೊರನಡೆದರು. ಅವರು ನಾವು ಆಸ್ಪತ್ರೆಗೋ ಅಥವಾ ಕವಿಗೋಷ್ಠಿಗೆ ಬಂದಿದ್ದೆವೆಯೋ ಎಂದು ಆಶ್ಚರ್ಯಪಟ್ಟರು.

ಗರಿಗರಿಯಾದ ಕುರ್ತಾ ಪೈಜಾಮ ಧರಿಸಿ, ರಮೇಶ, ಕವಿಗೋಷ್ಠಿಯ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದನು. ಕವಿಗೋಷ್ಠಿಯಲ್ಲಿ "ಡಾಕ್ಟರ್ ಕವಿ "ರಮೇಶ ಅವರ ಅಧ್ಯಕ್ಷ ಭಾಷಣಕ್ಕೆ ಕವಿಗಳು ಕುತೂಹಲದಿಂದ ಕಾಯುತ್ತಿದ್ದರು.

ಕವಿ ಮನಗಳ ಕವನ ವಾಚನದಲ್ಲಿನ ಭಾವ, ನೋವು ನಲಿವುಗಳನ್ನು ಪ್ರಶಂಸಿಸಿದನು. ಕೆಲವರು ಉಪಮೆಯಾಗಿ , ಚಂದ್ರವದನೆ..ಅಂತಾ ಎಲ್ಲಾ ಹೇಳಿದ್ರಿ, ಆದರೆ ಚಂದ್ರನ

ಒಳಗೆಎಲ್ಲಾ ಕ್ರೇಟರ್ ಗಳಿವೆ, ಹುಳುಕು ಮುಖ ಆಗುತ್ತೆ..! ಎಂದು ನಕ್ಕನು.

ಹೆಚ್ಚಿನ ಸುಳಿವು ಇಲ್ಲದ ರಮೇಶ್, ತನ್ನ ಧೈರ್ಯದಿಂದ ಕೆಲವು ಸಾಲುಗಳನ್ನು ಓದಲು ನಿರ್ಧರಿಸಿದನು.

"ಹೃದಯ ಬಡಿತ

ಹಾಡಿದೆ ಕವಿತೆ

ಪ್ರೀತಿಯ ಖಾಯಿಲೆಯ

ವಾಸಿಮಾಡು ಪ್ರಿಯತಮೆ"

ಇದು ಒಂದು ಮೇರುಕೃತಿ ಎಂದು ಭಾವಿಸಿ ಕವಿಗಳು ಜೋರಾಗಿ ಚಪ್ಪಾಳೆ ತಟ್ಟಿದರು. ಉತ್ತೇಜನಗೊಂಡ ರಮೇಶ್, ಮುಂದುವರೆಸಿದನು.

"ಪ್ರೇಮಿಗೆ ಪ್ರೀತಿಯೊಂದು ಔಷದಿ ಸೇವಿಸೆ ಮೂರು ಡೋಸ್ ದಿನನಿತ್ಯ ಕಾಣುವೆ ಪರಿಣಾಮ ಪ್ರತಿನಿತ್ಯ .."

ಎಲ್ಲರ ಕಣ್ಣುಗಳೂ ಬೆರಗಿನಿಂದ ಅರಳಿದವು. ಒಬ್ಬ ಸಹ ಕವಿ ಖುಷಿಯಿಂದ ಹೇಳಿದ. "ವಾಹ್ ವಾಹ್! ಈ ತರಹದ ಸಲಹೆ ಕೇವಲ ಒಬ್ಬ ಡಾಕ್ಟರ್–ಕವಿ ಕೊಡಲು ಮಾತ್ರ ಸಾಧ್ಯ!"

ಧೈರ್ಯ ತುಂಬಿದ ರಮೇಶ್ ಅವರು ಪೂರ್ಣ ವೈದ್ಯಕೀಯ ನಿಯಮಗಳಿಂದ ತುಂಬಿದ "ಕವನ" ವಾಚನವನ್ನು ಮಾಡಿದನು.

ಕವಿಗಳು ವಿಸ್ಮಯದಿಂದ ಹೊರಟರು, ಅವರು ಇಂದು ಐತಿಹಾಸಿಕ ಕವಿಗೋಷ್ಠಿಗೆ ಸಾಕ್ಷಿಯಾದೆವು ಎಂದು ಭಾವಿಸಿದರು.

ಸಂಜೆಯ ಹೊತ್ತಿಗೆ, ಇಬ್ಬರೂ ಸಹೋದರರು ಮನೆಗೆ ಹಿಂದಿರುಗಿದರು. ಮನೆಗೆ ಮರಳಿ ಭೇಟಿಯಾಗಿ ಸಂತಸ ವ್ಯಕ್ತಪಡಿಸಿದರು. ರಮೇಶ್ ತನ್ನ ಕವಿತೆ ಡೋಸೇಜ್ ಸೂಚನೆಗಳು! ಗಳನ್ನು ತಮ್ಮನಿಗೆ ಹೇಳಿದನು.

ಸುರೇಶ್, "ಮತ್ತು ನಾನು? ನಾನು ಹೊಟ್ಟೆ ನೋವಿಗೆ ಶಾಯರಿಯಿಂದ ಚಿಕಿತ್ಸೆ ನೀಡಿದೆ! ಎಂದು ನಕ್ಕನು.

"ಸುರೇಶು ಯಾಕೋ ನಗುತ್ತಾ ಇದ್ದೀಯ? ಕನಸು ಬಿತ್ತೇನೋ? ಏಳೋ,"

ತಕ್ಷಣ ಸುರೇಶ ಎಚ್ಚರಗೊಂಡು, "ಅಜ್ಜಿ ಒಳ್ಳೆನಿದ್ದೆ ಬಂತು, ಸುಂದರ ಕನಸು ಅಜ್ಜಿ..."

ಆಗ, ಅವರ ತಾಯಿ, ಅಜ್ಜಿ "ಏನೋ, ಅದು ಕನಸು, ನಮಗೂ ಹೇಳೋ, ನಾವು ಸಹ ಕೇಳುತ್ತೇವೆ." ಆಗ ಡಾಕ್ಟರ್ ಮಹೇಶ ಸಹ ಬಂದು ನಿಂತ.

ಸುರೇಶ ಕನಸ್ಸಿನಲ್ಲಿ ಕಂಡ ಘಟನೆ ಹೇಳಿದನು.

ಅವರ ತಾಯಿ ನಕ್ಕು, ನೀವೇನು ಚಿಕ್ಕಮಕ್ಕಳಲ್ಲ, "ನೀವಿಬ್ಬರೂ ಬೆಳೆದವರು! ಏನು ಹುಡುಗಾಟ ನಿಮ್ಮದು? ಇದೇನಾದರೂ ನಿಜ ಜೀವನದಲ್ಲಿ ನಡೆದರೆ ದೇವರೇ ಗತಿ..."

ರೋಗಿಗಳು ಅವರು ಬಂದಿದ್ದಕ್ಕಿಂತ ಹೆಚ್ಚು ಗೊಂದಲಕ್ಕೊಳಗಾಗುವುದನ್ನು

ಊಹಿಸಿಕೊಳ್ಳಿ ಮತ್ತು ಕವನದ ಪ್ರಿಸ್ಕ್ರಿಪ್ಷನ್ಗಳನ್ನು ತೆಗೆದುಕೊಳ್ಳಲು ಸಿದ್ಧರಾಗಿದ್ದಾರೆ! ಒಳ್ಳೆಯ ಸ್ಕ್ರಿಪ್ಟ್ ಕಣೋ ಎಂದ ಮಹೇಶ.

ಸುರೇಶ ನಗುತ್ತಾ, ಮತ್ತೆ ಎಂದಿಗೂ ಪಾತ್ರಗಳನ್ನು ವಿನಿಮಯ ಮಾಡಿಕೊಳ್ಳುವ ಕನಸು ಕಾಣಲ್ಲ ಅಮ್ಮ ಎಂದು ಭರವಸೆ ನೀಡಿದನು!!

"ಇವರಿಬ್ಬರಿಗೂ ಬೇಗ ಮದುವೆ ಮಾಡಬೇಕು, ಆಗಲಾದರೂ ಬೇರೆ ಕನಸು ಕಾಣುತ್ತಾನೆ ಈ ಸುರೇಶ", ಎಂದು ಅಜ್ಜಿ ನಕ್ಕರು.

ಸುರೇಶು, ತೊಗಳೋ ನಿಮ್ಮ ತಾತನ, ಈ ಚಿನ್ನದ ಲಾಕೆಟ್, ಇದನ್ನು ಕಾಣೋ ತರಹ ಹಾಕೊಂಡಿರು, ಆವಾಗ ನೀನು ಸುರೇಶ ಅಂತ ನಮಗೆಲ್ಲಾ ಗೊತ್ತಾಗುತ್ತೆ" ಎಂದು ಅಜ್ಜಿ ಕೊಟ್ಟರು.

"ಥ್ಯಾಂಕ್ಸ್ ಅಜ್ಜಿ, ಒಳ್ಳೆ ಚಿನ್ನದ ಪದಕ ಕೊಟ್ಟಿದ್ದೀಯ," ನನ್ನ ಹೊಸ ಐಡಿ ಕಾರ್ಡ್" ಎಂದನು. ಎಲ್ಲರೂ ನಕ್ಕರು.

ಆದರೆ ಸುರೇಶ ಕಂಡು ಆ ಕನಸು ಅವರ ನೆಂಟರಿಷ್ಟರಲ್ಲಿ ಮನೆಮಾತಾಯಿತು.

"ಡಾಕ್ಟರ್ ಕವಿ" ಮತ್ತು "ಕವಿ ಡಾಕ್ಟರ್" ಬಗ್ಗೆ ಮಾತನಾಡುತ್ತಿದ್ದರು. ■

## ಯಾಕೆ ಹೀಗೆ ಗೋಳು ಹುಯ್ಕೋತಾರೋ??

–ಸುಮನಾ

ಅದು ಮಾಡಿಲ್ಲ, ಇದು ಕೇಳಿಲ್ಲ, ಹಾಗ್ಮಾಡ್ಬೇಕಿತ್ತುಇದು ಹಾಗಾಗ್ಬೇಕಿತ್ತು, ಬರೀ ಡಿಸ್ಟರ್ಬೆನ್ಸು ಸಾಕಾಕ್ಹೋಗಿದೆ, ನೆಮ್ಮದಿಯ ನಿದ್ದೇನೇ ಇಲ್ಲ, ಅದ್ಯಾವಾಗ ಸುಖವಾಗಿ ಸಮಾಧಾನ್ವಾಗಿ ಮಲಗ್ತೀನೋ ಅಂತ ಗೊಣಗ್ತಿದ್ದ ಅಜ್ಜನಿಗೆ ಮೊಮ್ಮಗ ಅಂದ..ತಾತ, ನಿನಗೆ ನೆಮ್ಮದಿಯ ನಿದ್ದೆ ಬೇಕಾ, ಬಾ ಇಲ್ಲಿ..ನನ್ನ ಫ್ರೆಂಡ್ಸ್ ತಾತ,ಅಜ್ಜಿ ಎಲ್ಲಾ ನೆಮ್ಮದಿಯಾಗಿ ಮಲಗಿರೋ ಜಾಗ ತೋರಿಸ್ತೀನಿ..ಇದುವರೆಗೂ ಅವ್ರನ್ನ ಯಾರೂ ಎಬ್ಬಿಸಿಲ್ಲ,ಎಬ್ಬಸ್ಕ್ಕಾಗೋದೂ ಇಲ್ಲ, ಡಿಸ್ಟರ್ಬೆನ್ಸೂ ಇರಲ್ಲ, ನೀನೂ ಇಲ್ಲಿ ಹಾಯಾಗಿ ಮಲಗಬಹುದು, ತಪ್ಪು ತಿಳೀಬೇಡ ಅಂತ..

ತಾತನ ಕೈ ಹಿಡಿದು ಸಮಾಧಿ–ಸಾಂತ್ವನ ಅಂತ ಬರೆದಿದ್ದ ಜಾಗಕ್ಕೆ ಕರ್ಕೊಂಡು ಹೋದಾಗ ಅಜ್ಜಸುಸ್ತಾದ್ರು.

---

ನಂಗೆ ಜೀವನ ತುಂಬಾ ಸಾಕಾಗಿದ್ಯೋ ಜಗ್ಗು, ಹೇಗಾದ್ರೂ ಪ್ರಾಣ ಕಳ್ಕೋಬೇಕು ಅಂತಿದೀನಿ..ಇಷ್ಟು ದಿನಾನೂ ಅಪ್ಪ ಅಮ್ಮಂಗೆ ಭಾರ ಆಗಿದ್ದು ಸಾಕು ಅನ್ನಿಸ್ತಿದೆ, ನನ್ನ ಪ್ಲಾನ್ ಸಕ್ಸಸ್ ಆಗ್ಬೇಕು, ಅಪ್ಪ ಅಮ್ಮಂಗೆ ಸ್ವಲ್ಪ ಹಣಾನೂ ಸಿಗಬೇಕು, ಯಾವುದೇ ಕೋರ್ಟ್ ಗೀರ್ಟು ಅಂತ ಇರ್ಬಾರ್ದು ಕಣೋ, ಏನಾದ್ರೂ ಪ್ಲಾನ್ ಹೇಳು ಅಂದ ಮಂಜ..ಏ.. ಅದಕ್ಯಾಕೆ ಯೋಚ್ನೆ ಮಾಡ್ತೀಯಾ, ನೆಕ್ಸ್ಟ್ ಆರ್ಸಿಬಿ ಮ್ಯಾಚ್ ಸೆಲೆಬ್ರೇಷನ್‌ಗೆ ಹೋಗು, ಅಥವಾ ಯಾವುದಾದ್ರೂ ಜನಮರುಳೋ ಜಾತ್ರೆ ಮರುಳೋ ಸೆಲೆಬ್ರೇಷನ್‌ಗೆ ಹೋಗು, ಅಲ್ಲಿ ನೂಕು ನುಗ್ಗಾಟದಲ್ಲಿ ಕಾಲ್ತುಳಿತದಲ್ಲಿ ನಿಂಗೆ ಡೈರೆಕ್ಟ್ ಟಿಕೆಟ್, ಸಿಗುತ್ತೆ..ಅಪ್ಪ, ಅಮ್ಮಂಗೆ ಹಣಾನೂ ಸಿಗುತ್ತೆ ಅಂತ ಹಲ್ಲು ಕಿಸಿದ ಜಗ್ಗು..

# ಸುಗರ್ ಸಮಸ್ಯೆ

**ಸುಮ ರಮೇಶ್, ಹಾಸನ**

'ಸೊಂಯ್...!' ಎಂದು ರಾಕೆಟ್ ಸ್ಪೀಡ್‌ನಲ್ಲಿ ಬಂದ ವಸ್ತುವೊಂದು ಟಪಕ್ಕನೆ ನನ್ನೆದುರು ಬಿದ್ದಾಗ ಬೆಚ್ಚಿದೆ. ಬಹಳ ಆಸಕ್ತಿಯಿಂದ ಓದುತ್ತಿದ್ದ ಪತ್ತೇದಾರಿ ಕಾದಂಬರಿ ಅದಾಗಲೇ ರೋಚಕ ಘಟ್ಟ ತಲುಪಿತ್ತು. ಭಾರೀ ರಸಭಂಗವಾದಂತಾಗಿ 'ತಥ್...!' ಎನ್ನುತ್ತಾ ತಲೆಯೆತ್ತಿ ಅತ್ತ ನೋಟ ಹರಿಸಿದೆ. ನೀಟಾಗಿ ಕವರ್ ಮಾಡಿದ್ದ ಕಾಗದವೊಂದು ಅನಾಥವಾಗಿ ಬಿದ್ದಿತ್ತು. ಬಿದ್ದ ರಭಸಕ್ಕೆ ಒಳಗೆ ಮಡಚಿ ಇರಿಸಿದ್ದ ಹೂರಣ ಸದೃಶ ಮಿನಿ ಕಾಗದ ಅತ್ತಿತ್ತ ಜರುಗಿ ಹೊರ ಬರಲು ಹವಣಿಸುತ್ತಿತ್ತು. ಹೀಗೆ ಅಚಾನಕ್ಕಾಗಿ ಹಾರಿಬಂದು ನನ್ನೆದುರು ಲ್ಯಾಂಡ್ ಆದ ಕ್ಷಿಪಣಿಯ ಹಿಂದಿನ ಫೋರ್ಸ್ ಯಾವುದೆಂದು ತಿಳಿಯಲು ಅದು ತೂರಿಬಂದ ದಿಕ್ಕಿನೆಡೆಗೆ ದೃಷ್ಟಿ ಹಾಯಿಸಿದೆ. ನಿಂಗಿ ಕ್ಯಾಟ್ ವಾಕ್ ಮಾಡುತ್ತಾ ಬರುತ್ತಿದ್ದಳು.

'ಇದೇನೇ ನಿಂಗಿ ಇದು...? ಡಸ್ಟ್ ಬಿನ್‌ಗೆ ಹಾಕೋದುನ್ನ ನನ್ ಮುಂದೆ ಎಸೀತೀಯಲ್ಲಾ... ನಿಂಗೂ ಧಿಮಾಕು ಜಾಸ್ತಿ ಆಯ್ತು ಬಿಡು...' ಎಂದೆ ಖಾರವಾಗಿ.

'ನಾನಲ್ಲ ಕಣಕ್ಕಾ... ಅಣ್ಣ ಎಸ್ದಿದ್ದು. ಎಸ್ದು ರೂಮಿಗೋದ್ರು...' ನಿಂಗಿ ರೂಮಿನೆಡೆಗೆ ಕೈ ತೋರುತ್ತಾ ನುಡಿದಾಗ ಸೋಜಿಗವಾಯಿತು.

ಕವರ್ ಕೈಗೆತ್ತಿಕೊಂಡೆ. ಲೆಟರ್ ಹೆಡ್ ನಲ್ಲಿದ್ದ 'ಏಷಿಯನ್ ಡಯಾಗ್ನೋಸ್ಟಿಕ್ಸ್' ಎಂಬ ಪದವನ್ನು ನೋಡಿದೊಡನೆಯೇ ಹೆಚ್ಚು ಕಡಿಮೆ ಎಲ್ಲವೂ ವೇದ್ಯವಾಯಿತು.

'ನಿಮ್ಮಣ್ಣನ ಶುಗರ್ ರಿಪೋರ್ಟ್ ಕಣೇ ನಿಂಗಿ...! ಹೀಗೆ ಎಸ್ದಿರೋದು ನೋಡಿದ್ರೇ ಗೊತ್ತಾಗ್ತಿದೆ ಎಲ್ಲಾ ನಾರ್ಮಲ್ ಇದೆ ಅಂತ...' ಎಂದೆ. ಸೊಂಟ ಬಗ್ಗಿಸಿ ಕಸ ಗುಡಿಸಲು ಅನುವಾಗುತ್ತಿದ್ದ ನಿಂಗಿ ನೆಟ್ಟಗೆ ನಿಂತಳು.

'ಓ...! ಅವತ್ತು ನೀವು ಅಣ್ಣಂಗೆ ಪೂರಿ ಬಡ್ಸೋವಾಗ ಚಾಲೆಂಜ್ ಮಾಡಿದ್ರಲ್ಲಕ್ಕಾ... ಅದುಕ್ಕೆ ಅಣ್ಣ ಇಂಗೆ ಎಸ್ದಿರ್ಬೇಕು... ಸರ್ಯಾಗೇ ಮಾಡವ್ರೆ ಬುಡಿ...!' ನಿಂಗಿ ಬಹಳ ಖುಷಿಯಿಂದ ಕೈ ತಿರುವಿದಾಗ ನನಗೆ ಇರುಸುಮುರುಸಾಯಿತು.

ಹಾಗೆಯೇ ರಿಪೋರ್ಟ್ ತೆರೆದು ಸರಸರನೆ ಕಣ್ಣಾಡಿಸಿದೆ. ಎರಡು ತಿಂಗಳ ಹಿಂದೆ ಮುನ್ನೂರರ ಗಡಿ ದಾಟಿದ್ದ ಅವರ ಶುಗರ್ ಲೆವೆಲ್ ಇಂದು ನೂರಾನಲವತ್ತ ಮೂರಕ್ಕೆ ಇಳಿದಿತ್ತು. ಕೊಲೆಸ್ಟ್ರಾಲ್, ಟ್ರೈಗ್ಲಿಸರೈಡ್ ಎಲ್ಲವೂ ನಾರ್ಮಲ್. ಅಚ್ಚರಿಯಿಂದ ಪುನಃ ಪುನಃ ಪರಿಶೀಲಿಸಿದೆ. ಕೆಂಪು ಅಡಿಗೆರೆಯ ಒಂದೇ ಒಂದು ಸಂಖ್ಯೆಯೂ ಅಲ್ಲಿರಲಿಲ್ಲ.

ಎರಡು ಮೂರು ತಿಂಗಳಿನಿಂದ ವೈದ್ಯರ ಸಲಹೆ ಮೇರೆಗೆ ಎಲ್ಲಾ ರುಚಿಕರ ಖಾದ್ಯಗಳ ಮೇಲೂ ಮನೆಯಲ್ಲಿ ನಿಷೇಧ ಹೇರಲಾಗಿತ್ತು. ಅಪರೂಪಕ್ಕೊಮ್ಮೆ ಮಾಡಿದರೂ ಅದರ ಪ್ರಮಾಣ ಕಡಿಮೆ ಇರುತ್ತಿತ್ತು. ಅಂತೆಯೇ ತಿಂಗಳ ಹಿಂದೆ ಒಂದು ಬೆಳಗ್ಗೆ ಐದು ಪೂರಿ ತಿಂದು ಮುಗಿಸಿ ಆರನೆಯದಕ್ಕೆ ಅವರು ನಿಂಗಿಯ ಮೂಲಕ ಬೇಡಿಕೆ ಸಲ್ಲಿಸಿದಾಗ ಒಳಗೆ ಬಾಣಲೆಯಲ್ಲಿ ಹಸಿ ಪೂರಿಗಳನ್ನು ಮಗುಚುತ್ತಿದ್ದ ನಾನು 'ನಾರ್ಮಲ್ ರಿಪೋರ್ಟ್ ತಂದು ನನ್ನೆದುರು ಬಿಸಾಕೋಕೆ ಹೇಳು...ಆಗ ಆರೇನು ಹತ್ತು ಪೂರಿ ಬೇಕಾದ್ರೂ ಬಡಿಸಬಹುದು' ಎಂದು ಸವಾಲೆಸೆದಿದ್ದೆ. ಅದರ ಫಲಶೃತಿಯೇ ಈ ರಿಪೋರ್ಟ್ ರಾಕ್ – athon ! ಇಲ್ಲಿ ನನ್ನ ಸೋಲಿಗಿಂತಲೂ ಅವರ ಗೆಲುವು ಒಂದು ಬಗೆಯ ಖುಷಿ ನೀಡಿತು. ಯಾವಾಗಲೂ ಫೈಲಿನ ತಳದಲ್ಲೋ, ವಾರ್ಡ್ ರೋಬ್ ಅಡಿಯಲ್ಲೋ

ಭೂಗತವಾಗಿರುತ್ತಿದ್ದ ರಿಪೋರ್ಟ್ ಇಂದು ರಾಜಾರೋಷವಾಗಿ ನನಗೇ ಸೆಡ್ಡು ಹೊಡೆಯುವಂತೆ ಎದುರು ಬಂದು ಬಿದ್ದಿತ್ತು.

'ಎಲ್ಲಾ ನಾರ್ಮಲ್ ಇದೆ ಕಣೇ ನಿಂಗಿ....ಇನ್ನು ನಿಮ್ಮಣ್ಣನ್ನ ಹಿಡಿಯಕಾಗಲ್ಲ ಬಿಡು !' ಎಂದೆ. ನಿಂಗಿಯ ಮುಖ ಅರಳಿತು.

'ಬುಡಿ ಅಕ್ಕ ಒಳ್ಳೇದಾಯ್ತು...ನಂಗೂ ಮೂರ್ ತಿಂಗ್ಳಿಂದ ನಿಮ್ಮನೇಲಿ ಆ ಸಪ್ಪೆ ಊಟ ತಿಂದು ನಾಲ್ಗೆ ಎಲ್ಲಾ ಕೆಟ್ಟೋಗಿತ್ತು. ಇನ್ಮೇಲಾದ್ರೂ ನೆಟ್ಟುಗೆ ಮದ್ಲಂಗೆ ಎಣ್ಣೆ ಬೆಣ್ಣೆ ಹಾಕಿ ಅಡ್ಗೆ ಮಾಡಿ...' ಎನ್ನುತ್ತಾ ರೂಮ್ ಗುಡಿಸಲು ಹೋದವಳು ಬಹಳ ಹುರುಪಿನಿಂದ ಭಾರವಾದ ಐದಾರು ಕವರ್‌ಗಳನ್ನು ತಂದು ಟೇಬಲ್ ಮೇಲಿರಿಸಿದಳು. ಹಲವು ದಿನಗಳ ನಂತರ ಲವಲವಿಕೆಯ ಗಂಧವೊಂದು ಎಲ್ಲಿಂದಲೋ ಬಂದು ತೀಡಿದಂತೆ ಮುದಗೊಂಡಿದ್ದಳು.



'ಇದೇನೇ ಇದೂ...?' ಎಂದೆ ಅಚ್ಚರಿಯಿಂದ.

'ಅಣ್ಣ ತಂದಿರೋ ಬೇಕ್ರಿ ತಿಂಡಿಗಳು...ಕೇಕು, ಚಕ್ಲಿ ಕೋಡ್ಬಳೆ ನಿಪ್ಪಟ್ಟು ಎಲ್ಲಾ ಇದೆ ಕಣಕ್ಕಾ...ಅಣ್ಣ ರೂಮಲ್ಲೇ ಇರ್ಲಿ ಒಳುಕ್ಕೆ ತಗಂಡೋಗ್ಬೇಡ ಅಂದ್ರು...ನಾನೇ ತಗಂಬಂದೆ'

'ಯಾಕಂತೆ...?'

'ನೀವು ಇತ್ತೀಚ್ಗೆ ಧಾರ್ವಾಡುದ್ ಎಮ್ಮೆ ತರ ಆಗಿದೀರಂತೆ. ಅದುಕ್ಕೆ ಒಂದ್ಸಲ ನೀವೂ ಎಲ್ಲಾ ಟೆಸ್ಟ್ ಮಾಡ್ಸಿ ರಿಪೋರ್ಟ ತಂದ್ಕೊಡ್ಬೇಕಂತೆ. ಅಲ್ಲೀವರ್ಗೂ ಅಲ್ಲೇ ಇರ್ಲಿ ಅಂದ್ರು. ನಾನು ಒಂದೆರಡು ತಿನ್ನನಾ ಅಂತ ಒಳಿಕ್ಕೆ ತಂದೆ. ಬೇಕಾದ್ರೆ ನೀವೂ ಒಂದೆರ್ಡು ತಗಳೀ.... ಅಣ್ಣುಂಗೇನು ಗೊತ್ತಾಗಲ್ಲ....' ನಿಂಗಿಯ ಮಾತಿಗೆ ಮೈ ಉರಿದು ಹೋಯಿತು. ಹೊಳೆ ನೀರಿಗೆ ದೊಣ್ಣೆ ನಾಯಕನ ಅಪ್ಪಣೆ ಅನ್ನೋ ಹಾಗೆ ಅವಳ ಔದಾರ್ಯ ನನ್ನನ್ನು ಕೆರಳಿಸಿತು. ಆಕೆಗೆ ಕೊಟ್ಟ ಸಲುಗೆ ಹೆಚ್ಚಾಯಿತೆನಿಸಿತು. ಅದಾಗಲೇ ತನ್ನ ಇಪ್ಪತ್ತು ವರ್ಷಗಳ ಸರ್ವಿಸ್ ನಮ್ಮ ಮನೆಯಲ್ಲೇ ಮುಗಿಸಿದ್ದರಿಂದ ಪರ್ಮನೆಂಟ್ ಎಂಪ್ಲಾಯಿಯಂತೆ ಹಕ್ಕು ಸಾಧಿಸುತ್ತಿದ್ದಳು. ಹೀಗೆ ನಮ್ಮ ಬದುಕಿನ ಬಂಡಿಗೆ ದಶಕಗಳಿಂದ ಕೊಂಡಿ ಜೋಡಿಸಿಕೊಂಡಿದ್ದ ಅವಳೊಂದಿಗೆ ನಮಗೂ ಒಂದು ಬಗೆಯ ಬಾಂಧವ್ಯ ಬೆಸೆದಿತ್ತು.

'ಯಾರೇ ಧಾರ್ವಾಡುದ್ ಎಮ್ಮೆ...? ನಿನ್ನ ನಾಲ್ಗೆ ಉದ್ದ ಆಯ್ತು ನೋಡು...' ಎಂದೆ ಕೆಂಗಣ್ಣು ಬೀರುತ್ತಾ. ಪರಿಸ್ಥಿತಿಯ ಪ್ರಖರತೆಯನ್ನರಿತ ನಿಂಗಿ ಮೆಲ್ಲನೆ ನನ್ನ ಬಳಿಗೆ ಬಂದು ನಲವತ್ತೈದು ಡಿಗ್ರಿ ಬಾಗಿದಳು.

'ಅಕ್ಕಾ...ಆದ್ರೂ ಅಣ್ಣುನ್ನ ನಂಬಕಾಗಲ್ಲ. ಇಷ್ಟ್ ಬೇಗ ಸುಗರ್ರು ಅಷ್ಟೊಂದು ಕಡ್ಮೆ ಆಗಿರೋದು ನನಿಗೇನೋ ಡೌಟು. ಅಲ್ಲಿ ಲ್ಯಾಬಲ್ಲಿ ಪರೀಕ್ಷೆ ಮಾಡವ್ನಿಗೇನಾದ್ರೂ ದುಡ್ ಕೊಟ್ಟು ರಿಪೋರ್ಟ ಬರುಸ್ಕಬಂದಿರ್ಬೋದಾ ನೋಡಿ...?' ಕೋಡುಬಳೆ ಮೆಲ್ಲುತ್ತಲೇ ತಲೆಗೊಂದು ಕ್ರಿಮಿನಲ್ ಹುಳ ಬಿಟ್ಟು ಹುಸಿ ಕೆಮ್ಮು ನಟಿಸುತ್ತಾ ಪಾತ್ರೆ ತೊಳೆಯಲು ಹಿಂಬದಿಗೆ ತೆರಳಿದಳು.

■

# ಸ್ಥಬ್ದ ಚಿತ್ರ

**ರಾಜೇಶ್ವರಿ. ಹುಲ್ಲೇನಹಳ್ಳಿ**

ಬದುಕಿನಲ್ಲಿ ನಿತ್ಯವೂ ನಮ್ಮ ಮನೆಗಳಲ್ಲಿ, ನಮ್ಮ ಸುತ್ತ ಮುತ್ತ ನಮ್ಮ ಕೆಲಸದ ಸ್ಥಳಗಳಲ್ಲಿ ಹಲವಾರು ಹಾಸ್ಯ ಪ್ರಸಂಗಗಳು  ಕಾಣ ಸಿಗುತ್ತವೆ. ಅಂತಹ ಹಲವು ಪ್ರಸಂಗಗಳಲ್ಲಿ  ನನ್ನ ವೃತ್ತಿ ಬದುಕಿನಲ್ಲಿ ನಡೆದ ಒಂದು ಘಟನೆ  ನೆನಪಾಗುತ್ತದೆ ನಾನು ವೃತ್ತಿ ನಿರ್ವಹಿಸುತ್ತಿದ್ದ ಹಾಸನದ ಡೇರಿಯ ಪಕ್ಕದಲ್ಲಿದ್ದ  ಇಂಡಸ್ಟ್ರಿಯಲ್ ಎಸ್ಟೇಟ್ ನಲ್ಲಿಪೊಟೆಟೋ ಚಿಪ್ಸ್ ತಯಾರಿಕೆಯ ಫ್ಯಾಕ್ಟರಿ ಇತ್ತು. ಕೆ.ಜಿ. ಗಟ್ಟಲೆ ಖರೀದಿಸಿದರೆ ಹೋಲ್ ಸೇಲ್ ದರದಲ್ಲಿ ದೊರೆಯುತ್ತಿತ್ತು. ಆಗಾಗ ಸಹೋದ್ಯೋಗಿಗಳೆಲ್ಲರೂ  ಚಿಪ್ಸ್ ಬೇಕೆಂದರೆ ಹೋಗಿ ತರುತ್ತಿದ್ದೆವು. ಮಹಿಳೆಯರಂತೂ ಊಟದ ಸಮಯದಲ್ಲಿ ಒಟ್ಟಾಗಿ ಹೋಗಿ ಖರೀದಿಸಿ ತರುತ್ತಿದ್ದೆವು . ಹಲವೊಮ್ಮೆ ಪುರುಷ ಸಿಬ್ಬಂದಿಗಳು ಸಹ ಯಾರಾದರೂ ಒಂದಿಬ್ಬರು ಹೋಗಿ ಎಲ್ಲರಿಗೂ ಒಟ್ಟಾಗಿ ಕೊಂಡು ತರುತ್ತಿದ್ದುದು  ರೂಡಿಯಲ್ಲಿತ್ತು ಒಮ್ಮೆ  ಹೀಗೆ ನಮ್ಮ ಲೆಖ್ಖಪತ್ರ ವಿಭಾಗದ ಇಬ್ಬರು ಸಹೋದ್ಯೋಗಿಗಳು ಪ್ರಕಾಶ್ ಮತ್ತು ರಮೇಶ್ (ಪ್ರಕಾಶ್ ಕುಶಾಲನಗರ  ಕಣಿವೆಯ ಬಳಿಯವರು ರಮೇಶ್ ಇಲ್ಲೇ ಕಾಟೀಹಳ್ಳಿಯವರು) ನಮ್ಮೆಲ್ಲರಿಗೂ ಚಿಪ್ಸ್ ತರಲು ಹೋಗಿದ್ದರು.  ಸ್ಕೂಟಿಯಲ್ಲಿ ಹೋದ ಅವರು ಚಿಪ್ಸ್ ಫ್ಯಾಕ್ಟರಿಯ  ಹೊರಗೆ  ಗಾಡಿಯನ್ನು ನಿಲ್ಲಿಸಿ ಫ್ಯಾಕ್ಟರಿಯ  ಒಳ ಹೋದ ತುಸು ಹೊತ್ತಿಗೆ   ಹೊರಗಡೆ ದಢ್ದನೆ ಏನೋ ಬಿದ್ದ ಶಬ್ಧವಾಗಿದೆ. ಏನೆಂದು ಹೊರಬಂದು ನೋಡಿದರೆ  ಟ್ರ್ಯಾಕ್ಟರೊಂದು  ಇವರ ಸ್ಕೂಟಿಯನ್ನು ಗುದ್ದಿ ಬೀಳಿಸಿದೆ. ಅದನ್ನು ನೋಡಿದೊಡನೆ  ಓಡಿ ಹೋದ ಇವರು ಜೋರಾಗಿ  ಕೂಗಿ ಟ್ರಾಕ್ಟರನ್ನು ನಿಲ್ಲಿಸಿದ್ದಾರೆ. ವಾದ ವಿವಾದಗಳು ನಡೆದು ಟ್ರ್ಯಾಕ್ಟರ್ ಚಾಲಕ ತನ್ನ ತಪ್ಪನ್ನು ಒಪ್ಪಿಕೊಳ್ಳಲು ಜಗ್ಗದಿದ್ದಾಗ ನಮ್ಮ ವಿಭಾಗಕ್ಕೆ  ಫೋನಾಯಿಸಿದರು. "ಯಾವುದೇ ಕಾರಣಕ್ಕೂ  ಟ್ರಾಕ್ಟರನ್ನು ಹೋಗಲು ಬಿಡ ಬೇಡಿ ನಾವು ಬರುತ್ತೇವೆ" ಎಂದು ಹೇಳಿ ಕೂಡಲೇ ನಾಲ್ಕಾರು ಮಂದಿ ಸಹೋದ್ಯೋಗಿಗಳು  ಹೋಗಿ ಡ್ರೈವರನ್ನು ಹಿಡಿದಾಗ ಅಲ್ಲಿಯವರೆಗೆ ಭಂಡತನ ತೋರುತ್ತಿದ್ದ ಡ್ರೈವರ್ ನಮ್ಮ ಸಹೋದ್ಯೋಗಿಗಳನ್ನೆಲ್ಲ ನೋಡಿದ ಮೇಲೆ ಭಯದಿಂದ ಮಾಲೀಕರಿಗೆ ಫೋನಾಯಿಸಿದ್ದಾನೆ.

ಬಂದ ಟ್ರ್ಯಾಕ್ಟರ್ ಮಾಲೀಕರು ಕೂಡ ಮೊದ ಮೊದಲಿಗೆ ಒಪ್ಪದೆ ಕೊನೆಗೆ ನಮ್ಮವರೆಲ್ಲಾ ಪಟ್ಟು ಹಿಡಿದ ಕೂಡಲೇ ಒಂದು ಒಪ್ಪಂದಕ್ಕೆ ಬಂದು ಬಿದ್ದು ಜಖಂ ಆಗಿರುವ ಗಾಡಿಯನ್ನು ದುರಸ್ಥಿಗೊಳಿಸಿ ಅದರ ಖರ್ಚು ವೆಚ್ಚವನ್ನು ಭರಿಸುವುದಾಗಿ ಒಪ್ಪಿದಾಗ ಸ್ಕೂಟಿಯನ್ನು ಟ್ರಾಕ್ಟರ್‌ನಲ್ಲಿ ಹಾಕಿಕೊಂಡು ತೆಗೆದುಕೊಂಡು ಹೋಗಲು ತೀರ್ಮಾನಿಸಿದ್ದಾರೆ. ಇನ್ನೊಬ್ಬ ಸಹೋದ್ಯೋಗಿ ಬೈಕಿನಲ್ಲಿ ವರ್ಕ್ ಷಾಪಿಗೆ ಹೋಗೋಣವೆಂದಿದ್ದಾರೆ. ಆದರೆ  ಸ್ಕೂಟಿಯ ಓನರ್ ನಮ್ಮ ಸಹೋದ್ಯೋಗಿ ಪ್ರಕಾಶ್ ಸುಮ್ಮನಿರಬೇಕೆ?!. ಇಲ್ಲಾ ನಾನು ನಿಮ್ಮೊಡನೆ ಬೈಕಿನಲ್ಲಿ ಬರುವುದಿಲ್ಲ ಟ್ರ್ಯಾಕ್ಟರ್ ಮೇಲೆ ಸ್ಕೂಟಿಯೊಂದಿಗೇ ಬರುವೆನೆಂದು ಅವರು ಕೂಡ ಟ್ರ್ಯಾಕ್ಟರ್ ಹತ್ತಿ ಸ್ಕೂಟಿಯನ್ನು ಹಿಡಿದುಕೊಂಡು ಟ್ಯಾಬ್ಲೋ ತರಹ ಟ್ರ್ಯಾಕ್ಟರ್ ಮೇಲೆ ನಿಂತುಕೊಂಡೇ ಹೋಗಲು ರೆಡಿಯಾಗಿದ್ದಾರೆ.  ಅವರು ಟ್ರ್ಯಾಕ್ಟರ್ ಹತ್ತಿ ನಿಂತು ಸ್ಕೂಟರ್ ಹ್ಯಾಂಡಲ್ ಹಿಡಿದುಕೊಂಡು ಹೋಗುತ್ತಿದ್ದ ಭಂಗಿಯನ್ನು ನೋಡಿದ ಅವರೊಂದಿಗೆ ಹೋಗಿದ್ದ ಹಲವು ಸಹೋದ್ಯೋಗಿಗಳು ವಿಭಾಗಕ್ಕೆ ಬಂದು "ನೋಡಿ ನೋಡಿ, ಈಗ ಪ್ರಕಾಶ ಯಾವ ಸ್ಟೈಲಿನಲ್ಲಿ ಬರುತ್ತಾರೆ, ಈಗ ಇಲ್ಲಿಂದ ಹೊರಟು ಸಿಟಿ ಮಧ್ಯದಿಂದ ಹಾದು ಹೊರ

ವಲಯದ ವರ್ಕ್ಷಾಪಿಗೆ ಹೋಗುತ್ತಾರೆ" ಎಂದಾಗ ನಾವೆಲ್ಲಾ ಕುತೂಹಲದಿಂದ ಹೊರ ನಿಂತು ಬಹುಶಃ ಅವರು ಬಿದ್ದ ಸ್ಕೂಟಿಯನ್ನು ತಳ್ಳಿಕೊಂಡು ಹೋಗುವರೇನೋ ಪಾಪ ಎಷ್ಟು ದೂರ ಎಂದುಕೊಂಡು ಕಾಯುತ್ತಿದ್ದೆವು. ಆದರೆ ಪ್ರಕಾಶ್ ಸ್ಕೂಟಿಯನ್ನಷ್ಟೇ ಟ್ರ್ಯಾಕ್ಟರ್ ಮೇಲೆ ಹಾಕದೇ ತಾವೂ ಕೂಡ ಜಖಂಗೊಂಡ ಸೊಟ್ಟ ಮೂತಿಯ ಸ್ಕೂಟಿಯನ್ನು ನಿಲ್ಲಿಸಿ ಅದರ ಹ್ಯಾಂಡಲ್ ಗಳನ್ನು ಹಿಡಿದು ಕೊಂಡು ಸ್ಕೂಟಿ ಕಂಪೆನಿಯ ಅಡ್ವರ್ಟೈಸ್ಮೆಂಟ್ ಕೊಡುವಂತೆ ಟ್ರ್ಯಾಕ್ಟರ್‌ನಲ್ಲೇ ಮೆರವಣಿಗೆ ಹೋಗುವಂತೆ ನಿಂತುಕೊಂಡು ಹೋಗುತ್ತಿರುವಾಗ ರಾಷ್ಟ್ರೀಯ ಹಬ್ಬಗಳಲ್ಲಿ ಶಾಲಾ ಮಕ್ಕಳ ಸ್ತಬ್ಧ ಚಿತ್ರದ ನೆನಪಾಗಿ ನಾವೆಲ್ಲಾ ಜೋರಾಗಿ ಕೂಗಿಕೊಂಡು ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದರೆ ಅವರು ಅದನ್ನು ಎಂಜಾಯ್ ಮಾಡುತ್ತಾ ನಮ್ಮೆಡೆಗೆ ಒಂದು ಕೈ ಬೀಸುತ್ತಾ ಯುದ್ಧದಲ್ಲಿ ಗೆದ್ದವರಂತೆ ವಿಜಯೋತ್ಸವದ ನಗೆ ಬೀರುತ್ತಿದ್ದರು. ಹಾಗೆಯೇ ಡೈರಿ ಸರ್ಕಲ್ನಲ್ಲಿದ್ದ ನಮ್ಮ ಕಛೇರಿಯ ಮುಂದಿನಿಂದ ಬಿ.ಎಂ.ರಸ್ತೆಯಲ್ಲಿ ನಗರದ ಮಧ್ಯ ಭಾಗದಿಂದ ಹಾದು ರಾಜಬೀದಿಯಲ್ಲಿ ದೂರದ ವರ್ಕ್ ಷಾಪ್ ತಲುಪ ಬೇಕಿತ್ತು !. ಅವರು ಅಲ್ಲಿಯವರೆಗೂ ಟ್ರ್ಯಾಕ್ಟರ್ ಮೇಲೆ ಸ್ಕೂಟರ್ ಹಿಡಿದು ನಿಂತು ಕೊಂಡು ಹೋದ ಭಂಗಿಯ ದೃಶ್ಯವನ್ನು ನೆನೆದರೆ ಇಂದಿಗೂ ನಗೆಯುಕ್ಕಿ ಬರುತ್ತದೆ. ಇದೊಂದು ನನ್ನ ವೃತ್ತಿ ಬದುಕಿನ ರಂಜನೀಯ ಘಟನೆ. ■



## ಕಾರ್ ಕಲಿಯೋದು

ಅಮ್ಮ, ನಾವು ನಮ್ಮ ವಿದೇಶ ವಾಸದಲ್ಲಿ ಕನಿಷ್ಠ ಐದು ವರ್ಷ ಇರಲೇಬೇಕು ನಿನಗೆ ಆನ್ಲೈನ್‌ನಲ್ಲಿ ಕಿರಾಣಾ ಸಾಮಾನು, ಹಣ್ಣು ಇತ್ಯಾದಿ ಎಲ್ಲಾ ತರಿಸೋದು ಹೇಳಿಕೊಟ್ಟಾಯ್ತು.. ಈಗ ನಿಂಗೆ ಅದರ ಸಮಸ್ಯೆ ಇಲ್ಲ ಅಲ್ವಾ? ಅಂದ್ಲು ಮಗಳು ಮಧು..ಹ್ಞೂ..ಹೌದು, ಕಣೇ..ಆಗ್ಲೇ ಬಿಗ್ ಬಾಸ್ಕೆಟ್‌ನಿಂದ ಕಿರಾಣಾ ಇತ್ಯಾದಿ ತರಿಸೋದು ಗೊತ್ತಾಗಿದೆ.ಇನ್ನು ಕಾರು ಡ್ರೈವಿಂಗ್ ಒಂದು ಬಾಕಿ.. ಅಂದಾಗ ಮಗಳು ಶಾಕ್ ಆದ್ಲು..ಅಲ್ಲಮ್ಮಾ, ಈ ವಯಸ್ನಲ್ಲಿ ಏನಮ್ಮಾ ಇದು? ಹೌದು ಕಣಮ್ಮ, ಆ ಓಲಾ, ಊಬರ್ ಕಾರು ಒಂದು ಬುಕ್ ಮಾಡೋದು ಬಂದ್ರೆ ಸಾಕು..ಅಂದಾಗ ಮಗಳು, ಅಳಿಯ ನಕ್ಕು ನಕ್ಕು ಸುಸ್ತಾದ್ರು . ಅಮ್ಮನ ಪ್ರಕಾರ ಓಲಾ,ಊಬರ್ ಬುಕ್ ಮಾಡೋದು,ಕಾರು ಓಡಿಸಿದಂತೆ, ತನಗೇ ಗೊತ್ತು ಎಂಬಂತಿತ್ತು.

ದಂಸಆ

- ✓ ಗುಲಾಬಿ ಹೂವಿನಲ್ಲಿ ಅವರಿಗೇನು ದೋಷ ಕಾಣಲಿಲ್ಲ. ಆದುದರಿಂದ ಅವರು ಮುಳ್ಳಿನ ಬಗ್ಗೆ ದೂರತೊಡಗಿದರು.
- ✓ ಆಸ್ಪತ್ರೆ ಗೋಡೆಗಳು ಕೇಳಿಸಿಕೊಂಡಷ್ಟು ಪ್ರಾರ್ಥನೆ ದೇವಸ್ಥಾನದ ಗೋಡೆಗಳು ಕೇಳಿಸಿಕೊಂಡಿರುವುದಿಲ್ಲ.
- ✓ ವೈಲ್ ಇಂಟೆಲಿಜೆನ್ಸ್ ಈಸ್ ಬಿಕಮಿಂಗ್ ಆರ್ಟಿಫಿಷಿಯಲ್ ಸ್ಟುಪಿಡಿಟಿ ವಿಲ್ ಆಲ್ವೇಸ್ ರೆಮೇನ್ ಒರಿಜಿನಲ್.
- ✓ ವಯಸ್ಸಾಗುತ್ತಿದ್ದಂತೆ ನಿಮಗೆ ಅರಿವಾಗುತ್ತದೆ. ನನಗೆ ಎರಡು ಕೈಗಳಿವೆ ಒಂದು ನನ್ನ ಸಹಾಯಕ್ಕಾಗಿ ಇನ್ನೊಂದು ಅಗತ್ಯವಿರುವವರಿಗೆ ಸಹಾಯ ಮಾಡಲು.
- ✓ ಯು ಟಾಕ್ ವೆನ್ ಯು ಸೀಸ್ ಟು ಬಿ ಅಟ್ ಪೀಸ್ ವಿತ್ ಯುವರ್ ಥಾಟ್ಸ್. ಅಂಡ್ ವೆನ್ ಯು ಕೆನ್ ನೊ ಲಾಂಗರ್ ಡ್ವೆಲ್ ಇನ್ ದಿ ಸಾಲಿಟ್ಯೂಡ್ ಆಫ್ ಯುವರ್ ಹಾರ್ಟ್ ಯು ಲಿವ್ ಇನ್ ಯುವರ್ ಲಿಪ್ಸ್. ಅಂಡ್ ಸೌಂಡ್ ಈಸ್ ಎ ಡೈವರ್ಷನ್ ಅಂಡ್ ಪಾಸ್ಟೈಮ್.
- ✓ ಸತ್ಯ ಮಿಂಚಿನ ತರಹ. ಅದು ಈಗ ಹೊಳೆಯುತ್ತದೆ ಈಗ ಮಾಯವಾಗುತ್ತದೆ. ಆದರೆ ಸುಳ್ಳು ತಿಗಣೆಯ ತರಹ. ಪ್ರತಿ ದಿನವೂ ಕಚ್ಚುತ್ತದೆ. ನಾವು ಅದನ್ನು ಹಾಸಿಗೆಯಲ್ಲಿ ಹೊಸಕಿ ಹೊಸಕಿ ಹಾಕುತ್ತಿರುತ್ತೇವೆ.
- ✓ ದುರ್ಬಲರು ಕ್ಷಮಿಸರು. ಬಲಾಢ್ಯರಿಗೆ ಮಾತ್ರ ಆ ಶಕ್ತಿ ಇದೆ.
- ✓ ಎ ಚೈಲ್ಡ್ ನೀಡ್ಸ್ ಬೋತ್ ಪೇರೆಂಟ್ಸ್. ಬಟ್ ಮೋರ್ ದ್ಯಾನ್ ದಟ್ ಎ ಚೈಲ್ಡ್ ನೀಡ್ಸ್ ಎ ಹ್ಯಾಪಿ ಪೇರೆಂಟ್.
- ✓ ಸರ್ಚಿಂಗ್ ಫಾರ್ ಹ್ಯಾಪಿನೆಸ್ ಈಸ್ ಲೈಕ್ ಸರ್ಚಿಂಗ್ ಫಾರ್ ಯುವರ್ ಫೋನ್. ಮೋಸ್ಟ್ ಆಫ್ ದಿ ಟೈಂ ಇಟ್ ಈಸ್ ಇನ್ ಯುವರ್ ಹ್ಯಾಂಡ್.
- ✓ ತಪ್ಪೊಪ್ಪಿಗೆ ಎಂದರೆ ಅವನು ಸರಿ, ತಪ್ಪು ನನ್ನದು ಎಂದಲ್ಲ. ನನ್ನ ಅಹಂಗಿಂತ ನಮ್ಮಿಬ್ಬರ ನಡುವಿನ ಸಂಬಂಧ ಹೆಚ್ಚು ಮುಖ್ಯ ಎಂದರ್ಥ.
- ✓ ಬಾಲ್ಯದಲ್ಲಿ ನಾವು ವಿನಾ ಕಾರಣ ನಗುತ್ತೇವೆ. ವಯಸ್ಕರಾದಾಗ ಕಾರಣ ಮುಚ್ಚಿಡಲು ನಗುತ್ತಿರುತ್ತೇವೆ.
- ✓ ವೈಲ್ ಇನ್ವೆಸ್ಟಿಂಗ್ ವಿ ಕ್ಯಾಲ್ಕುಲೇಟ್ ಇಂಟರೆಸ್ಟ್ ಆನ್ ಪ್ರಿನ್ಸಿಪಲ್. ಇನ್ ರಿಯಲ್ ಲೈಫ್ ವಿ ಟಾಕ್ ಆಫ್ ಪ್ರಿನ್ಸಿಪಲ್ಸ್ ಬಟ್ ಆ್ಯಕ್ಟ್ ಅಸ್ ಪರ್ ಅವರ್ ಇಂಟರೆಸ್ಟ್ಸ್.
- ✓ ನಿರೀಕ್ಷೆಗಳೊಂದಿಗೆ ದಿನ ಪ್ರಾರಂಭವಾಗುತ್ತದೆ ಕಲಿಕೆಗಳಿಂದ ಮುಗಿಯುತ್ತದೆ. ಇದೇ ಜೀವನ. ಆನಂದಿಸಿ.
- ✓ ಪ್ರಾಬ್ಲಮ್ಸ್ ಆರ್ ಪಾರ್ಟ್ ಆಫ್ ಲೈಫ್. ಫೇಸಿಂಗ್ ದೇಮ್ ಈಸ್ ಆರ್ಟ್ ಆಫ್ ಲೈಫ್.
- ✓ ಸೈಲೆನ್ಸ್ ಈಸ್ ಮೋರ್ ದ್ಯಾನ್ ಎ ಲ್ಯಾಕ್ ಆಫ್ ವರ್ಡ್ಸ್.

■

# ಶ್ವಾನ ಪುರಾಣ

**ಲತಾ ಹೆಗಡೆ**

'ಭೌ ಭೌ!' ಕರ್ಕಶ ಅರಚುವಿಕೆ, 'ಗರ್ರ್!' ಶ್ವಾನದ ಸಿಟ್ಟಿನ ಗುರುಗುಟ್ಟುವಿಕೆಯೊಟ್ಟಿಗೆ "ಹಚಾ ಹಚಾ! ನಡಿ ಅತ್ಲಾಗ... ದರಿದ್ರದ್ದು! ಸೂಳೀ ಮಕ್ಳು ಮಂದಿ ಅಡ್ಡಾಡೂ ರಸ್ತೀದಾಗ ನಾಯೀನ ಯದಕ್ಕ ಬಿಡ್ಬೇಕೂ? ಅದ್ರಲ್ಲೂ ಮಕ್ಳೂ ಮರೀ ಅಡ್ಡಾಡ್ತಿರ್ತಾರು ಚೈನು ಸೈತ ಕಟ್ಟಿಲ್ಲ. ಬೀದೀ ಬಸವನ್ಹಾಂಗ ಬಿಡೂದು ಅಂತಂದ್ರ... ರಸ್ತೀ ಯೇನು ಇವ್ರಪ್ಪನ ಮನೀದೇನೂ? ಕಡೀತಂತಂದ್ರ ದವಾಖಾನೀಗ ರೊಕ್ಕ ಕೊಡ್ತಾರೇನೂ... ಪ್ರೀತೀಲಿ ಸಾಕಿದ್ದನ್ನ ಮನ್ಯಾಗ ಇಟ್ಗೋಂಡು ಮುದ್ಮಾಡ್ಬೇಕು. ಥೂ! ಅನ್ಸಿವಿಲೈಜಡ್ ಪೀಪಲ್! ಏ ಹುಚ್ಮಂಗ್ಯಾ ಹೋಗತ್ತಾಗ... ಯಾರದೀರೀ? ಹಿಡ್ಕೋರಿ ಅದನ್ನ! ಹಚಾ!" ತಾರಕ ಸ್ವರದ ಸುಪ್ರಭಾತಕ್ಕೆ ಸವಿನಿದ್ದೆಯಲ್ಲಿದ್ದ ನಮ್ಮ ಕಲ್ಲೇಶಿಗೆ ಬಡಿದೆಬ್ಬಿಸಿದಂತಾಗಿತ್ತು. ಕಣ್ಣುಜ್ಜಿ ಅಭ್ಯಾಸಬಲದಿಂದ ಗಡಿಯಾರದೆಡೆ ಕಣ್ಣು ಹಾಯಿಸಿದ್ದ, ಇನ್ನೂ ಆರುಗಂಟೆಯಷ್ಟೇ. ಅಲ್ಲೇ ನೇತುಹಾಕಿದ್ದ ಕ್ಯಾಲೆಂಡರಿನಲ್ಲಿ ಮೂವತ್ತೊಂದನ್ನು ಕೆಂಪು ಗೆರೆಯಿಂದ ಗೋಲಾಯಿಸಿದ್ದೇಕೆಂದು ನೆನಪಿಸಿಕೊಳ್ಳಲು ಅರೆಕ್ಷಣ ಹಿಡಿದಿತ್ತು. ಹೌದೇಹೌದು; ಇವತ್ತೇ ಆ ದಿನ, ಡಿಸೆಂಬರಿನ ಕೊನೇ ದಿನವೆಂದ ಮೇಲೆ ಹೊಸವರ್ಷದ ಪಾರ್ಟಿಯೆಂದು ಗುಂಡೇರಿಸಬಹುದು. ಇನ್ನೊಂದು ವಿಶೇಷತೆಯೂ ಇದೆ. ಇತ್ತೀಚೆಗಷ್ಟೇ ತಾನು ಹಿರಿಯ ನಾಗರಿಕ ಪಟ್ಟವನ್ನಲಂಕರಿಸಿದ್ದನ್ನೇ ನೆಪವಾಗಿಸಿಗಳಸ್ಯ ಕಂಠಸ್ಯರೆಲ್ಲಾ ಸೇರಿ ರಾತ್ರಿ ಪಾರ್ಟಿಯನ್ನು ಆಯೋಜಿಸಿದ್ದಾರೆಂದ ಮೇಲೆ ನಾನಂತೂ ಪಾರ್ಟಿಯಲ್ಲಿ ಮಿಂಚಲೇಬೇಕು.

"ಮತ್ತ ರಸ್ತೀ ನಿಮ್ಮಪ್ಪನ ಮನೀದೇನೂ? ಎಲ್ಲಿಂದ್ಲೋ ಫಾಲ್ತೂ ಅಡ್ಡಾಡ್ಕೋತ ಬರಾವ್ರೀಗ ನಮ್ರಸ್ತೀನ ಯದಕ್ಬೇಕು? ನಮ್ಮನೀ ಮುಂಥ ನಮ್ರಸ್ತೀದಾಗ ನಮ್ರೂಬೀನ ಬಿಟ್ಟೇವಿ, ನಿಮ್ಮನೀ ಮುಂದ ಬಿಟ್ಟಿಲ್ಲಲ್ಲಾ. ಅಷ್ಟಕ್ಕೂ ನಮ್ರೂಬೀ ಭಾಳಂದ್ರ ಭಾಳ ಸಾಧೂ ಸ್ವಭಾವದಾಕಿ ಅದಾಳು. ನಿಮ್ಮಂಥಾ ಧಿಮಾಕಿನ ಮಂದೀಗಷ್ಟ ಕಚ್ತಾಳು, ಸುಮ್ನುಗ ಯೆಲ್ರೀಗೂ ಕಚ್ಚೂದಿಲ್ಲ ತಿಳ್ಕೋರೀ ಏನಂದ್ರೀ? ಹುಚ್ಮಂಗ್ಯಾ ಅಂದ್ರೇನೂ? ಅದ್ಯಾಕ ಹುಚ್ಮಂಗ್ಯಾ ಆದೀತು! ಹಂಗಂದಾವ್ರ ಹುಚ್ಮಂಗ್ಯಾ!" ಅಪ್ಪಾಗಿಪ್ಪಾ ಅಂದದ್ದಕ್ಕಿಂತ ಮಗಳಂತೇ ಸಾಕಿದ್ದ ಪ್ರೀತಿಯ ರೂಬಿಗೆ ಹುಚ್ಮಂಗ್ಯಾ ಅಂದದ್ದಷ್ಟೇ ಅಲ್ಲದೇ 'ನಾಯಿ' ಎಂದದ್ದು ಶ್ವಾನೇಶಿಯ ಉಪ್ಪಿನ ಪ್ರಮಾಣವನ್ನು ಯದ್ವಾತದ್ವಾ ಏರಿಸಿತ್ತು, ಪರಿಣಾಮ ನಖಶಿಖಾಂತ ಉರಿದವನ ವಾಗ್ಬಾಣವೂ ಬತ್ತಳಿಕೆಯಿಂದ ರಭಸವಾಗಿಯೇ ಬೂಮ್ರ್ಯಾಂಗಾಗಿತ್ತು.

"ನಾವ್ಯೆಲ್ಲಾರ ಅಡ್ಡಾಡ್ತೇವಿ, ಕೇಳೋಕೆ ನೀವ್ಯಾರ್ರೀ? ಅಷ್ಟಕ್ಕೂ ನೀವ್ಹೇಳಿದ್ದೂ ಬರೋಬ್ಬರದ; ನಾಯಿ ಸಾಕಿದ್ದಕ್ಕ ನಿಮ್ ವಿಚಾರಧಾರೇನೂ ಅದ್ಹ್ಯಾಂಗ ಹೊಂಟಥ ಮತ್ತ ಅದ್ಹ್ಯಾಂಗ ಆಗ್ಯದ. ಅಲ್ರೀ, ಅವುಕ್ಕ ಏರ್ಯಾ, ಬೌಂಡ್ರೀ ಇರೂ ಹಾಂಗ ಮಂದೀದೂ ಇರ್ತದ ಅಂದ್ಕೊಂಡ್ರೇನೂ? ನಿಮ್ಹಾಂಗ ನಾಯೀ ಹಿಡ್ಕೊಂಡು ಫಾಲ್ತೂ ಅಡ್ಡಾಡೋ ಪೈಕಿಯವ್ರು ನಾವಲ್ಲ ತಿಳ್ಕೋರೀ ವಾಕಿಂಗು ಯೆಲ್ಲಾರ ಮಾಡ್ಕೋತೇವಿ, ಕೇಳೂ ಹಕ್ಕು ನಿಮಗಿಲ್ಲ. ಅದು ಕಡೀತಂದ್ರ ರೊಕ್ಕಾ ಕೊಡ್ತೀರೇನೂ? ಮತ್ತ ನೋವು ತಿನ್ನೋರು ಯಾರು? ಏನಂದ್ರೀ? ನಿಮ್ರೂಬೀ ಹೌದಿಲ್ಲೋ ಅದನ್ನ ಮನೀ ಒಳಗ ಇಟ್ಕೊಂಡು ಸಿಂಹಾಸನದಾಗ ಕೂಡ್ಸಿ ಆರ್ತೀ ಆದ್ರೂ ಮಾಡ್ರೀ, ಅಪ್ಗೊಂಡಾದ್ರೂ ಮುದ್ದಾಡ್ರೀ; ಬ್ಯಾಡಂತಂದ್ರ ಹೊತ್ಗೊಂಡು ರಮಿಶ್ಕೋತ ಕೂಡ್ರಿ. ಅದೂ ಸಾಕಾಗ್ಲಿಲ್ಲಂದ್ರ ರೂಭೀ ರೂಭೀ ಅಂತ ಲಬೋಲಬೋ ಹೊಯ್ಕೋರೀ ಯಾರ್ಬ್ಯಾಡಂದ್ರು? ಸಾರ್ವಜನಿಕ ರಸ್ತೀದಾಗ ಸರಪಳಿ ಕಟ್ಲಾರ್ದೇ ಒಂಟೀ ಬಿಡ್ಬಾರ್ದಷ್ಟೇ!" ವಾಗ್ಬಾಣಕ್ಕೆ ಪ್ರತಿಬಾಣ ಬಿಟ್ಟಾಗಿತ್ತು.

ವಾಗ್ಬಾಣ, ಪ್ರತಿಬಾಣ, ತಿರುಗುಬಾಣದ ಹಂತವೂ ಮುಗಿದು ಬಹುವಚನದಿಂದ ಪ್ರಾರಂಭವಾದ ಜಗಳ ಏಕವಚನಕ್ಕೆ ತಿರುಗಿ ಪಾಶುಪತಾಸ್ತ್ರ, ಸರ್ಪಾಸ್ತ್ರ, ಶ್ವಾನಾಸ್ತ್ರ ಇನ್ನೂ ಯಾವ್ಯಾವುದೋ ಅಸ್ತ್ರ ಪ್ರಯೋಗವಾಗಿ ನಾಯೀಜಗಳ ತಾರಕಕ್ಕೇರಿ ಕೈಕೈ ಮಿಲಾಯಿಸುವ ಹಂತ ತಲುಪಿದಾಗ ತನ್ನ ಸಂಭ್ರಮವನ್ನು ಬದಿಗಿಟ್ಟ ಕಲ್ಲೇಶಿ ಕೆಟ್ಟದಾಗಿ ಆಕಳಿಸುತ್ತಾ ಹೊರಬಂದ. ಪಕ್ಕದ ಮನೆಯ ಶ್ವಾನೇಶನ ಶ್ವಾನಪ್ರೀತಿಗೆ ರೋಸಿಹೋದವರಲ್ಲಿ ಇವನೇ ಮುಂಚೂಣಿಯಲ್ಲಿದ್ದ. ಪಕ್ಕದಲ್ಲೇ ಇದ್ದದ್ದರಿಂದ ಹೆಚ್ಚಿನ ತೊಂದರೆ ಇವನಿಗೇ ಆಗಿ ಪಾಡು ಬೀದೀನಾಯಿಯಂತಾಗಿತ್ತು. ಮೊದಲೇ ಸೈನೋಫೋಬಿಯಾ ಪೀಡಿತ ಮನುಷ್ಯಪ್ರಾಣಿಯಾದದ್ದಕ್ಕೆ ರಸ್ತೆಯಲ್ಲಿ ಹೋಗುವಾಗ ಕಣ್ಣಳತೆಯ ದೂರದಲ್ಲಿ ಬೀದೀನಾಯಿ ತನ್ನ ಪಾಡಿಗೆ ಮಲಗಿದ್ದರೂ ಟ್ರ್ಯಾಕ್ ಬದಲಿಸೋ ಪುಕ್ಕಲೇಶಿಯಾಗಿ ಮಳೆ, ಛಳಿ, ಗಾಳಿ, ಬಿಸಿಲಿಗೆ ಹೆದರದ ಅಚಲ ಬಂಡೆಯ ಕಲ್ಲೇಶಿ ಹೆಸರಿಗೆ ಕಳಂಕ ತರುತ್ತಿದ್ದ!

ಇಂತಿರ್ಪ ಕಲ್ಲೇಶಿ ಪಕ್ಕದ ಮನೆಯವರು ನಾಯಿಯನ್ನು ಸಾಕಲು ತಂದಾಗ ನಾಲ್ಕು ಗೋಡೆಯ ಬೆಚ್ಚನೆಯ ಭದ್ರ ಕೋಟೆಯಲ್ಲಿಂದಲೇ ಗಂಟಲಿನ ವಾಲ್ಯೂಮನ್ನು ಆದಷ್ಟೂ ಕಿರಿದಾಗಿಸಿ ಮನಸೋ ಇಚ್ಛೆ ಹಿಡಿಶಾಪ ಹಾಕಿದ್ದ. ಬೆಳ್ಬೆಳಗ್ಗೆ ಸರಪಳಿ ಕಟ್ಟದೇ ರಸ್ತೆಗೆ ಬಿಡುವುದು; ರಸ್ತೆಯೇ ತನ್ನ ಮನೆಯೆಂಬಂತಹ ರಾಜಾರೋಷ ಓಡಾಟ; ಸಣ್ಣ ಇಣಚಿ ಕಂಡರೂ ಕಿವಿ ತೂತಾಗುವಂತಹ ಅದರ ಅರಚುವಿಕೆ, ಅದನ್ನೂ ಮೀರಿಸುವ ದೊಡ್ಡ ದನಿಯಲ್ಲಿ 'ಏ ರೂಬೀ! ಇಲ್ಲೇ ಸೂಸೂ ಮಾಡು ದೂರ ಹೋಗ್ಬ್ಯಾಡ, ಗಲೀಜದ; ಇತ್ತಾಗ ಬಾ, ಕಜ್ಜೀನಾಯಿ ಕಡೀತಾವ ಅತ್ಲಾಗ ಬ್ಯಾಡ' ಹೇಳುತ್ತಲೇ ಹಿಂದ್ಹಿಂದೇ ತಿರುಗುತ್ತಾ ಚುಮುಚುಮು ನಸುಕಿನಲ್ಲಿ ನಿರಾತಂಕವಾಗಿ ಅವರಿವರ ಮನೆಯ ಹೂ ಕದಿಯುವ ಶ್ವಾನೇಶಿಯ ಜನ್ಮದಾತೆ ಶ್ವಾನೇಶಮ್ಮನ ಧೋರಣೆಗೆ ಒಳಗೊಳಗೆ ಕುದಿಯುತ್ತಿದ್ದ. ಆ ಎಲ್ಲಾ ನಮೂನೆಯ ಅರಚುವಿಕೆ, ಕದಿಯುವಿಕೆಯ ಚಾಳಿಗೆ ನಮ್ಮ ಕಲ್ಲೇಶಿಯ ನಿದ್ರಾಭಂಗವಾದರೂ ತನ್ನದೇ ಮೈ ಪರಚಿಕೊಳ್ಳುತ್ತಿದ್ದನೇ ವಿನಃ ಬೇರೇನೂ ಮಾಡದವನಾಗಿದ್ದ. ಶ್ವಾನೇಶಮ್ಮನೋ ಧಾಡಶೀತನದಲ್ಲಿ ಆ ಮನೆಗೆ ಹಿರಿಯಜ್ಜಿಯೇ ಆಗಿ ಬಾಯಿಗೆ ಸಿಕ್ಕರೆ ಮುಖಮೂತಿ ನೋಡದೇ ಹುಟ್ಟಡಗಿಸುತ್ತಿದ್ದಳು. ಸಾಲದ್ದಕ್ಕೆ ಮತ್ತೊಬ್ಬರ ಮನೆಯ ಮುಂದೆ ಮೂತ್ರ, ಸಂಡಾಸು ಮಾಡಿಸುವ ನಿರ್ಭಿಡೆತನಕ್ಕಂತೂ ಇವ ಜ್ವಾಲಾಮುಖಿಯಾಗಿ ಕೊತಕೊತ ಕುದಿಯುತ್ತಾ ಭಂಡಧೈರ್ಯದಿಂದ ಬೈಯಲೆಂದು ಹೊರ ಬಂದವ ಅವರ ದಾಷ್ಟೀಕತೆಗೆ ಹೆದರಿ, ಮುದುರಿ, ಹಲ್ಕಿರಿದು ಅಂಗಳದಲ್ಲಿ ಬಿದ್ದ ದಿನಪತ್ರಿಕೆಯನ್ನೆತ್ತಿಕೊಂಡು ಹೆಡ್‌ಲೈನ್ಸ್ ಓದುವಂತೆ ನಟಿಸಿ ಒಳಸೇರಿಬಿಡುತ್ತಿದ್ದ. ಅಂತೂ ಇದೀಗ ಯಾರೋ ಒಬ್ಬ ಧೈರ್ಯಸ್ಥ ಶ್ವಾನೇಶನನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾನಲ್ಲಾ, ಆತನನ್ನು ಭಗವಂತ ನೂರ್ಕಾಲ ಸುಖವಾಗಿಟ್ಟಿರಲಿ ಎಂದು ಮನಸಾರೆ ಹರಸುತ್ತಾ ಬಿಟ್ಟೀ ಶೋ ಕಣ್ಮನ ತುಂಬಿಕೊಳ್ಳತೊಡಗಿದ. ಅಷ್ಟರಲ್ಲಿ ಮತ್ಯಾರೋ ದಾರಿಹೋಕನ ಮಧ್ಯಸ್ಥಿಕೆಯಲ್ಲಿ ಜಗಳಕ್ಕೆ ಇತಿಶ್ರೀಯಾಗಿ ತನ್ನ ಮನದಾಳದ ಮಾತನ್ನು ಶ್ವಾನದ್ವೇಷಿಯ ಮೂಲಕ ತಾನೇ ಹೊರಹಾಕಿದಂತೆ ಲಹರಿಯಲ್ಲಿ ಒಳಬಂದ ಕಲ್ಲೇಶಿಗೀಗ ಅಂದಿನ ವಿಶೇಷತೆಯ ನೆನಪಾಗಿ ಸೆಂಟರ್ ಆಫ್ ಅಟ್ರಾಕ್ಷನ್ನಾಗಲು ಅಣಿಯಾಗತೊಡಗಿದ.

ಕಲ್ಲೇಶಿಯ ಅರ್ಧಾಂಗಿ ಕಲಾವತಿ ಉರ್ಫ್ ಕಲ್ಲಿ ಕಿಟ್ಟೀ ಗೆಳತಿಯರೊಡನೆ ಬಿಟ್ಟೀ ಭಾಗ್ಯದಲ್ಲೊಂದಾದ ಫ್ರೀಬಸ್ಸು ಪಯಣದ ಲಾಭ ಪಡೆಯಲೆಂದು ಕರ್ನಾಟಕ ದರ್ಶನಕ್ಕೆ ಹೋಗಿದ್ದಳು. ಟೆಕ್ಕೀ ಮಗರಾಯನೋ ಮಹಾನಗರದಲ್ಲಿ ಅಂಕೆಶಂಕೆಯಿಲ್ಲದೇ ಹಾಯಾಗಿದ್ದು ಬಾಯಿ ಚಪಲವಾದಾಗಲೆಲ್ಲಾ ಪೀಜೀ ಕೋಣೆಗೇ ಪಿಜ್ಜಾ ಆರ್ಡರಿಸಿ ಮೆದ್ದು ಗೆಳೆಯರೊಡನೆ ಆಗಾಗ ಗುಂಡೇರಿಸಿ ಗುಂಡಾಗಿದ್ದ. ಮಗಳ ಮದುವೆ ಮುಗಿಸಿದ್ದೇ ಸಾಧನೆಯೆಂಬಂತೆ

ಸ್ವಯಂ ನಿವೃತ್ತಿ ಪಡೆದ ಕಲ್ಲೇಶಿ ಸದಾಕಾಲ ಎಮ್ಮೆಯಂತೆ ಮೆಲುಕುತ್ತ ಬೇಕಾಬಿಟ್ಟಿ ಇರತೊಡಗಿದಾಗ ಪ್ರೀತಿಯ ಕಲ್ಲಿ ಕಠಿಣ ವಾರ್ಡನ್ನಿನಂತಾಗಿದ್ದಳು. 'ಲೇ ಕಲಾವತೀ! ಅದ್ಯಾಕೆ ಹಂಗಾಡ್ತೀ? ಎಲ್ಲಾದಕ್ಕೂ ಹಂಗ್ಮಾಡ್ಬೇಡಿ, ಹಿಂಗ್ಮೂಕ್ಡ್ಬೇಡಿ, ಅದನ್ನ ತಿನ್ಬೇಡಿ, ಇಷ್ಟೊ್ಹೊತ್ತಲ್ಲಿ ಮಲಗ್ಬೇಡಿ, ಅಲ್ಹೋಗ್ಬೇಡಿ, ಇಲ್ಹೋಗ್ಬೇಡಿ ಅಂದ್ಕೋತ



ಯಾವಾಗ್ಲೂ ಬೇಡಗಳ ಬೇಡಿ ತೊಡಿಸ್ತಿರ್ಬೇಡ್ವೇ... ಕಲ್ಲಿ ಅನ್ನೋ ಹೆಸರಿಗೆ ತಕ್ಹಂಗೆ ಕಲ್ಲಾಗ್ಬೇಡ್ವೇ...' ಅಂತೆಲ್ಲಾ ಹೇಳ್ಬೇಕಂ–ದ್ಕೊಂಡದ್ದು ಅನ್ನೋಕ್ಕಾಗ್ದೇ ಬಾಯೊಳಗೇ ಕರಗಿ ಹೊಟ್ಟೆ ಸೇರ್ತಿತ್ತು. ಆದರೀಗ ಅವಳಿರದ ಕೆಲವು ದಿನಗಳನ್ನಾದರೂ ಸದುಪಯೋಗಪಡಿಸಿಕೊಂಡು ಸ್ವಚ್ಛಂದ ಪಕ್ಷಿಯಾಗಿ ಎಲ್ಲೆಂದರಲ್ಲಿ ಹಾರಾಡುವ ಸ್ಕೆಚ್ ಹಾಕಿದವ ಅಂದಿನ ರಾತ್ರಿಯ ಪಾರ್ಟಿಯಲ್ಲಿ ಮಿಂಚಲು ತಲೆಗೊಂದಷ್ಟು ಪೇಂಟಿಂಗ್ ಶಾಸ್ತ್ರ ಮಾಡಿ ಮುಗಿಸಿದ, ಕಲಸಿದ್ದು ನೀರಾದದ್ದಕ್ಕೆ ಅದು ಕೂದಲಿಂದ ಬುರುಡೆಗಿಳಿದು ಸೋರಿ ಮುಖ, ಕುತ್ತಿಗೆ, ಎಲ್ಲೆಂದರಲ್ಲಿ ಕಡ್ಡೀ ಜಲಪಾತದಂತೆ ಹರಿಯತೊಡಗಿತು. ಹಚ್ಚಿಕೊಂಡು ಸ್ವಲ್ಪ ಹೊತ್ತು ಬಿಡಬೇಕೆಂಬ ನಿಯಮ ಪಾಲಿಸಬೇಕಿತ್ತಲ್ಲ; ಸೋರುತ್ತಿದ್ದದ್ದನ್ನು ಲೆಕ್ಕಿಸದೇ ಶಿಶುನಾಳರ ತತ್ವಪದವನ್ನು ತಿರುಚಿ 'ಸೋರುತಿಹುದು ತಲೆಯ ಬುರುಡೆಯೂ! ನೀರಾದದ್ದಕ್ಕೆ ಸೋರುತಿಹುದು ತಲೆಯ ಬುರುಡೆಯು' ತಲೆಯಾಡಿಸುತ್ತಾ ಕನ್ನಡಿಯೊಳಗಿಂದ ಇಣುಕುತ್ತಿರುವ ಕಲ್ಲೇಶಿಯನ್ನೇ ನೋಡುತ್ತಾ ವಿನೋದದಲ್ಲಿ ಗುನುಗುತ್ತಾ ಕಾಲ ಕಳೆಯತೊಡಗಿದ.

ಸ್ನಾನ ಮಾಡದೇ ಮೂರು ದಿನವಾಗಿತ್ತು, ಅನೇಕ ರೀತಿಯ ನಾರುವಿಕೆಗಳು ಮೂಗಿಗೆ ಬಡಿದು ಕೊನೆಗೂ ಬಚ್ಚಲು ಹೊಕ್ಕವ ಸೋಲಾರಿನ ಬಿಸಿನೀರನ್ನು ಖಾಲಿಯಾಗಿಸಿ ಕೆಂಪೇಶಿಯಾಗಿ ಹಬೆಯಾಡುತ್ತಲೇ ಬಚ್ಚಲಿಂದ ಬಲಗಾಲು ಹೊರಗಿಟ್ಟಿದ್ದ. ಗಳಸ್ಯ ಕಂಠಸ್ಯ ಹನುಮೇಶಿಗೆ ಫೋನಾಯಿಸಿ 'ಬಾಯಿರುಚಿ'ಯ ಸ್ಪೆಷಲ್ ಮುಳಬಾಗಿಲು ದೋಸೆ, ಮದ್ದೂರುವಡೆಯ ಆಮಿಷ ಒಡ್ಡುತ್ತಿದ್ದಂತೇ 'ನೀ ಕರೆಯೋದು ಹೆಚ್ಚೋ, ನಾ ಬರೋದ್ಹೆಚ್ಚೋ' ಎಂದು ಗಿಂಜುತ್ತಲೇ ಅವ ಕ್ಷಣಮಾತ್ರದಲ್ಲಿ ಪ್ರತ್ಯಕ್ಷನಾಗಿದ್ದ. ಗೆಳೆಯರಿಬ್ಬರೂ ತುಪ್ಪದಲ್ಲಿ ಮುಳುಗೆದ್ದ ಮುಳಬಾಗಿಲ್ ದೋಸೆ, ಗರಿಗರಿ ಮದ್ದೂರುವಡೆ, ಚಟ್ನಿ ತರಿಸಿಕೊಂಡು ಬ್ಯಾಟಿಂಗ್ ಮಾಡಿ ಡರ್ರೆಂದು ತೇಗಿ ನೆಟ್‌ಫ್ಲಿಕ್ಸ್‌ನಲ್ಲಿ ಥ್ರಿಲ್ಲರ್ ಮೂವಿ ನೋಡೋಕೆಂದು ಸುಖಾಸೀನದಲ್ಲಿ ಸುಖವಾಗಿ ಮೈಚೆಲ್ಲಿದರು.

'ಭೌ ಭೌ...!' ಆರ್ಭಟಕ್ಕೆ ವಾಲ್ಯೂಮು ಹೆಚ್ಚಿಸಿದರೂ ಡೈಲಾಗುಗಳು ಕೇಳದಾದಾಗ ಹನುಮೇಶಿ 'ಹೋಗಿ ಹೇಳೋಕ್ಕಾಗಲ್ವ?' ಎಂದು ಆಕ್ಷೇಪಿಸುವಂತೆ ಕಲ್ಲೇಶಿಯೆಡೆಗೆ ಬಿರುನೋಟ ತೂರಿದ. ಇಂಗಿತವರಿತ ಕಲ್ಲೇಶಿ ಗೆಳೆಯನೂ ಜೊತೆಗಿದ್ದದ್ದರಿಂದ ಆವೇಶದಿಂದಲೇ ಹುಬ್ಬುಗಂಟಿನ ಬಿಗಿಮುಖದಲ್ಲಿ ಹೊರಬಂದು ಶ್ವಾನೇಶಿಯ ಮನೆಯತ್ತ ತೀಕ್ಷ್ಣ ದೃಷ್ಟಿ ಬೀರಿದಾಗ ಕಂಡದ್ದು ರೂಬಿಯ ಅಭ್ಯಂಗದ ದೃಶ್ಯ! ಕೊಸರಾಡುತ್ತಾ

ಎಗರಾಡುತ್ತಿದ್ದದ್ದನ್ನು ಹಿಡಿಹಿಡಿದು ಘನಕಾರ್ಯ ಮುಗಿಸಿಯೇ ತೀರುವೆನೆಂಬ ಛಲದಲ್ಲಿ ಗಸಗಸ ತಿಕ್ಕುತ್ತಿರುವ ಸಿಡುಕಿನ ಶ್ವಾನೇಶ, ಹೆಂಡತಿ, ತಾಯಿ, ಮಕ್ಕಳು ಸಹಾಯಕರಾಗಿ ಬ್ರಶ್ಶು, ಸೋಪು, ಶ್ಯಾಂಪೂ, ಟವಲ್ಲು, ಡ್ರೈಯರ್ರು, ಪೌಡರಿನ ಸರಂಜಾಮಿನೊಡನೆ ಸಾಲಾಗಿ ನಿಂತದ್ದು ಕಾಣಿಸಿತು. ಮನೆಯ ಚಿಲ್ಟಾರಿಯಂತೂ ಮೂಳೆ ತೋರಿಸುತ್ತಾ ಸ್ನಾನ ಮಾಡಿಸಿಕೊಂಡರೆ ಕೊಡುವೆನೆಂದು ರೂಬಿಯ ಮುಂದೆ ಅದರೊಟ್ಟಿಗೇ ಎಗರೆಗರಿ ತಾಂಡವವಾಡುತ್ತಿದ್ದ. ಅದೋ ಸ್ನಾನ ಬೇಡವೆಂದೋ, ಮೂಳೆ ಕೊಡು ಎಂತಲೋ ಸೂರು ಹಾರಿಹೋಗುವಂತೆ ಕೆಟ್ಟದಾಗಿ ಅರಚುತ್ತ ನಖರಾ ಮಾಡುತ್ತಿತ್ತು. ಅವರೆಲ್ಲರ ಏರುದನಿಯ ಪಕ್ಕವಾದ್ಯಕ್ಕೆ ತಲೆ ಚಿಟ್ಟೆನ್ನಿಸಿ ಕಲ್ಲೇಶಿಯ ಮುಖ ಮತ್ತಷ್ಟೂ ಗಂಟಾಗಿ ಬುಲ್ಡಾಗಿನಂತಾಗಿತ್ತು. ವಾರಕ್ಕೊಂದಾವರ್ತಿ ಸ್ನಾನ ಮಾಡಿಸುವ ರಗಳೆಯಿಂದ ಮೊದಲೇ ರೋಸಿದ್ದ ಶ್ವಾನೇಶ ಅಚಾನಕ್ಕಾಗಿ ಹೊರಬಂದು ತಮ್ಮತ್ತಲೇ ಗುರಾಯಿಸಿದ ಕಲ್ಲೇಶಿ, ಹನುಮೇಶಿಯೆಡೆ ಕೊಟ್ಟ ಅದೊಂದು ಲುಕ್ಕಿಗೆ ಬುಲ್ಡಾಗಿನ ಮುಖದ ಗಂಟುಗಳೆಲ್ಲಾ ಸರಸರನೆ ಬಿಚ್ಚಿಕೊಂಡು ಸಪಾಟಾದ ಸರಳ ಲ್ಯಾಬ್ರೆಡಾರಿನಂತಾಗಿ ಬೈಯುವುದಿರಲಿ. ಕನಿಷ್ಠ ದೃಷ್ಟಿಸಿ ನೋಡಲೂ ಆಗದೇ ನಮ್ಮ ಕಲ್ಲೇಶಿ ಹನುಮೇಶಿಯ ಕೈ ಹಿಡಿದೆಳೆದು ಒಳಸೇರಿಕೊಂಡ. ಇಬ್ಬರೂ ಮೌನೇಶಿಗಳಾಗಿ ಅಕ್ಕಪಕ್ಕದಲ್ಲಿ ಒರಗಿ ಕೂತು ಪಕ್ಕದವರ ಆರ್ಭಟ ತಗ್ಗುವುದನ್ನೇ ಕಾಯುತ್ತಾ ಧ್ಯಾನಸ್ಥರಾದರು. ■

## ಚತುರ ಸೊಸೆ....!

**ವಿ.ವಿಜಯೇಂದ್ರ ರಾವ್**

ರಾಜಕೀಯ ವಾತಾವರಣದ ಕುಟುಂಬಕ್ಕೆ ಹೊಸದಾಗಿ ಮದುವೆಯಾಗಿ ಹೋದ ನೂತನ ಸೊಸೆಗೆ ತನ್ನ ಪರಿವಾರದವರನ್ನು ಪರಿಚಯಿಸುತ್ತಾ ಗಟವಾಣಿ ಅತ್ತೆಯು ಹೇಳಿದಳು....ಈ ಕುಟುಂಬಕ್ಕೆ ಕೆಲವೊಂದು ರೀತಿ ರಿವಾಜು ಇದೆಯಮ್ಮ. ಈ ಕುಟುಂಬವು ಒಂದು ಮಂತ್ರಿ ಮಂಡಲ ಇದ್ದಂತೆ. ಈ ಮನೆಗೆ "ಮುಖ್ಯಮಂತ್ರಿ" ನಿನ್ನ ಮಾವನವರು. ಅವರು ರಕ್ಷಣಾ ಖಾತೆ ಮತ್ತು ವಿದೇಶಾಂಗ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಇಲ್ಲಿ ನಾನೇ ಉಪ ಮುಖ್ಯಮಂತ್ರಿ. ನಾನು ಗೃಹ ಖಾತೆ, ನ್ಯಾಯಾಂಗ ಖಾತೆ, ಜವುಳಿ ಖಾತೆ, ಮುಂತಾದವನ್ನು ನೋಡಿಕೊಳ್ಳುತ್ತೇನೆ ಎಂದರು.

ಇನ್ನೂ ನಿನ್ನ ಗಂಡ ಬಂದು, ಕೈಗಾರಿಕಾ ಖಾತೆ, ಸಾರಿಗೆ ಖಾತೆ, ವಸತಿ ಖಾತೆ ಮುಂತಾದವನ್ನು ಗಮನಿಸುತ್ತಾನೆ. ನನ್ನ ಇನ್ನೊಬ್ಬ ಮಗ, ಅಂದರೆ ನಿನ್ನ ಮೈದುನ ಹೊಸ ಯೋಜನೆಗಳ ಅನುಷ್ಠಾನದ ಖಾತೆ, ಕ್ರೀಡಾ ಖಾತೆ ನೋಡಿಕೊಳ್ಳುತ್ತಾನೆ.

ಇನ್ನು ನೀನು ... ಯಾವ ಖಾತೆ ನೋಡಿಕೊಳ್ಳುತ್ತೀಯಾ ಅಂದರೆ... ಆಹಾರ ಮತ್ತು ಕುಟುಂಬ ಯೋಜನೆ ಖಾತೆ. ಇದು ನಿನಗೆ ಒಪ್ಪಿಗೆ ತಾನೇ ಎಂದು ಕೇಳಿದಾಗ.... ಚಾಲಾಕಿ ಸೊಸೆ ಹೇಳಿದಳು....ಅಯ್ಯೋ ಅತ್ತೆ, ನನಗೆ ಈ ಖಾತೆಗಳನ್ನು ನಿಭಾಯಿಸುವ ಹಿರಿಯ ಜವಾಬ್ದಾರಿ ಎಲ್ಲಾ ಯಾಕೆ ? ನೀವುಗಳೇ ಎಲ್ಲಾ ಖಾತೆಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತೀರೆಂಬ ನಂಬಿಕೆ ನನಗಿದೆ. ನಾನು "ವಿರೋಧ ಪಕ್ಷದ ನಾಯಕಿ" ಯಾಗಿ ಇರುತ್ತೇನೆ. ಅಕಸ್ಮಾತ್ ನೀವುಗಳು ಏನಾದರೂ ತಪ್ಪು ಮಾಡಿದರೆ... ಆಗ ತಾನೇ ನಾನು ನಿಮ್ಮ ಮೇಲೆ ಕೂಗಾಡಿ, ತರಾಟೆಗೆ ತೆಗೆದುಕೊಂಡು, ಸಭಾ ತ್ಯಾಗ ಮಾಡಿ ಆಚೆ ಹೋಗ್ತಾ ಇರಬಹುದು ಎಂದಾಗ......, ಅತ್ತೆಯು ವಿಧಿಯಿಲ್ಲದೆ ತೆಪ್ಪಗೆ ತಲೆಯಾಡಿಸಿದ್ದನ್ನು ನೋಡಿದ ಸೊಸೆಯು ಮನಸ್ಸಿನಲ್ಲೇ ಯಾರ ಹತ್ತಿರ ಈ ಜೋರೆಲ್ಲಾ, ನನ್ನ ಹತ್ತಿರ ನಿಮ್ಮ ಬೇಳೆ ಬೇಯುವುದಿಲ್ಲಾ ಅಂದ್ಕೊಂಡು ಮುಗುಳ್ನಕ್ಕಳು.......!

# ಆಟೋ ಎಂಬ ರಸ್ತೆ ರಾಜ

**ಕೆ.ಎಸ್.ಸೋಮೇಶ್ವರ**

**ಆಟೋ ರಿಕ್ಷಾ ಮಯೋ ಭುವಃ**

ಈ ಒಂದು ಶ್ಲೋಕವನ್ನು ನನ್ನ ಒಬ್ಬ ಸ್ನೇಹಿತ ಅಶ್ವಥನಾರಾಯಣರವರು ಪದೇ ಪದೇ ಹೇಳುತ್ತಿದ್ದರು. ನಾವು ದೇವರ ಪೂಜೆ ಮಾಡುವಾಗ ಆಗಾಗ್ಗೆ ಹೇಳುವ ಆಪೋಹಿಷ್ಠಾ ಮಯೋಭುವಃ ಎಂಬುದನ್ನು ಇಲ್ಲಿ ಆಟೋಗೆ ಸೇರಿಸಿ ಹೇಳುತ್ತಿದ್ದರು.

ಈ ಆಟೋ ರಾಜರುಗಳ ಬಗ್ಗೆ ಹೇಳುವ ಕಥೆ ನಿಜವಾದ ಆಟೋಗಳ ಭರಾಟೆಯಷ್ಟೇ ರಭಸವಾಗಿರುತ್ತದೆ. ನಮ್ಮ ಚಲನಚಿತ್ರಗಳಲ್ಲಿ ಆಟೋ ರಾಜನಾಗಿ ಮೆರೆದವರು ಶಂಕರನಾಗರವರು. ಅದಾದ ಮೇಲೆ ಅನೇಕ ಹೀರೋಗಳು ಆಟೋ ಶಂಕರನಾಗಿ ಬಗೆ ಬಗೆಯ ಆಟೋಟಗಳನ್ನು ಚಿತ್ರಗಳಲ್ಲಿ ತೋರಿಸುತ್ತಿದ್ದಾರೆ. ಈ ಆಟೋಗಳ ಓಡಾಟ ಇಲ್ಲ ಹಾರಾಟ ಹಿಂದಿ ಚಲನಚಿತ್ರಗಳಲ್ಲಿ ಅಪರೂಪವೇ ಸರಿ. ಪಕ್ಕದ ತಮಿಳುನಾಡಿನಲ್ಲಿ ಇದು ಆಗಾಗ್ಗೆ ಮಿಂಚುತ್ತಿರುತ್ತದೆ.

ಆಟೋಗಳ ಪೂರ್ಣ ನಾಮಧೇಯ ಆಟೋರಿಕ್ಷಾ. ಇದನ್ನು ನಮ್ಮ ಕಸ್ತೂರಿ ಕನ್ನಡದಲ್ಲಿ ತ್ರಿಚಕ್ರ ವಾಹನ ಎಂದು ಕರೆಯಬಹುದಾಗಿದೆ. ನಮ್ಮಲ್ಲಿ ಒಂದು ರೀತಿಯ ಇಲಿಗೆ ಮೂಗಿಲಿ ಎನ್ನುತ್ತಾರೆ. ಎಲ್ಲ ಇಲಿಗಳೂ ಅದೇ ರೀತಿಯವೇ (ಹೆಗ್ಗಣಗಳ ಹೊರತು ಪಡಿಸಿ). ನಮ್ಮ ಆಟೋಗಳನ್ನು ಮೂಗಿಲಿ ಎಂದು ಕರೆಯಬಹುದೇನೋ. ಹಾಗೆ ಕರೆಯಹೋದರೆ ಅವು ಛಂಗ್ ಎಂದು ಹಾರಿಬಿಡುತ್ತವೆ. ಇನ್ನು ತ್ರಿಚಕ್ರ ವಾಹನ ಎಂದು ಕರೆಯ ಹೋದರೆ ಅವು ಮಾರು ದೂರ ಓಡಿರುತ್ತವೆ. ಹೀಗಾಗಿ ಅವುಗಳಿಗೆ ಪ್ರಿಯವಾದ ನಾಮವೆಂದರೆ ಆಟೋ ಎನ್ನಬೇಕು. ಹಾಗೆ ಕರೆದೊಡನೆಯೇ ಅದು ಮನ ಕರಗಿ ನಮ್ಮ ಮುಂದೆ ವಯ್ಯಾರದಿಂದ ಬಂದು ನಿಲ್ಲುತ್ತವೆ.

ಮೊದಲೆಲ್ಲಾ ಈ ಆಟೋಗಳು ಯಾವುದೇ ಮುಖ್ಯರಸ್ತೆಯ ತಿರುವಿನಲ್ಲಿ ಹಾಲ್ಟ್ ಆಗಿರುತ್ತಿದ್ದವು. ಅದು ಹಿಂದಿನಿಂದ ಬರುವ ಇತರ ವಾಹನಗಳು ತಿರುಗಲು ಅಡ್ಡವಾಗಿ, 'ದಾರಿ ಕಾಣದಾಗಿದೆ ಆಟೋ ಇಂದ್ರನೇ' ಎಂದು ಹಾಡಬೇಕಾಗಿರುತ್ತಿತ್ತು. ಈಗ ಬಿಡಿ, ಅದನ್ನು ಕಾರುಗಳು, ದ್ವಿಚಕ್ರ ವಾಹನಗಳು ಚಾರ್ಜ್ ತೆಗೆದುಕೊಂಡಿವೆ. ಅಲ್ಲಿ ಹತ್ತಿರದಲ್ಲಿ ಏನಾದರೂ ತಿಂಡಿಮನೆ ಇದ್ದರೆ ಮುಗಿಯಿತು, ಸವಾರರಿಗೆ ವಾಹನ ಕೈ ಜಾರಿ ಹೋಗಿ ತಿಂಡಿತಟ್ಟೆಗಳು ಕಾಫಿಲೋಟಗಳು ಅಲಂಕೃತಗೊಂಡಿರುತ್ತವೆ. ವಾಹನಗಳು ಬೀದಿಪಾಲು.

ನಿಮಗೆ ಕರೆದೆಡೆ ಬರುವ ಆಟೋಗಳು ಎಲ್ಲಿ ಕಾಣಬಹುದು? ಊಹೆ ಮಾಡಿ! ನಾನು ನೋಡಿದ ಹಾಗೆ ನಮ್ಮ ಟಿವಿ ಧಾರಾವಾಹಿಗಳಲ್ಲಿ ಆಟೋಗಳು, ಆಟೋ ಎಂದೊಡನೆ ಪ್ರತ್ಯಕ್ಷ ಮತ್ತು ಅದು ಕಾಡು ಮೇಡಾಗಿರಲಿ, ಬೆಟ್ಟ ಗುಡ್ಡಗಳಾಗಿರಲಿ ಹತ್ತಿಳಿಸಿ ಬಿಡುತ್ತಿರುತ್ತವೆ. ಅದೇನೋ ಟೈಂ ಪಾಸ್‌ಗೆ ನೋಡುವ ಪರದೆಯ ನೋಟ. ನಮ್ಮಂತಹ ಬಡಪಾಯಿ ನಿಜ ಪ್ರಯಾಣಿಕರ ಪಾಡು? ಮೊದಲೆಲ್ಲಾ ಮುಖ್ಯರಸ್ತೆಯ ಬಳಿ ಬಂದು ಒಂದೆರಡು ನಿಮಿಷಕ್ಕೆ ಅಲ್ಲಿ ಹಾದು ಹೋಗುವ ಆಟೋಗಳನ್ನು ಪ್ರೀತಿಯಿಂದ ಕರೆದು ಕೈ ತಟ್ಟಿದಾಗ ಬಂದು ನಿಲ್ಲುತ್ತಿದ್ದವು. ಚಾಲಕನ ಕೃಪಾ ಕಟಾಕ್ಷವಿದ್ದರೆ ನೀವು ಆಸೀನಭಾಗ್ಯ ಹೊಂದಬಹುದಾಗಿದೆ. ಅದರಲ್ಲಿ ಕೆಲ ಕೆಟಗರಿ ಇರುತ್ತದೆ. ಅದು ನೀವು ಹೇಳಿದ ಡೆಸ್ಟಿನೇಷನ್‌ಗೆ ಡೆಸ್ಟಿನಿ ಆಗಲ್ಲ. ಹಾಗು ಸ್ವಲ್ಪ ಗೋಗರೆದರೆ ಮೀಟರ್ ಮೇಲೆ ಒಂದಿಷ್ಟು ಕೊಸರು ಕೇಳುತ್ತಾರೆ. ಸಿನಿಮಾಗಳಲ್ಲಿ ತೋರುವಂತೆ ಮೀಟರ್ ಮೇಲೆ

ಒಂದು ಸಣ್ಣ ನೋಟು ಇಡಲು ಆಗತ್ಯೇ? ಅದು ಅಸಾಧ್ಯ. ಕತ್ತಲಾದರೆ ಅಥವಾ ಈಗಿನ ಬಿರುಮಳೆ ಬಂದರಂತೂ ಅವರುಗಳು ನೀರಿನ ಪ್ರವಾಹದಲ್ಲೇ ತೇಲಿ ಆಕಾಶಕ್ಕೆ ಹಾರಿಬಿಡುತ್ತಾರೆ. ನಮ್ಮ ಬೆಂಗಳೂರಿನಲ್ಲಿ ಹಲವೆಡೆ ಪೋಲಿಸ್ ನಿಯಮಿತ ಆಟೋ ಬುಕಿಂಗ್ ಬಿಲ ಅಂದರೆ ಬೂತ್‌ಗಳು ಇವೆ. ಅವುಗಳಲ್ಲಿ ಬಹುಪಾಲಿನವು ನಗರ ಸೌಂದರ್ಯವನ್ನು ಇಮ್ಮಡಿಗೊಳಿಸಲು ಮಾತ್ರ ಎಂಬಂತೆ ನಿಂತಿರುತ್ತವೆ. ಅದರ ಸುತ್ತಲೂ ಆಟೋಗಳಿರುತ್ತವೆ ಅವರದೇ ಕಪಿಮುಷ್ಟಿ. ಅದೊಂದು ಪ್ರತಿಷ್ಠಿತ ಮಾಲ್‌ನಲ್ಲಿ ಇತ್ತೀಚೆಗೆ ಇಂತಹುದೇ ಒಂದು ಬಿಲ ತೆರೆದಿದ್ದಾರೆ. ಅಲ್ಲೊಬ್ಬ ಕನಿಷ್ಠಬಿಲ್ಲೆಯೂ (ಇದು ಬೀಚಿಯವರ ಕಾನ್ಸಟೇಬಲ್‌ನ ರೂಪಾಂತರ) ಇರುತ್ತಾರೆ. ಆದರೆ, ಈ ಆಟೋ ರಾಜರುಗಳಿಗೆ ಅವರು ಕನಿಷ್ಠ ಮಾತ್ರ. ಅವರ ಬಿಲ್ಲೆಗೆ ಬೆಲೆಯಿಲ್ಲ.

ಈಗಂತೂ ಓಲ, ಉಬರ, ರ್‍ಯಾಪಿಡೋ, ನಮ್ಮ ಯಾತ್ರಿ, ಹೀಗೆ ಹಲವಾರು ಸಂಪರ್ಕ ಸಾಧನಗಳು ಮೊಬೈಲಿಗೆ ತಗಲು ಹಾಕಿಕೊಂಡು ನಮ್ಮನ್ನು ಐಲು ಮಾಡುತ್ತಿರುತ್ತವೆ. ಕೆಲವೆಡೆ 'ನಿಮಗಾಗಿ' ಎಂದು ಹೇಳುತ್ತಿರುತ್ತವೆ. ಆದರೆ, 'ಚಾಲಕನ ಒಪ್ಪಿಗೆಗಾಗಿ' ಎಂಬ ಷರತ್ತು ಲಗತ್ತಾಗಿರುತ್ತದೆ. ಅದೊಂದು ರೀತಿಯಲ್ಲಿ 'ಕರಿಮಣಿ ಮಾಲಿಕ ನಾನಲ್ಲಾ' ಅಂತ ಹಾಡುತ್ತಾ ಅದರೊಳಗಿನ ಒಂದಿಷ್ಟು (ಮನಿ) ಮಣಿಗಳು ನಮಗಿರಲಿ ಎಂಬಂತೆ. ಪ್ರೈಮ್ ಟೈಂ, ಅಂದರೆ ಬೆಳಗ್ಗೆ ಒಂಬತ್ತು ಗಂಟೆಯ ನಂತರ, ಒಂದೆರಡು ಗಂಟೆಗಳ ಕಾಲ ಅವರೆಲ್ಲ ಬಹು ಬಿಜಿ. ನಮ್ಮಂತಹ ಸಾದಾ ಜೀವಿಗಳಿಗೆ ಅದು ಓಡಾಡುವ ಸಮಯವಲ್ಲ ಅಂತ ಹೇಳುವಂತಿರುತ್ತದೆ. ಇನ್ನು ಕೆಲವರು ಒಪ್ಪಿಗೆ ಸೂಚಿಸಿರುತ್ತಾರೆ. ಕಾಯುವ ಸಮಯ ಕೂಡ ನಿರ್ಧಾರಿತವಾಗಿರುತ್ತದೆ. ಆದರೆ, ಮಧ್ಯದಲ್ಲಿ 'ಡ್ರಾಪ್ ಎಲ್ಲಿಗೆ' ಎಂಬ ಚಾಲಕನ ಅಶರೀರವಾಣಿ ಬರುತ್ತದೆ. ಅದಕ್ಕೆ ಉತ್ತರಿಸಿದೊಡನೆ 'ಈಗ ಬಂದೆ' ಎಂದು ಪ್ರಯಾಣ ರದ್ದಾಗಿರುತ್ತದೆ. ಇನ್ನು ಕೆಲ ಸಮಯದಲ್ಲಿ ಬರಬರುತ್ತ ಮಾರ್ಗ ಮಧ್ಯದಲ್ಲೇ ನಮ್ಮ ಕೊಂಡಿಯನ್ನು ಕಳಚಿಬಿಟ್ಟಿರುತ್ತಾರೆ.. ಕೆಲವು ಆಪ್‌ಗಳಲ್ಲಿ ನಿಮ್ಮ ಬುಕಿಂಗ್ ಪ್ರಯತ್ನವನ್ನು ಸ್ವೀಕರಿಸಿದೊಡನೆಯೇ ಮೊದಲು ಹೇಳಿರುವ ದರ ಚಾಲಕರಿಗೆ ಒಪ್ಪಿಗೆಯಾಗುವುದಿಲ್ಲ ಅಥವಾ ಹೆಚ್ಚಿನ ಹಣ ನೀಡಿದಲ್ಲಿ ನಿಮಗೆ ಶೀಘ್ರ ಸೇವೆ ಎಂದು ಢಾಳಾಗಿ ತೋರಿಸುತ್ತಿರುತ್ತಾರೆ. ಇನ್ನು ಕೆಲ ಬಾರಿ ಯಾವುದೇ ಚಾಲಕ ಒಪ್ಪುತ್ತಿಲ್ಲ ಎಂದು ಹೆಚ್ಚಿನ ದರಕ್ಕೆ ಮೂರರಿಂದ ನಾಲ್ಕು ಚಕ್ರಕ್ಕೆ ಜಿಗಿಯಲು ಆಹ್ವಾನ ನೀಡುತ್ತಾರೆ. ಅದೊಂದು ಆಪ್‌ನಲ್ಲಿ ನೀವು ಪ್ರಯಾಣ ಆರಂಭಿಸಿದ ಕೆಲವೇ ನಿಮಿಷಗಳಲ್ಲಿ "ಆರ್ ಯು ಸೇಫ್?" ಎಂದು ಕೇಳುತ್ತದೆ. ಮುಂದೆ ಪಯಣ ಮುಗಿದ ಮೇಲೆ 'ಸೇಫ್ ಆಗಿ ಪಯಣ ಮುಗಿಯಿತು' ಎನ್ನುತ್ತದೆ. ನೋಡಿ ಪ್ರಯಾಣಿಕರ ಮೇಲೆ ಎಷ್ಟು ಕಾಳಜಿ!




ಇಲ್ಲಿ ಒಂದು ವಿಷಯ ಹೇಳಬೇಕು. ಚಾಲಕರ ವರ್ತನೆಗಳ ಬಗ್ಗೆ ಹೇಳಿದ್ದೇನೆ. ಅದು ಸಾರಾ ಸಗಟಾಗಿ ಎಲ್ಲರಿಗೂ ಅನ್ವಯ ಆಗುವುದಿಲ್ಲ. ಒಂದಿಷ್ಟು ಸಣ್ಣ ಪ್ರಮಾಣ

ಮಾತ್ರ. ಉಳಿದಂತೆ ಕಂಡವರು ತಮ್ಮ ವೃತ್ತಿಗೆ ತಕ್ಕ ಶಿಸ್ತು, ಸಂಯಮ ಹೊಂದಿರುತ್ತಾರೆ. ನಾನು ಓಡಾಡುವ ಕೆಲ ಭಾಗಗಳಲ್ಲಿ ಇಂತಹ ಆಟೋ ಚಾಲಕರ ಪರಿಚಯವಾಗಿ ಅವರು ಕೇಳಿದೊಡನೆಯೇ ನಮ್ಮ ಡೆಸ್ಟಿನಿ ತಲುಪಿಸುತ್ತಿರುತ್ತಾರೆ. ಇದನ್ನೇ ಉದ್ಯೋಗ ಮಾಡಿಕೊಂಡಿರುವವರು ಲಕ್ಷಾಂತರ ಮಂದಿ. ಕೆಲವರು ಅಯ್ದ ಶಾಲಾ ಮಕ್ಕಳಿಗಾಗಿಯೇ ತಮ್ಮ ವಾಹನ ಕಾಪಿಟ್ಟುಕೊಡಿರುತ್ತಾರೆ. ಇನ್ನು ಕೆಲವರು ವಯಸ್ಸಿನ ಮಿತಿಯಿಲ್ಲದೇ ಇರುವವರೂ ಕಾಣಸಿಗುತ್ತಾರೆ. ಅದೇ ರೀತಿ ಅನೇಕ ದೇಹವೈಫಲ್ಯಗಳನ್ನು ಹೊಂದಿದವರೂ ಸಹ ಜೀವನ ನಿರ್ವಹಣೆಗಾಗಿ ಕೆಲಸ ಮಾಡುತ್ತಿರುವುದನ್ನೂ ನೋಡಬಹುದು. ಅದೊಮ್ಮೆ ಒಬ್ಬಾತ ವಿದ್ಯುತ್ ರಿಕ್ಷಾ ಓಡಿಸುತ್ತಿದ್ದರು. ಅವರು ಮೊದಲಿಗೆ, ಅಂದರೆ ಅರವತ್ತರ ದಶಕದಲ್ಲಿ, ಹತ್ತಿರದ ಕೋಲಾರದಿಂದ ಬೆಂಗಳೂರಿಗೆ ಬಂದು ಇಲ್ಲಿ ಎತ್ತಿನ ಬಂಡಿಯಲ್ಲಿ ದೊಡ್ಡ ದೊಡ್ಡ ಧಾನ್ಯಗಳ ಮೂಟೆಗಳನ್ನು ಸಗಟು ಮಾರುಕಟ್ಟೆಗೆ ತಲುಪಿಸುತ್ತಿದ್ದರಂತೆ. ನಂತರದಲ್ಲಿ ಅದೊಂದು ಪಾನೀಯದ ಕಾರ್ಖಾನೆಯಲ್ಲಿ ಅವರ ವಸ್ತುಗಳನ್ನು ಬೇರೆ ಬೇರೆ ಊರಿಗೆ ವಾಹನಗಳಲ್ಲಿ ಸಾಗಿಸುವ ಚಾಲಕನಾಗಿದ್ದರಂತೆ. ಅಲ್ಲಿಂದ ನಿವೃತ್ತಿಗೊಂಡು ಈ ನಗರದಲ್ಲಿ ಆಟೋ ಓಡಿಸುತ್ತಿದ್ದಾರೆ.

ನೀವು ಹಿಂದೆಲ್ಲ ನೋಡಿದಂತೆ ಅಟೋಗಳು ರಿವರ್ಸ್ ಹೋಗಲಾಗುತ್ತಿರಲಿಲ್ಲ. ಈಗ ಕಾಲಾಯ ತಸ್ಮೈ ನಮಃ ಎನ್ನುವಂತೆ ಅವುಗಳಿಗೂ ಓಡಾಟ ಸುಲಭ. ಜೊತೆಗೆ ಕೈಯಿಂದ ಹ್ಯಾಂಡಲ್ ಎಳೆಯುವುದು, ಕಾಲಿನಲ್ಲಿ ಬ್ರೇಕ್ ಒತ್ತುವುದು ಎಲ್ಲ ಹೋಗಿ ಅಪ್‌ಡೇಟ್ ಆಗಿ ಒಂದು ದ್ವಿಚಕ್ರ ವಾಹನದಂತೆಯೇ ರಸ್ತೆಗಳಲ್ಲಿ ತನ್ನ ಓಟ ಮುಂದುವರಿಸಿದೆ. ಇನ್ನು ಅವರುಗಳ ಪ್ರಯಾಣಿಕರ ಸಾಗಣೆ ಮೊದಲಿಗೆ ಇಬ್ಬರಿಗೆ ಮಾತ್ರ ಇದ್ದದ್ದು ನಂತರ ಮೂರು ಮಂದಿ ಅಧಿಕೃತ. ಆದರೆ, ಕೆಲವು ಪ್ರದೇಶಗಳಿಗೆ ಸಾಗಿಸುವಾಗ ಅದು ಮೂರು ಪ್ಲಸ್ ಮೂರು ಪ್ಲಸ್ ಚಾಲಕ = ಏಳು ಆಗಿರತ್ತೆ. ಇದು ಮೆಟ್ರೊ ನಿಲುಗಡೆಯ ಸಮೀಪವೂ ಇರತ್ತೆ. ಏಕೆಂದರೆ, ಮೆಟ್ರೋ ಅವರ ಟ್ರಾಕ್‌ಗೆ ಮಾತ್ರ ಸೀಮಿತ, ಉಳಿದಂತೆ ನಿಮಗಳಿಗೆ ನಿಮದೇ ಟ್ರಾಕ್ ಅಂತಾರೆ ಅವರು. ನಾನು ಹಲವು ಬಾರಿ ಮದರಾಸು ಪಟ್ಟಣಕ್ಕೆ ಹೋಗಿದ್ದೇನೆ. ಆಗಿನ್ನೂ ಅದು ಚೆನ್ನಾದ ಚೆನ್ನೈ ಆಗಿರಲಿಲ್ಲ. ಅಲ್ಲಿ ಆಗ ಆಟೋಗಳಿಗೆ ಮೀಟರ್ ಇರಲಿಲ್ಲ. ಅಲ್ಲಿ ಅದರ ಚಾಲಕರ ಮಾತೇ ಮೀಟರಿನಂತೆಯೇ ಪಕ್ಕಾ ಆಗಿರುತ್ತಿತ್ತು. ಇದರ ಜೊತೆಗೆ ಬಾಂಬೆ (ಮುಂಬೈ) ಮಹಾನಗರದಲ್ಲಿ ಸಾಕಷ್ಟು ಬಾರಿ ವಿವಿಧ ಸ್ಥಳಗಳಿಗೆ ಆಟೋ ಹತ್ತಿದ್ದಿದೆ. ಅಲ್ಲಿನ ಆಟೋ ಚಾಲಕರಿಗೆ ಊರಿಗೆ ಹೊಸಬರಾಗಿರಲಿ ಅಥವಾ ಅಲ್ಲೇ ನೆಲೆ ಮಾಡಿರುವವರಾಗಿರಲಿ ಹತ್ತಿದೊಡನೆಯೇ ಮೀಟರ್ ಚಾಲೂ ಆಗಿ ನಾವು ಇಳಿಯುವ ಸ್ಥಳ ಬಂದೊಡನೆ ಅದರಲ್ಲಿ ತೋರಿಸುವ ದರ ತೆಗೆದುಕೊಳ್ಳುತ್ತಾರೆ. ಅದು ಪೈಸೆಗೆ ಪೈಸೆ ಲೆಕ್ಕ. ಕಡಿಮೆ ಇಲ್ಲ. ಹೆಚ್ಚಂತೂ ಇಲ್ಲವೇ ಇಲ್ಲ.

ಈಗ ಈ ತ್ರಿಚಕ್ರಿಗಳ ಒಂದಿಷ್ಟು ಶಕ್ತಿ ನೋಡೋಣವೇ? ಅದೊಂದು ತಮಿಳು ಸಿನಿಮ. ಅದರಲ್ಲಿ ಆಟೋಗಳದೇ ಪಂಥಾಹ್ವಾನದ ರೇಸ್. ಒಬ್ಬಾತ ಹೀರೋನ ಆಟೋವನ್ನು ಹಿಂದಿಕ್ಕಿ ತನ್ನ ಆಟೋವನ್ನು ಇವನ ಆಟೋ ಮೂತಿಗೆ ಮುತ್ತಿಕ್ಕಿ ನಿಲ್ಲಿಸುತ್ತಾನೆ. ಆಗ ಹೀರೋ ಸುಮ್ಮನಿರುತ್ತಾನೆಯೇ? ತನ್ನ ಆಟೋದ ಮೂಗನ್ನು ಇದಿರಾಳಿಯ ಮೂಗಿಗೆ ಉಜ್ಜುತ್ತ, 'ನೀನು ಹಿಂದೆ ಹಿಂದೆ; ನಾನು ಮುಂದೆ ಮುಂದೆ' ಎಂದು ಹೋಗಿ ಗುರಿ ಮುಟ್ಟಿಬಿಡುತ್ತಾನೆ. ಕಡೆಯಲ್ಲಿ ಹೀರೋ ಗೆಲ್ಲಲೇಬೇಕಲ್ಲವೇ. ಅದೊಮ್ಮೆ ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ಬಳಿ ಒಂದು ಆಟೋ ಮಗ್ಗುಲಾಗಿ ಉರುಳಿತ್ತು. ಅದರ ಚಾಲಕ ಟೂ ವೀಲರ್‌ನಂತೆ ಸರ್ರ್ ಎಂದು ತಿರುಗಿಸ ಹೊರಟಿರಬೇಕು. ಆಗ ಈಗಿನಂತೆ ಒಂದು

ಬದಿಗೆ ಅಡ್ಡಕಂಬಿ ಅಥವಾ ಎರಡೂ ಕಡೆ ಬಾಗಿಲು ಇರುತ್ತಿರಲಿಲ್ಲ. ಅದರಲ್ಲಿದ್ದ ಪ್ರಯಾಣಿಕರು ಮುಖ ಮೇಲೆ ಮಾಡಿದ ಕವಾಟದಿಂದ ಎದ್ದು ಬರುತ್ತಿದ್ದರು. ಇನ್ನೊಮ್ಮೆ ನಾನು ಮತ್ತು ನನ್ನ ಶ್ರೀಮತಿ ನಗರದ ಜಯನಗರದಿಂದ ಅಂದಿನ ಎಚ್.ಏ.ಎಲ್ ವಿಮಾನ ನಿಲ್ದಾಣಕ್ಕೆ ಮುಂಬೈ ವಿಮಾನ ಹತ್ತಲು ಆಟೋದಲ್ಲಿ ಗುರಿ ಮುಟ್ಟುವಂತೆ ಹೊರಟಿದ್ದೆವು. ಆಗಿನ್ನೂ ಕೆಂಪೇಗೌಡರು ವಿಮಾನಗಳನ್ನು ಅವರ ಬಯಲಿಗೆ ಕರೆದುಕೊಂಡಿರಲಿಲ್ಲ. ನಿಲ್ದಾಣದ ಕೆಲ ಮೈಲು ಹಿಂದೆ ಭಯಂಕರ ಟ್ರಾಫಿಕ್ ಜಾಮ್ ಆಗಿತ್ತು. ಆಗ ಈ ನಮ್ಮ ಆಟೋ (ನಟ) ಭಯಂಕರ ತನ್ನ ಕಿಸೆಯಲ್ಲಿದ್ದ ಪೀಪಿಯನ್ನು ತೆಗೆದು ಜೋರಾಗಿ ಊದಿದ. ಇದ್ಯಾವುದೋ ಕಾನೂನು ರಕ್ಷಕರ ಆವಾಜ್ ಎಂದು ಮುಂದಿನ ವಾಹನಗಳೆಲ್ಲ ಪಕ್ಕಕ್ಕೆ ಸರಿದು ಇವ ಒಂದು ರೀತಿ ಬೀಗುವ ಮುಖಭಾವದಲ್ಲಿ ಮುಂದೆ ಸಾಗಿ ನಮಗೆ ಫಸ್ಟ್ ಅಂಡ್ ಫಾಸ್ಟಾಗಿ ತಲುಪಿಸಿಬಿಟ್ಟ.

ಆಟೋಗಳಲ್ಲಿ ವಸ್ತುಗಳನ್ನು ಸಾಗಿಸುವುದು ಮಾಮೂಲಿ. ಒಮ್ಮೆ ನಾನು ಕೆಲಸ ಮಾಡುವೆಡೆಗೆ ಒಂದೆರಡು ದೊಡ್ಡ ಪೆಟ್ಟಿಗೆಗಳನ್ನು ಸಾಗಿಸಬೇಕಿತ್ತು. ಜೊತೆಗೊಬ್ಬ ಸಹೋದ್ಯೋಗಿಯೂ ಇದ್ದರು. ಆ ಆಟೋ ಚಾಲಕ ನಾವು ಕೂರುವ ಆಸನವನ್ನು ತೆಗೆದು ಆ ಪೆಟ್ಟಿಗೆಗಳನ್ನು ಒಂದು ಪಕ್ಕದಲ್ಲಿರಿಸಿ ನಮ್ಮಿಬ್ಬರಿಗೆ ಕೂರಲು ಹೇಳಿದರು. ನನ್ನ ಜೊತೆಯವರಿಗೆ ಇದೊಂದು ಆಶ್ಚರ್ಯಕರ ಸಂಗತಿಯಾಗಿತ್ತು. ಇದೆಲ್ಲ ಸರಿಯೇ, ಆಟೋಗಳು ಅಡ್ಡಲಾಗಿ ಚಲಿಸುವುದನ್ನು ಈ ಭೂಮಿಯ ಮೇಲೆ ಕಂಡಿರುವಿರಾ? ಅದ್ಹೇಗೆ ಸಾಧ್ಯ ಎಂಬ '?' ನಿಮ್ಮಲ್ಲಿ ಓಡುತ್ತದೆ. ನಿಮ್ಮ ಕೈಯಲ್ಲಿ ಮೊಬೈಲ್ ಹಿಡಿದು ಒಂದು ಆಟೋ ಬುಕ್ ಮಾಡಿ. ಅದು ಬರುವ ದಾರಿಯನ್ನು ಗಮನಿಸಿ. ಕೆಲವೆಡೆ, ಬಹುಶಃ ಹೆಚ್ಚಿನ ವಾಹನ ದಟ್ಟನೆ ಇರುವೆಡೆ, ಅದು ಅಡ್ಡಲಾಗಿ ಚಲಿಸುವ ದೃಶ್ಯ ನಿಮ್ಮನ್ನು ಚಕಿತಗೊಳಿಸುತ್ತದೆ. ಎಂತಹ ದೃಶ್ಯಾನಂದ ಅಲ್ಲವೇ!

ಇದು ನನಗೆ ತಿಳಿದಂತೆ ಆಟೋಗಳ ಮಲ್ಟಿ ಟಾಸ್ಕಿಂಗ್. ■



**ಆತ್ಮೀಯ ಓದುಗರೇ / ಚಂದಾದಾರರೇ**

**ನಿಮಗೆಲ್ಲಾ ತಿಳಿದಿರುವಂತೆ ಪ್ರತೀವರ್ಷ ಅಪರಂಜಿ ಅಕ್ಟೋಬರ್ ಸಂಚಿಕೆ ವಿಶೇಷ ಸಂಚಿಕೆಯಾಗಿ ಹೊರಹೊಮ್ಮುತಿದೆ 2025ರ ಅಕ್ಟೋಬರ್ ಸಂಚಿಕೆಗೆ ನಿಮ್ಮ ವಿಶೇಷ ಲೇಖನಗಳನ್ನು 15ನೇ ಸೆಪ್ಟೆಂಬರ್ 2025ರ ಒಳಗಾಗಿ ತಲುಪುವಂತೆ ಕಳಿಸಲು ಕೋರಿದೆ. ಲೇಖನಗಳು ತುಂಬಾ ವಿಶೇಷವಾಗಿ ಮುದ ಕೊಡುವಂತೆ ಮತ್ತು ಹೊಸತನದಿಂದ ಕೂಡಿರಲಿ. ನಿಮ್ಮ ಲೇಖನಗಳು ಅಪರಂಜಿ ಪುಟದ ಅಳತೆಯಲ್ಲಿ ಮೂರರಿಂದ ನಾಲ್ಕು ಪುಟಗಳಿದ್ದರೆ ಸಾಕು.**

# ದೋಸೆ ಮೀಮಾಂಸೆ

✍ನಿರ್ಮಲ ಮೃತ್ಯುಂಜಯಸ್ವಾಮಿ

ದೋಸೆ ಶಬ್ದ ಕಿವಿಗೆ ಬೀಳುತ್ತಿದ್ದಂತೆಯೇ, ನಮ್ಮೆಲ್ಲರ ನಾಸಿಕದ ಮೊಗ್ಗುಗಳು ಜಾಗೃತಗೊಂಡು, ನಾಲಿಗೆಯ ರಸಮೊಗ್ಗುಗಳೂ ಅರಳುವವು ಹೂವಿನಂತೆ! ಸಾಕ್ಷಾತ್ ದೋಸೆಯೇ ಕಣ್ಣಮುಂದೆ ಪ್ರತ್ಯಕ್ಷವಾಗಿ ಅದರ ಘಮ ಮೂಗಿಗೆ ತಾಕಿದಂತೆ ಭಾಸವಾಗುತ್ತದೆ. ಅಷ್ಟೊಂದು ಅದ್ಭುತ ರುಚಿ ಅದರಲ್ಲಿದೆ. ಎಲ್ಲಾ ತಿನಿಸುಗಳಿಗಿಂತಲೂ ಮಸಾಲೆದೋಸೆಯ ವೈಶಿಷ್ಟ್ಯವೇ ವಿಭಿನ್ನವಾಗಿದೆ. ಅದರ ಬಣ್ಣ, ಘಮ ಮತ್ತು ರುಚಿಗೆ ಶರಣಾಗದವರೇ ಯಾರಿಲ್ಲ. ಅದಕ್ಕೆ ನನ್ನದೂ ಒಂದು ಶರಣು.

ಉಪ್ಪಿಟ್ಟು, ಅವಲಕ್ಕಿ, ಇಡ್ಲಿ ಅಥವಾ ಇತರ ತಿಂಡಿಗಳು ಇಷ್ಟವಾಗುವುದಿಲ್ಲವೆಂಬುದನ್ನು ಕೇಳಿದ್ದೇನೆ. ಆದರೆ ದೋಸೆ ಇಷ್ಟವಿಲ್ಲವೆಂಬುದನ್ನು ಎಲ್ಲಿಯೂ ಕೇಳಿಲ್ಲ. ಮಸಾಲೆ ದೋಸೆಗೆ ದಕ್ಷಿಣ ಭಾರತದ ಜನಪ್ರಿಯ ತಿಂಡಿಗಳಲ್ಲಿ ಪ್ರಮುಖ ಸ್ಥಾನವಿದೆ. ದೋಸೆ ತಯಾರಿಕೆ ನಮ್ಮ ಸಂಸ್ಕೃತಿಯಲ್ಲಿ ಪುರಾತನ ಕಾಲದಿಂದಲೇ ಇತ್ತು. ಇದಕ್ಕೆ ಆಧಾರವಾಗಿ ಖ್ಯಾತ ಆಹಾರತಜ್ಞ ಕೆ.ಟಿ. ಆಚಾರ್ಯ ಅವರು ತಮ್ಮ ಪುಸ್ತಕ 'ದಿ ಹಿಸ್ಟರಿ ಆಫ್ ಅವರ ಫುಡ್'ನಲ್ಲಿ ಮೊದಲ ಶತಮಾನದಲ್ಲೇ ದೋಸೆಯ ಅಸ್ತಿತ್ವವನ್ನು ಎತ್ತಿಹಿಡಿದಿದ್ದಾರೆ. 1054 ರಲ್ಲಿ ಪಶ್ಚಿಮ ಚಾಲುಕ್ಯ ರಾಜ 3ನೇ ಸೋಮೇಶ್ವರನ ಕಾಲದಲ್ಲಿ ದೋಸೆಯ ಉಲ್ಲೇಖದ ಬಗೆಗೆ ದಾಖಲೆಗಳಿವೆ. ನಂತರದ ದಿನಗಳಲ್ಲಿ ಉಡುಪಿ ಹೋಟೆಲ್ಲಿನವರ ಸಂಶೋಧನೆಯ ಬಳಿಕ ಮಸಾಲೆದೋಸೆ ಎಂದರೆ ಕರ್ನಾಟಕದ್ದೇ ಎಂದು ಪ್ರಪಂಚದಾದ್ಯಂತ ಖ್ಯಾತಿ ಪಡೆದಿದೆ.

ಮೊದಮೊದಲು ಉತ್ತರ ಕರ್ನಾಟಕದಲ್ಲಿ ದೋಸೆ, ಇಡ್ಲಿಗಳ ಭರಾಟೆ ಅಷ್ಟಾಗಿ ಇರಲಿಲ್ಲ. ಬೆಂಗಳೂರು, ಮೈಸೂರು ಕಡೆಯಿಂದ ದಿಢೀರನೇ ಧಾವಿಸಿ, ಈಗ ಪ್ರಪಂಚದಾದ್ಯಂತ ಶರವೇಗದಲ್ಲಿ ದಾಪುಗಾಲಿಡುತ್ತಿದೆ. ಉ.ಕ. ದಲ್ಲಿ ಉಪ್ಪಿಟ್ಟು, ಅವಲಕ್ಕಿ ಅಥವಾ ಥಾಲಿಪಟ್ಟುಗಳನ್ನು ಬೆಳಗಿನ ತಿಂಡಿಗೆ ತಯಾರಿಸುವುದು ಸರ್ವೇಸಾಮಾನ್ಯವಾಗಿತ್ತು.

ನಾನು ಚಿಕ್ಕವಳಿದ್ದಾಗ ಧಾರವಾಡದಲ್ಲಿ ಹೋಟೆಲ್‌ಗಳೇ ವಿರಳ. ಗಾಂಧಿಚೌಕಿನ 'ಬಾಂಬೆ ರೆಸ್ಟೋರೆಂಟ್' ಮತ್ತು ಜ್ಯುಬಿಲಿ ಸರ್ಕಲ್‌ಗೆ ಹತ್ತಿರವಿದ್ದ 'ಧಾರವಾಡ ರೆಸ್ಟೋರೆಂಟ್'ಗಳು ಖ್ಯಾತನಾಮ ಹಾಗೂ ಜನಪ್ರಿಯವಾಗಿದ್ದವು. ಆಗ ಎಲ್ಲರ ಬಾಯಲ್ಲೂ ಅದೇ ಹೆಸರು ವಿಶೇಷವಾಗಿ ಮಸಾಲೆದೋಸೆಗಾಗಿ. ಆದರೆ ನಮ್ಮ ಮನೆಯಲ್ಲಿ ಹೋಟೆಲ್ ಎಂದರೆ ನಿಷಿದ್ಧ. ಅಲ್ಲಿ ನಾಲ್ಕಾಣೆಗೊಂದು ಫಸ್ಟ್‌ಕ್ಲಾಸ್ ಮಸಾಲೆದೋಸೆ ಸಿಗುತ್ತಿತ್ತಂತೆ. ಅಪರೂಪಕ್ಕೆ ಒಂದು ಸಲ ನಮ್ಮ ಸಂಬಂಧಿಗಳಾರೋ ನನ್ನೊಟ್ಟಿಗೆ, ನನ್ನ ತಂಗಿಯನ್ನೂ ಬಾಂಬೆ ರೆಸ್ಟೋರೆಂಟ್‌ಗೆ ಕರೆದೊಯ್ದರು. ಅದುವರೆಗೂ ಹೋಟೆಲ್ ದೋಸೆಯ ರುಚಿಯೇ ಗೊತ್ತಿರಲಿಲ್ಲ. ಅಲ್ಲಿಯ ದೋಸೆಗೆ ತನ್ನದೇ ಆದ ರುಚಿ ವೈಶಿಷ್ಟ್ಯವಿತ್ತು. ಹೋಟೆಲ್‌ನವರು ಆ ದೋಸೆಗೆ ಏನು ಹಾಕಿ ಮಾಡುತ್ತಾರೋ ಎಂಬ ಕುತೂಹಲ ನಮಗೆಲ್ಲಾ ಇತ್ತು. ಆ ಗುಟ್ಟನ್ನು ಅವರು ಬಿಟ್ಟುಕೊಡುವುದಿಲ್ಲವೆಂಬ ಕಳವಳವೂ ಇತ್ತು. ಆಗ ಧಾರವಾಡದಲ್ಲಿ ಮಂಗಳವಾರವಂತೂ ಸಂತೆಗೆಂದು ಬಂದ ರೈತರು (ಸುತ್ತುಮುತ್ತಲಿನ ಹಳ್ಳಿಯ) ಸಂತೆ ಮುಗಿಸಿ, ಸಂಜೆಯಾಗುತ್ತಲೇ ಹೋಟೆಲ್ ತುಂಬ ಮುಕುರುತ್ತಿದ್ದರು. ನಾನಂತೂ ಅಚ್ಚರಿಯಿಂದ ಅವರನ್ನೇ ಪಿಳಿಪಿಳಿ ಕಣ್ಣುಬಿಡುತ್ತ ನೋಡುತ್ತಿದ್ದೆ. ಓರ್ವ ಹಳ್ಳಿಗನಂತೂ ಒಂದೊಂದೇ ದೋಸೆಯನ್ನ ಆರ್ಡರ್ ಮಾಡುತ್ತ ಐದಾರು ದೋಸೆಗಳನ್ನು ಗುಳುಂ

ಮಾಡಿಬಿಟ್ಟು, ಕಣ್ಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ. ನನಗೋ ಅಚ್ಚರಿ! ನಂತರ ಚಹಾ ಕುಡಿದು ಅಭ್ ಎಂದು ಡೇಗು ಹೊಡೆದು ಹೊರಬಂದ. ಆಗ ಆತನ ಮೊಗದಲ್ಲಿ ಸಂತೃಪ್ತ ಭಾವ ಮಿನುಗುತ್ತಿತ್ತು. ಇದೇ ದೋಸೆಯ ಗತ್ತು ಗಮ್ಮತ್ತು.

ಮೊದಲೆಲ್ಲಾ ಮನೆಯಲ್ಲಿ 8–10 ಜನರಿದ್ದ ಕಾಲದಲ್ಲಿ ಒರಳುಕಲ್ಲಿನಲ್ಲಿ ಅಷ್ಟೊಂದು ಜನಕ್ಕೆ ದೋಸೆ ರುಬ್ಬಿ, ದೋಸೆ ಹೊಯ್ದು ಕೊಡುವದೊಂದು ಪ್ರಯಾಸದ ಕೆಲಸವೇ ಆಗಿತ್ತು. ದೋಸೆ ಯಾವಾಗಲೂ ಹಂಚಿನಿಂದ ನೇರವಾಗಿ ತಟ್ಟೆಗೇ ಬೀಳಬೇಕು. ನಾವೆಲ್ಲಾ ಹಿಂದಿನ ದಿನ ನೆನಸಿದ ಅಕ್ಕಿ, ಉದ್ದನ್ನು ಸಂಜೆ ರುಬ್ಬಿ ಮರುದಿನ ದೋಸೆ ಹುಯ್ಯುತ್ತಿದ್ದೆವು. ಆದರೆ ನಮ್ಮ ತಾಯಿ ರುಬ್ಬುವ ಗೋಜಿಗೆ ಹೋಗದೇ ಬರೀ ಅಕ್ಕಿಹಿಟ್ಟಿನಿಂದ ದೋಸೆ ಮಾಡಿದರೂ ಅದರ ಘಮ ಮತ್ತು ರುಚಿಯೇ ಅದ್ಭುತ.



ಅದು ಗರಿಗರಿಯಾಗಿಯೂ ಇರುತ್ತಿತ್ತು. ರುಬ್ಬುವ ಗೋಜಿಲ್ಲದ್ದಕ್ಕಾಗಿ, ನಾನೂ ಅವರಂತೆ ಮಾಡಲು ಪ್ರಯತ್ನಿಸಿದೆ. ಆದರೆ ಟ್ರೈ ಆ್ಯಂಡ್ ಟ್ರೈ ಅಗೇನ ಎಂಬಂತೆ ಎಷ್ಟೇ ಪ್ರಯತ್ನಪಟ್ಟರೂ, ದೋಸೆ ಹಂಚಿಗೆ ಅಂಟಿನಂತೆ ಅಂಟಿಕೊಂಡೇ ಇರುತ್ತಿತ್ತು. ಅದನ್ನು ಎತ್ತಿ ಮುಗುಚಲು ಹರಸಾಹಸ ಪಡಬೇಕಾಗುತ್ತಿತ್ತು. ಹಂಚಿನ ತುಂಬ ಹರಿದ ತುಂಡುಗಳೇ ತಾಂಡವವಾಡುತ್ತಿದ್ದವು. ಅವನ್ನೆಲ್ಲ ಕೆದಕಿ, ತೆಗೆದು ಹಂಚು ಶುಚಿಗೊಳಿಸುವುದರಲ್ಲಿಯೇ ನನ್ನ ಶಕ್ತಿ, ವೇಳೆಯೆಲ್ಲ ನಷ್ಟವಾಗುತ್ತಿತ್ತು. ಪ್ರತಿ ದೋಸೆಗೂ ಮಲಗಿರುವ ನನ್ನ ವಯಸ್ಸಾದ ತಾಯಿಯನ್ನು ಕರೆತಂದು ಅವರಿಂದ ಮತ್ತೆ ಹೊಸ ದೋಸೆ ಮಾಡಿಸುತ್ತಿದ್ದೆ. ಅವರು ಮಾಡಿದ ಅಖಂಡ, ಶುಭ್ರ ದೋಸೆಗೂ, ನನ್ನ ತುಂಡು ತುಂಡಾದ, ಹರಕು ಮುರಕು ದೋಸೆಗೂ ಆಕಾಶ–ಪಾತಾಳದಷ್ಟು ಅಂತರವಿರುತ್ತಿತ್ತು. ಆ ಹರಕು ದೋಸೆ ನಾನು ತಿಂದು, ತಾಯಿಗೆ ಅಖಂಡ ದೋಸೆ ಕೊಡುತ್ತಿದ್ದೆನು. 'ಹರಕು ದೋಸೆ ಲೇಸು, ಮುರುಕು ಹೋಳಿಗೆ ಲೇಸು, ಸುರುಕು ಪಾಯಸಲೇಸು' ಎಂಬ ಸರ್ವಜ್ಞನ ವಚನವೀಗ ನೆನಪಾಗುತ್ತಿದ್ದೆ. ಒಂದು ಈರುಳ್ಳಿ ಕತ್ತರಿಸಿ, ಅದರ ಅರ್ಧಭಾಗಕ್ಕೆ ಚುಂಚುಗ ಚುಚ್ಚಿ, ಅದನ್ನ ಎಣ್ಣೆಯಲ್ಲಿ ಎದ್ದಿ ಹಂಚಿಗೆ ಸವರುವ ಪರಿಪಾಠ ನಮ್ಮ ತಾಯಿಯದಾಗಿತ್ತು. ಅಂದರೆ ಮಾತ್ರ ದೋಸೆ ಚೆನ್ನಾಗಿ ಬರುತ್ತದೆ ಎನ್ನುತ್ತಿದ್ದರು. ನಾನೂ ಕೂಡ ಹಾಗೇ ಮಾಡುತ್ತಿದ್ದೆ.

ನಮ್ಮ ಮನೆಯಲ್ಲಿ ಸಾಯಂಕಾಲ ಬರೀ ಉದ್ದಿನಬೇಳೆ ರುಬ್ಬಿ, ಅದಕ್ಕೆ ಅಕ್ಕಿಹಿಟ್ಟು ಕಲಿಸಿಟ್ಟು, ಬೆಳಿಗ್ಗೆ ದೋಸೆ ಹುಯ್ಯುವ ಇನ್ನೊಂದು ಪರಿಪಾಠವೂ ಇತ್ತು. ಬರಬರುತ್ತ ಅಕ್ಕಿಯನ್ನು ರುಬ್ಬತೊಡಗಿದೆವು. ನಾನು ಸಾವರಿನ್ ಕಲರ್ ದೋಸೆಗಾಗಿ ಸ್ವಲ್ಪ ಕಡಲೆಬೇಳೆ, ಮೆಂತ್ಯ ಮತ್ತು ಕೊಂಚ ಸಕ್ಕರೆ ಹಾಕುತ್ತೇನೆ. ಯಾರ ಮನೆಯಲ್ಲಿ ದೋಸೆ ಸಮಾರಾಧಾನೆ ನಡೆದಿದೆಯೆಂಬುದನ್ನು ದೂರದಿಂದಲೇ, ಅದರ ಘಮಮಾತ್ರದಿಂದ ಗ್ರಹಿಸಬಹುದು. ಉದ್ದಿನ, ಮೆಂತ್ಯದ ಘಮಕ್ಕೆ ನಾಲಿಗೆಯ ರಸಮೊಗ್ಗಗಳು ತಂತಾನೇ ಅರಳುತ್ತವೆ ಮತ್ತು

ಬಾಯಿಯಲ್ಲಿ ನೀರೂಡಿಸುತ್ತವೆ. ಬಿಸಿಬಿಸಿ ದೋಸೆಯನ್ನು ಬಾಯಿಗಿಟ್ಟರೆ, ಪ್ರಪಂಚದ ಯಾವ ಪರಿವೆಯೂ ಇಲ್ಲದಂತೆ, ಸ್ವರ್ಗದಲ್ಲಿ ಓಲಾಡಿದಂತೆ ಪರಮಸುಖಿ!

ಇನ್ನು ದೋಸೆಯಲ್ಲಿ ತರೇವಾರಿ ದೋಸೆಗಳು 1) ಮಸಾಲೆ ದೋಸೆ 2) ಸೆಟ್ ದೋಸೆ 3) ಈರುಳ್ಳಿ ದೋಸೆ 4) ಟೊಮ್ಯಾಟೊ ದೋಸೆ 5) ಬ್ರೆಡ್ ದೋಸೆ 6) ಬೆಣ್ಣೆ ದೋಸೆ 7) ರವೆದೋಸೆ 8) ಅವಲಕ್ಕಿ ದೋಸೆ 9) ನೀರದೋಸೆ 10) ರಾಗಿದೋಸೆ, ಮುಂತಾದವುಗಳು. ಇತ್ತಿತ್ತಲಾಗಿ ತರಕಾರಿಗಳನ್ನು ರುಬ್ಬಿ ದೋಸೆ ಹುಯ್ಯುತ್ತಾರೆ. ರಾಗಿದೋಸೆಯಂತೂ ಆರೋಗ್ಯಕ್ಕೆ ತುಂಬ ಒಳ್ಳೆಯದು. ಕ್ಯಾರೆಟ್ ದೋಸೆ, ಬೀಟರೂಟ್ ದೋಸೆ, ಹೀರೆಕಾಯಿ ದೋಸೆ ಹೀಗೆ ಯಾವುದೇ ತರದ ದೋಸೆ ತಯಾರಿಸಿದರೂ. ಮಸಾಲೆದೋಸೆಯ ಘಮ, ರುಚಿಯೇ ಭಿನ್ನ. ಮಸಾಲೆ ದೋಸೆಗೆ ಮಸಾಲೆ ದೋಸೆಯೇ ಸಾಟಿ. ದೋಸೆಯೊಂದಿಗೆ ಆಲೂಗಡ್ಡೆ ಪಲ್ಯವನ್ನು ಸಾಮಾನ್ಯವಾಗಿ ಎಲ್ಲರೂ ಮಾಡುತ್ತಾರೆ. ಜೊತೆಗೆ ಕಾಯಿಚಟ್ನಿ ಇಲ್ಲವೇ ಸಾಂಬಾರ ಸವಿದಾಗಲೇ ಅದರ ಸ್ವಾರಸ್ಯ. ದೋಸೆಯ ಹಿಂಬದಿಗೆ ಪುಟಾಣಿ ಚಟ್ನಿ ಇಲ್ಲವೆ ಕೆಂಪುಚಟ್ನಿ ಸವರಿ, ನಂತರ ಅದಕ್ಕೆ ಪಲ್ಯ ಹಾಕುತ್ತಾರೆ.

ದೋಸೆಯೊಂದಿಗೆ ನೆಂಚಿಕೊಳ್ಳಲು ಬರೀ ಆಲೂಗಡ್ಡೆ ಪಲ್ಯ ಒಂದೇ ಅಲ್ಲ. ತರೇವಾರಿ ಗೊಜ್ಜುಗಳು, ವಿವಿಧ ತರದ ಸಾಂಬಾರಗಳ ಜುಗಲಬಂದಿ ಹೊಂದಿಕೆಯಾಗುತ್ತದೆ. ಸೆಟ್‌ದೋಸೆಗಂತೂ ಸಾಗು ಅಥವಾ ಕುರ್ಮಾ, ಉತ್ತರ ಕನ್ನಡ ಜಿಲ್ಲೆಯವರಿಗೆ ಜೋನಿಬೆಲ್ಲ, ತುಪ್ಪ ಇಲ್ಲವೇ ಜೇನುತುಪ್ಪ ಬಲು ಇಷ್ಟ. ಉಪ್ಪಿನಕಾಯಿ, ತೊಕ್ಕು ಚಟ್ನಿಪುಡಿಗಳು ಬದಿಯ ಬಾಂಧವರು.

ಹೋಟೆಲ್‌ಗೆ ಹೆಜ್ಜೆಯಿಡುತ್ತಿದ್ದಂತೆಯೇ 'ಎರಡು ಮಸ್ಸಾಲೆ' ಅಂತಾ ಅಲ್ಲಿಯ ಕರ್ಮಚಾರಿಗಳು, ಕೂಗುವುದು, ಅದು ರೆಡಿಯಾಗುವವರೆಗೂ ಮತ್ತೇನೋ ಕುರುಕಲು ತರಿಸಿ ತಿನ್ನುವುದು, ಹರಟೆ ಹೊಡೆಯುವುದು ಮಾಡುತ್ತಾರೆ. ಬಿಸಿಬಿಸಿಯಿದ್ದಾಗಲೇ ಅದರ ರುಚಿ ಸವಿಯಬೇಕು. ತಿಂದ ನಂತರ ಕೈ ತೊಳೆದರೂ ಅದರ ಘಮ ಕೈಯಲ್ಲಿರುತ್ತಿತ್ತು.

ನನ್ನ ಮದುವೆಯಾದ ಹೊಸದರಲ್ಲಿ ಗ್ರೈಂಡರ್ ಇದ್ದಿಲ್ಲ. ಅತ್ತೆ ಮನೆಯಲ್ಲಿ, ಒರಳಿನಲ್ಲಿ 5 ರಿಂದ 7 ಜನರಿಗಾಗುವಷ್ಟು ಅಕ್ಕಿ ರುಬ್ಬಿ ದೋಸೆ ಹೊಯ್ಯಬೇಕಾಗಿತ್ತು. ಶ್ರಮವಹಿಸಿ, ಆದರೆ ಈಗಂತೂ ಗ್ರೈಂಡರ್ ಸೌಲಭ್ಯವಿದೆ. ಅಷ್ಟಕ್ಕೂ ರೆಡಿಮೇಡ್ ಹಿಟ್ಟೇ ಪ್ಯಾಕೆಟ್‌ನಲ್ಲಿ ಸಿಗುತ್ತದೆ. ಫ್ರಿಡ್ಜ್‌ನಲ್ಲಿಟ್ಟು ಅದನ್ನು ಮರುಬಳಕೆ ಮಾಡಿಕೊಳ್ಳಬಹುದು. ನೌಕರಿ ಮಾಡುವ ಮಹಿಳೆಯರಿಗಂತೂ ಇದು ವರದಾನವಾಗಿದೆ. ಪ್ಯಾಕೆಟ್ ಕತ್ತರಿಸಿ, ಪಾತ್ರೆಗೆ ಹಾಕಿ ಹಂಚಿಗೆ ಹರಡುವುದು ಅಷ್ಟೇ ಕೆಲಸ. ಬೇಸರವಾದಾಗ ಗೃಹಿಣಿಯರಿಗೂ ಅನುಕೂಲವೇ. ಶ್ರಮ ಮತ್ತು ಸಮಯ ಎರಡರ ಉಳಿತಾಯವಾಗುತ್ತದೆ. ಅದೇ ಹಿಟ್ಟಿನಿಂದ ಇಡ್ಲಿ ಕೂಡಾ ಮಾಡಬಹುದು. ಬರೀ ಬೆಳಗಿನ ತಿಂಡಿಗಷ್ಟೇ ಏಕೆ ದಿನಾ ರೊಟ್ಟಿ, ಚಪಾತಿ ತಿಂದು ಬೇಸರವಾದಾಗ ಊಟಕ್ಕೂ ದೋಸೆ ಲೇಸು. ರೊಟ್ಟಿ, ಚಪಾತಿಯಷ್ಟು ದೀರ್ಘ ಸಮಯಬೇಕಿಲ್ಲ. ಝಟ್‌ಪಟ್ ತಯಾರಾಗುತ್ತದೆ. ಮಧುಮೇಹಿಗಳಿಗೆ, ಪಥ್ಯ ಮಾಡುವವರಿಗೆ ಹೇಳಿ ಮಾಡಿಸಿದಂತಿದೆ. ದೋಸೆ, ಉದ್ದಿನಬೇಳೆ ಬದಲು ಮೆಂತ್ಯ ಹಾಕಿ ದೋಸೆ ಮಾಡಿದರೆ ಬಾಣಂತಿಯರಿಗೂ ಜೀರ್ಣಕ್ಕೆ ಹಗುರವಾಗಿರುವುದಲ್ಲದೇ ಆರೋಗ್ಯಕ್ಕೂ ಒಳ್ಳೆಯದು.

ನನ್ನವರು ಬಿ.ಎಸ್ಸಿ. ಪೂರೈಸಿದ್ದು, ಬೆಂಗಳೂರಿನಲ್ಲಿಯೇ. ಬೆಂಗಳೂರಿನಲ್ಲಿದ್ದಾಗ ಅವರು ತಿಂದ 'ವಿದ್ಯಾರ್ಥಿಭವನ' (ಹೋಟೆಲ್ ಹೆಸರು)ದ ದೋಸೆಯ ರುಚಿಯ ವರ್ಣನೆ ಮಾಡುತ್ತಿದ್ದರು. ಅಷ್ಟೇ ಏಕೆ ಖ್ಯಾತ ಸಾಹಿತಿಗಳಾದ ವಿ.ಸೀತಾರಾಮ್, ಪು.ತಿ.ನ.,

ಡಿ.ವಿ.ಜಿ, ನಿಸಾರ ಅಹಮ್ಮದ್, ಮಾಜಿ ಮುಖ್ಯಮಂತ್ರಿ ಎಸ್.ಎಮ್.ಕೃಷ್ಣ, ಮಾಸ್ತಿ ಮತ್ತು ಅಡಿಗರೂ ಸಹ ವಿಶ್ವವಿಖ್ಯಾತಿ ಹೊಂದಿದ ವಿದ್ಯಾರ್ಥಿಭವನದಲ್ಲಿಯೇ ಮಸಾಲೆದೋಸೆ ಸವಿಯುತ್ತ ಹರಟೆ ಕೊಚ್ಚುತ್ತಿದ್ದರಂತೆ. ಅವರೆಲ್ಲ ಆ ಹೋಟೆಲ್‌ನ ಖಾಯಂ ಗಿರಾಕಿಗಳು. ಅದರಿಂದಾಗಿ ಆ ಹೋಟೆಲ್‌ನ ಕೀರ್ತಿ ಹೆಚ್ಚಿರಬೇಕು. ಇನ್ನೊಂದು ಮೋಜಿನ ವಿಷಯವೆಂದರೆ ಇತ್ತೀಚಿಗೆ ರೊಟ್ಟಿಮಾಡುವ ಲಲನೆಯರು ರೊಟ್ಟಿ ಬಿಟ್ಟು ದೋಸೆಯನ್ನೇ ಮಾಡುತ್ತಿದ್ದಾರಂತೆ. ಈಝಿಗೋಯಿಂಗ್ ಇರುವುದರಿಂದ.

ಮೊದಲು ಕೇವಲ ಮನೆಗಳಲ್ಲಿ ಮತ್ತು ಹೋಟೆಲ್‌ಗಳಲ್ಲಿ ಮಾತ್ರ ರಾರಾಜಿಸುತ್ತಿದ್ದ ದೋಸೆ ಈಗ ಮದುವೆ, ಸಮಾರಂಭ ಮತ್ತು ಔತಣಕೂಟಗಳಲ್ಲೂ ತನ್ನ ವಿಶಿಷ್ಟತೆಯನ್ನು ಕಾಪಾಡಿಕೊಂಡಿದೆ. ಅಷ್ಟೇ ಏಕೆ ಚಿಕ್ಕ ಚಿಕ್ಕ ಡಬ್ಬಿ ಅಂಗಡಿಗಳಿಂದ ಹಿಡಿದು ಪಂಚತಾರಾ ಹೋಟೆಲ್‌ವರೆಗೂ ದೋಸೆ ತನ್ನತನವನ್ನೂ ಗುರುತಿಸಿಕೊಂಡಿದೆ. ಬೆಂಗಳೂರು ನಗರವೊಂದರಲ್ಲಿಯೇ 2 ಲಕ್ಷಕ್ಕಿಂತ ಹೆಚ್ಚು ದೋಸೆಗಳು ಬಿಕರಿಯಾಗುತ್ತವಂತೆ! ಮದುವೆಯಾದ ಹೊಸದರಲ್ಲಿ ನನ್ನವರೊಂದಿಗೆ ನಾನು ಹೋಟೆಲ್‌ಗೆ ಹೋದರೆ ದೋಸೆಯನ್ನೇ ಆರ್ಡರ್ ಮಾಡುತ್ತಿದ್ದೆವು. ಈಗಲೂ ಸಾಫ್ಟವೇರ್ ಇಂಜಿನಿಯರ್‌ಗಳು ಶನಿವಾರ ಮತ್ತು ರವಿವಾರ ಬಂತೆಂದರೆ, ಕುಟುಂಬ ಸಮೇತ ದೋಸೆ ಸವಿಯಲಿಕ್ಕೆ ಹೋಟೆಲ್‌ಗೆ ಲಗ್ಗೆಯಿಡಲು ತವಕಿಸುತ್ತಾರೆ.

ಹಂಚಿನ ನಟ್ಟನಡುವೆ ದೋಸೆಹಿಟ್ಟನ್ನು ಹಾಕಿ ಸೌಟ್‌ನಿಂದ ತಿರುವುತ್ತಿರುವಾಗ ಸುತ್ತಲೂ 5, 6 ಗೀರುಗಳಾಗುತ್ತಾ ಸಾಗುತ್ತವೆ. ಅದೇ ನನಗೆ ಸೋಜಿಗವೆನಿಸಿತ್ತು ಚಿಕ್ಕಂದಿನಲ್ಲಿ. ಸಂಕ್ರಾಂತಿಯ ಮರುದಿನ ಕರಿ ದಿನ ಮತ್ತು ಹೋಳಿಹುಣ್ಣಿಮೆಯ ಕರಿ ದಿನಕ್ಕೂ ದೋಸೆ ಹೊಯ್ಯುವ ವಾಡಿಕೆ ಉತ್ತರಕರ್ನಾಟಕದಲ್ಲಿದೆ. ಕರಿ ಎಂದರೆ ಏನಾದರೂ ಕರಿಯಬೇಕೆಂಬುದು ಹಿರಿಯರ ಆಶಯ. ಪ್ರಪ್ರಥಮವಾಗಿ ಒಂದು ಪುಟ್ಟ ಪುಟಾಣಿ ದೋಸೆ ಹುಯ್ದು ಚೊಚ್ಚಲು ಮಕ್ಕಳ ಡುಬ್ಬ(ಬೆನ್ನು)ದ ಮೇಲೆ ಬಡಿದು, ನಿವಾಳಿಸಿ ಚೆಲ್ಲುತ್ತಿದ್ದರು ನನ್ನ ಅವ್ವ. ಅದು ನಮಗೆ ಮೋಜೆನಿಸುತ್ತಿತ್ತು. ನನ್ನ ಹಿರಿಮಗಳು ಈಗಲೂ ದೋಸೆ ಮಾಡಿದರೆ 'ನನ್ನ ಬೆನ್ನಿಗೆ ಬಡಿ' ಎಂದು ನಗುತ್ತಾಳೆ.

'ದ್ವಾಸಿ ಊಟಲ್ಲಾ ದಾಸರ ಆಟಲ್ಲಾ' ಎಂಬ ಉಕ್ತಿಯಂತೆ ಅವಿಭಕ್ತ ಕುಟುಂಬದಲ್ಲಿ ಒಬ್ಬೊಬ್ಬರಂತೆ ಪ್ರತಿಯೊಬ್ಬರಿಗೂ ಬಿಸಿ ಬಿಸಿ ದೋಸೆ ಹಾಕುವುದರಲ್ಲಿಯೇ ತುಂಬ ಸಮಯ ವ್ಯಯವಾಗುತ್ತದೆ. ತಾಯಿ ಅಥವಾ ಮನೆಯೊಡತಿಗೆ ಸುಸ್ತಾಗಿ, ದಣಿದು ತನಗೇ ದೋಸೆ ಮಾಡಿಕೊಂಡು ತಿನ್ನಲು ಮಧ್ಯಾಹ್ನವಾಗುತ್ತಿತ್ತು. ಹೀಗೆ ದೋಸೆಯ ಊಟ ಮುಗಿಯದ ದಾಸರ ಆಟವಿದ್ದಂತೆ. 'ಎಲ್ಲಾರ ಮನಿದ್ವಾಸಿನೂ ತೂತ' ಎಂಬುದು ರೂಢಿಗತ ಮಾತು. ಬೇರೆಯವರನ್ನ ಆಡಿಕೊಳ್ಳುವಾಗ ಈ ಮಾತನ್ನು ಹೇಳುತ್ತಾರೆ. ಎಲ್ಲರ ಮನೆಯಲ್ಲೂ(ವ್ಯಕ್ತಿಗಳಲ್ಲೂ) ಕೊಂಚವಾದರೂ ಲೋಪದೋಷಗಳಿದ್ದೇ ಇರುತ್ತವೆ ಎಂಬ ಅರ್ಥದಲ್ಲಿ ಹೇಳಲಾಗಿದೆ. ಇನ್ನೊಂದು ಉಕ್ತಿ 'ಆರು ದೋಸೆ ಕೊಟ್ರೆ ಅತ್ತೆ ಕಡೆ, ಮೂರು ದೋಸೆ ಕೊಟ್ರೆ ಸೊಸೆ ಕಡೆ' ಎಂಬ ಗಾದೆಯು ವೇಳೆಗೆ ತಕ್ಕಂತೆ ಬದಲಾಗುವ ಜನರ ಮನೋಭಾವಕ್ಕೆ ತಕ್ಕ ನಿದರ್ಶನವಿದು. 'ಬಿಳಿ ಅಜ್ಜನಿಗೆ ಮೈತುಂಬ ಕಣ್ಣು' ಎಂಬ ಗಾದೆಯ ಉತ್ತರ ನೀವೇ ಊಹಿಸಿ.

ಮಕ್ಕಳು ಚಿಕ್ಕವರಿದ್ದಾಗ, ನನ್ನವರು ಅವರಿಗೆ ಯಾವಾಗಲೂ ಹೋಟೆಲ್ ದೋಸೆಯನ್ನೇ ತಿನ್ನಿಸುತ್ತಿದ್ದರು. ಅದನ್ನು ನೋಡಿ ಬೇಸತ್ತ ನಾನು, ಮನೆಯಲ್ಲೇ ಹೋಟೆಲ್ ತರದ ಗರಿಗರಿ ದೋಸೆ ತಯಾರಿಸಿ ಒಳಗಡೆ ಕೆಂಪು ಚಟ್ನಿ ಸವರಿ ಆಲೂಗಡ್ಡೆ ಪಲ್ಯ

ಇಟ್ಟು ಅವರಂತೆಯೇ ಚಾಪೆಸುತ್ತಿದ್ದಂತೆ ಸುತ್ತಿ ಪಾರ್ಸಲ್ ತಯಾರಿಸಿದೆ. ಮಕ್ಕಳು ಶಾಲೆಯಿಂದ ಬರುತ್ತಿದ್ದಂತೆಯೇ ಥೇಟ್ ಹೋಟೆಲ್ ತರವೇ ಇದ್ದ ದೋಸೆಯನ್ನು ನನ್ನಿಂದ ಪಡೆದು, ಮುಗಿಬಿದ್ದು ತಿನ್ನತೊಡಗಿದರು. ತಿಂದ ನಂತರ ವಾಸ್ತವವನ್ನು ಅರುಹಿದೆ. ನನ್ನವರೊಂದಗೆ ಮಕ್ಕಳೂ ಫೂಲ್ ಆಗಿ ಬಿದ್ದು ಬಿದ್ದು ನಕ್ಕರು.

ಇತ್ತೀಚಿಗೆ ಯಶಸ್ವಿಗೊಂಡ ಚಂದ್ರಯಾನದ ಬಗೆಗೆ ಇಸ್ರೋದ ವಿಜ್ಞಾನಿಯೊಬ್ಬರು ವಾಶಿಂಗ್‌ಟನ್ ಪೋಸ್ಟ್ ಜೊತೆ ಮಾತನಾಡುತ್ತ, 'ಪ್ರತಿದಿನ ಸಂಜೆ ತಂಡದ ವಿಜ್ಞಾನಿಗಳೆಲ್ಲರಿಗೂ ಮಸಾಲೆದೋಸೆ ಮತ್ತು ಕಾಫಿ ಕೊಡಿಸುತ್ತಿದ್ದೆ. ಅದರಿಂದ ಅವರು ಇನ್ನಷ್ಟು ಉತ್ಸಾಹದಿಂದ ಕೆಲಸಮಾಡಲು ಶಕ್ಯವಾಯ್ತು' ಎಂದು ಹೇಳಿದ್ದರು. ಮಸಾಲೆ ದೋಸೆಯಿಂದಲೇ ಚಂದ್ರಯಾನ ಯಶಸ್ವಿಯಾಯಿತೆಂದು ನಾನು ಹೇಳುತ್ತಿಲ್ಲ. ಆದರೆ ಆ ದೋಸೆಯ ಪ್ರೋತ್ಸಾಹದಿಂದ ಅವರ ಕೆಲಸದ ಹುಮ್ಮಸ್ಸು ಇಮ್ಮಡಿಗೊಂಡಿತು.

ಒಟ್ಟಿನಲ್ಲಿ ದೋಸೆಯ ಹಿರಿಮೆ-ಗರಿಮೆಯನ್ನು ಎತ್ತಿಹಿಡಿದು ಅದರ ಗುಣಗಾನ ಮಾಡುವುದು ಈ ಒಂದು ಲೇಖನದಿಂದ ಅಸಾಧ್ಯ. ಇದು ಮೊಗೆದಷ್ಟೂ ಬರಿದಾಗದ ವಿಶಿಷ್ಟ ಅಕ್ಷಯಪಾತ್ರೆ. ■

**ತಪ್ಪಿದ....ಪೂರ್ಣ ಹರಾಜು...!** **ವಿ.ವಿಜಯೇಂದ್ರ ರಾವ್**

ಪರಮೇಶಿ ಭಾನುವಾರ ಬೆಳಿಗ್ಗೆ ಹೋಟೆಲ್‌ಗೆ ಹೋಗಿ ಒಂದು ಟೇಬಲ್ ಬಳಿ ಕೂಡುತ್ತಾನೆ. ಆಗ ಒಬ್ಬ ಮಾಣಿ ಬಂದು-ತಿನ್ನಲು ಏನು ಬೇಕು ಎಂದು ಕೇಳಿದಾಗ, ಪರಮೇಶಿ ಇಲ್ಲಿ ತಿನ್ನಲು ಬೇಡ, ಪಾರ್ಸೆಲ್ ಬೇಕು ಎನ್ನುತ್ತಾನೆ.ಮಾಣಿ ಏನು ಪಾರ್ಸೆಲ್ ಬೇಕು? ಎಂದು ಕೇಳಿದಾಗ ಪರಮೇಶಿ - ನಾಲ್ಕು ಸೆಟ್ ಪರೋಟಾ...ಇಲ್ಲ, ಇಲ್ಲ ಮೂರು ಸೆಟ್ ಪರೋಟಾ, ಆದರೆ ಅದನ್ನು ಬೇರೆ ಬೇರೆಯಾಗಿ ಕಟ್ಟು ಆದರೆ ಅದಕ್ಕೆ ಕೊಡುವ ಕುರ್ಮಾವನ್ನು ಮಾತ್ರ ಒಟ್ಟಿಗೆ ಕೊಡು ಎಂದ, ಆಗ ಮಾಣಿ ನಿಮಗೆ ಒಬ್ಬ ಮಗ, ಒಬ್ಬ ಮಗಳು ತಾನೇ? ಅಂತ ಕೇಳಿದ ಪರಮೇಶಿ-ಹೌದೌದು...ಹೇಗೆ ಕಂಡು ಹಿಡಿದೆ ಅಂದ. ಅದಕ್ಕೆ ಮಾಣಿ ನೀವು ನಾಲ್ಕು ಸೆಟ್ ಹೇಳಿ ಆಮೇಲೆ ಒಂದನ್ನು ಕ್ಯಾನ್ಸಲ್ ಮಡಿದಾಗಲೇ ಕಂಡು ಹಿಡಿದೆ ಅಂದವನು ಮನೆಯಲ್ಲಿ ಪಾತ್ರೆ ತೊಳೆಯುವುದು ನೀವೇ ತಾನೇ ಅಂತ ಕೇಳಿದ. ಪರಮೇಶಿ ಇನ್ನೂ ಆಶ್ಚರ್ಯದಿಂದ ಅಯ್ಯೋ ಅದನ್ನೂ ಹೇಗಯ್ಯಾ ಕಂಡುಹಿಡಿದೆ ಅಂತ ಕೇಳಿದಾಗ ಮಾಣಿ ಪರೋಟ ಬೇರೆ ಬೇರೆಯಾಗಿ ಕಟ್ಟು ಅಂದಾಗಲೇ ಅರ್ಥವಾಗಿತ್ತು ಅಂತ ಅಂದಾಗ ಪರಮೇಶಿ ಅವನನ್ನು ಮೆಚ್ಚಿ ನೀನೊಬ್ಬ ಅದ್ಭುತವಾದ ಜ್ಞಾನಿ ಕಣೋ ಅಂದ. ನಂತರ ಮಾಣಿ ನಿಮ್ಮ ಮಗಳು ತುಂಬಾ ಸೋಂಭೇರಿ, ಇರೋ ಜಾಗ ಬಿಟ್ಟು ಕದಲದೆ ಮೊಬೈಲ್ ಗಿಬೈಲ್ ನೋಡ್ಕೊಂಡು ಕೂತಿರ್‍ತಾಳೆ. ಅಕಸ್ಮಾತ್ ಏನಾದರೂ ಕೆಲಸ ಮಾಡಿದರೆ ಅದಕ್ಕೆ ಬದಲಾಗಿ ನಿಮ್ಮತ್ರ ದುಡ್ಡು ವಸೂಲು ಮಾಡ್ತಾಳೆ ಸರಿತಾನೇ ಅಂತ ಕೇಳಿದಾಗ ಪರಮೇಶಿ ತಲೆ ಮೇಲೆ ಕೈ ಹೊತ್ತು ಕೂತು ಅದೂ ಸರಿಯಾಗಿದೆ ಅದನ್ನು ಹೇಗಯ್ಯ ಕಂಡುಹಿಡಿದೆ ಅಂತ ಕೇಳಿದ. ನಂತರ ಮಾಣಿ ನಿಮಗೆ ಕಣ್ಣಿನ ದೋಷ ಕೂಡಾ ಇದೆ ಅಲ್ಲವೇ ಅಂದಾಗ ಪರಮೇಶಿ ಏನಯ್ಯಾ ಇದು ಜಾತಕಾನೇ ಬಿಚ್ಚಿಡ್ತಾ ಇದೀಯ ಅಂದ. ಅದಕ್ಕೆ ಮಾಣಿ ನಿಮಗೆ ಕಣ್ಣು ಸರಿಯಾಗಿದ್ದಿದ್ರೆ ಕುರ್ಮಾನ ಬೇರೆಬೇರೆಯಾಗಿ ಕಟ್ಟೋಕೆ ಹೇಳ್ತಿದ್ರಿ. ಮೂರು ಕವರನ್ನು ತೆಗೆಯಲು ಕಷ್ಟವಾಗುತ್ತೆ ಅಂತ ತಾನೇ ಒಂದೇ ಕವರಲ್ಲಿ ಹಾಕಲು ಹೇಳಿದ್ರಿ ಅಂದಾಗ ಪರಮೇಶಿ ಮಾಣಿಯ ಬೆನ್ನು ತಟ್ಟಿ ನಿನ್ನದು ಬೇರೆಯೇ ಲೆವೆಲ್ ಕಣಪ್ಪಾ ಅಂದ. ನಂತರ ಮಾಣಿ ಇನ್ನು ನಿಮ್ಮ ಹೆಂಡತಿ ಅಂತ ಪ್ರಾರಂಭ ಮಾಡಿದಾಗ ಪರಮೇಶಿ ಬೇಡಪ್ಪಾ ಬೇಡ. ನಾನು ನಿಮ್ಮ ಹೋಟೆಲಿಗೆ ಬಂದದ್ದು ತಗೊಂಡು ಹೋಗೋಕೆ. ನನ್ನ ಮನೆಯ ಮರ್ಯಾದೆಯನ್ನು ಇಲ್ಲೇ ಕಳ್ಕೊಂಡು ಹೋಗೋಕಲ್ಲ ಅಂತ ಗಡಿಬಿಡಿಯಿಂದ ಮಾಣಿ ಕೊಟ್ಟ ಪಾರ್ಸಲ್ ಹಿಡಿದು ಅಲ್ಲಿಂದ ಓಡಿದ.

## ಉತ್ತರಕ್ಕಿಂತ ಪ್ರಶ್ನಪತ್ರಿಕೆಯಲ್ಲಿರುವ ತಪ್ಪು ಮುಖ್ಯ

ಜಿ. ವಿ. ಅರುಣ

'ಸಂಪಾದಕರ ಕಡೆಯವರದ್ದೇ ಆ ಮೊಬೈಲ್ ಕರೆ' ಎಂದು ನನಗೆ ಗುಮಾನಿ. ಕರೆಮಾಡಿದವರು ಯಾರೆಂದು ನನಗೆ ತಿಳಿದಿರಲಿಲ್ಲ. ಸಂಭಾಷಣೆಯ ಅನಂತರವೂ ತಿಳಿಯಲಿಲ್ಲ. ಅವರು ಅದನ್ನು ತಿಳಿದುಕೊಳ್ಳಲು ನನಗೆ ಅವಕಾಶವನ್ನೇ ಕೊಡಲಿಲ್ಲ. "ಅಪರಂಜಿ"ಯಲ್ಲಿ ಬಂದ ಲೇಖನವನ್ನು ಓದಿ (ಇಲ್ಲ ನೋಡಿ), ಅಷ್ಟೇನೂ ಪ್ರಸಿದ್ಧನಲ್ಲದ ನನ್ನ ಸಂಪರ್ಕಸಂಖ್ಯೆಯನ್ನು ತಿಳಿದುಕೊಂಡು, ಸಮಯ ಮಾಡಿಕೊಂಡು, ಕರೆಮಾಡಿ, ತರಾಟೆಗೆ ತೆಗೆದುಕೊಳ್ಳಬೇಕಾದರೆ ಅವರು ಸಂಪಾದಕರ ಆಪ್ತರೇ ಇರಬೇಕು ಎಂಬುದನ್ನು 1+1=3 ಎನ್ನುವಷ್ಟು ಸುಲಭವಾಗಿ ನಾನು ಊಹಿಸಿಬಿಟ್ಟಿದ್ದೆ.

ಇನ್ನು ಅವರ ತರಾಟೆ ಭರಾಟೆಯ ಶೈಲಿಯ ಎಳೆಯನ್ನು ಹಿಡಿದು ಹೊರಟಾಗ, ಅವರು ನಿರಂತರವಾಗಿ ಮಕ್ಕಳ ಕಿವಿಹಿಂಡಿದ ಅಧ್ಯಾಪಕರೇ ಇರಬೇಕು ಎಂಬುದು ನನಗೆ 2+2=5 ಎನ್ನುವಷ್ಟು ಸುಸ್ಪಷ್ಟವಾಗಿಹೋಗಿತ್ತು. ಅಂದಹಾಗೆ, ಇದುವರೆವಿಗೆ ನಾನು ಮಾಡಿಕೊಂಡಿರುವ ಇಂಥ ಅಗಣಿತ ಊಹೆಗಳಲ್ಲಿ ಯಾವುದೊಂದೂ ಸತ್ಯವಾಗಿಲ್ಲ. ಬೇಕಿದ್ದರೆ ನನ್ನ ಮನೆಯವರನ್ನು ಕೇಳಿ ನೋಡಿ.

"ಅಲ್ಲಾ ಕಣ್ರೀ, ಅಪರಂಜಿಯ 'ಒಂದು ಸ್ಪರ್ಧೆ'ಯಲ್ಲಿ ಅವರು ಕೇಳಿದ್ದೇನು? ನೀನು ಬರೆದಿದ್ದೇನು?"

"ಬಾಲಬೋಧೆಯ ಕೆಂಚುಗೂದಲ ಮೊಲದ ಕಥೆಯನ್ನು ಒಬ್ಬ ಸಾಹಿತಿಯ ಶೈಲಿಯಲ್ಲಿ ಬರೆಯಬೇಕು ಅಂತ..."

"ಅಲ್ಲ! ಅವರು ಕೇಳಿದ್ದು ಕೆಂಚುಗೂದಲ ಎಂದಲ್ಲ. ಅದು ಕೆಂಚು ಕೂದಲ! ನಿನಗೆ ಬೇಕಾದ ಹಾಗೆ ಪ್ರಶ್ನೆಯ ಪದವನ್ನು ಬದಲಾಯಿಸಿಕೊಳ್ಳಲು ನೀನು ಯಾವ ಸೀಮೆ ಸರದಾರನಪ್ಪಾ...?"

ಇಂಥ ಪ್ರಶ್ನೆಗಳಿಗೆ ಉತ್ತರಿಸಿ ಬಚಾವಾಗಲು ಈ ಜನ್ಮದಲ್ಲಿ ಸಾಧ್ಯವಿಲ್ಲ ಎಂದು ನನಗೆ ಗೊತ್ತು. ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು "ನಾನೊಬ್ಬನೇ ಅಲ್ಲ ಸರ್, ಇನ್ನೂ ಅನೇಕರು ಆ ಸಂಚಿಕೆಯಲ್ಲಿ ಬೇರೆಬೇರೆ ರೀತಿ ಅದನ್ನು ಕರೆದಿದ್ದಾರೆ. ಕೆಂಪುಗೂದಲು, ಕೆಂಗೂದಲು, ಕೆಂಚುಕೇಶಿ... ಹೀಗೆ. ಮೊದಲು ಅವರನ್ನು ಕೇಳಿ...' ಎಂದು, 'ಅವರು ತಪ್ಪು ಮಾಡಿಲ್ವಾ?' ಎಂದು ಮರುಪ್ರಶ್ನೆ ಮಾಡುವ ರಾಜಕಾರಣಿಯಂತೆ ಕೇಳಿದೆ.

ಆದರೆ ಅವರು ಇಂಥ ಎಷ್ಟು ಉತ್ತರಗಳನ್ನು ಕೇಳಿದ್ದರೋ! "ಸುಮ್ಮನೆ ಬಿಡ್ತೀನಾ? ಅವರನ್ನೂ ವಿಚಾರಿಸಿಕೊಳ್ಳುತ್ತೇನೆ. ಈ ತಿಳಿನಗೆಯ ಕಾರಂಜಿಯನ್ನು 42 ವರ್ಷಗಳಿಂದ ಓದ್ತಾ ಇದೀನಿ. ನನಗೆ ಬೇಕಾಗಿರುವುದು ಅಪ್ಪಟ ಅಪರಂಜಿ, ನಾಟ್ ಎ ಗುಲಗಂಜಿ ಲೆಸ್!" ಎಂದು ಗುಡುಗಿದರು.

"ಅದು ಸರಿ, ಆದರೆ ನನ್ನನ್ನೇ ಯಾಕೆ ಮೊದಲು ಕೇಳಬೇಕು?" ಎಂದೆ – ಇದು ಕೇಳಬೇಕಾದ ಪ್ರಶ್ನೆಯೇ ಅಲ್ಲವೇ?

"ನಾನು ಇಂಥ ವಿಚಾರಗಳಲ್ಲಿ ಬಹಳ ಸಿಸ್ಟಮ್ಯಾಟಿಕ್ಕು; ಸರ್ಜಿಕಲ್ ಸ್ಟ್ರೈಕ್ ರೀತಿ ಕರಾರುವಾಕ್ಕು " ಎಂದು ಹೇಳಿ, "ನಿನ್ನ ಹೆಸರು ಅಕ್ಷರಮಾಲೆಯಲ್ಲಿ ಮೊದಲು ಬರುತ್ತೆ ಅದಕ್ಕೆ ನೀನೇ ಮೊದಲ ವಿಕ್ಟಿಮ್" ಎಂದರು.

'ಹಾಜರಾತಿ ತಪ್ಪಿಸಿಕೊಳ್ಳಬೇಡ. ನಿನ್ನದೇ ಮೊದಲ ಹೆಸರು; ಬೆಲ್ ಹೊಡೆಯುವ ಮೊದಲೇ ತರಗತಿಯ ಒಳಗೆ ಕುಳಿತಿರು' ಎಂದು ನಮ್ಮಮ್ಮ ಶಾಲಾದಿನಗಳಲ್ಲಿ ಹೇಳುವಾಗಲು ಇದೇ ಬಲಿಪಶುವಿನ ಭಾವನೆ ಮೂಡುತ್ತಿದ್ದುದು ನೆನಪಾಯಿತು.

"ಸರ್, ಹಾಗಿದ್ರೆ ನೀವು ಮೊದಲು ತರಾಟೆಗೆ ತೊಗೋಬೇಕಾದ್ದು 'ಅಣಕು ರಾಮನಾಥ್' ಅವರನ್ನು. ಅವರ ಹೆಸರಿನಲ್ಲಿ 'ಅ' ಆದಮೇಲೆ ಟಠಡಢ 'ಣ' ಬರುತ್ತೆ; ನನ್ನದು 'ಅ' ಆದಮೇಲೆ ಯ 'ರ' ಅನ್ನುವಾಗ ಬರುತ್ತೆ. ಇಂಗ್ಲಿಷಿನಲ್ಲೂ ಅವರ ಹೆಸರಿನ 'ಎನ್' ಆದಮೇಲೆ ನನ್ನ ಹೆಸರಿನ 'ಆರ್' ಬರುವುದು" ಎಂದೆ, ದೊಣ್ಣೆಪೆಟ್ಟು ತಪ್ಪಿಸಿಕೊಂಡು ಹಿಗ್ಗುತ್ತಾ.

"ನನಗೇ ಕಾಗುಣಿತ ಕಲಿಸ್ತಿಯೇನಪ್ಪಾ ! ನೆನಪಿರಲಿ, ಬೆಂಗಳೂರಲ್ಲಿ ನೀನು ಕಾವೇರಿ ನೀರು ಗುಟುಕರಿಸಿರುವುದಕ್ಕಿಂತ ನೂರುಪಟ್ಟು ಕರ್ನಾಟಕದ ನೂರಾರು ಕೆರೆಗಳ ನೀರು ಹೀರಿದ್ದೇನೆ!" ಎಂದು ಗುಟುರು ಹಾಕಿದರು. ನಾನು ಎಂಜಲನ್ನು ನುಂಗಿ ಒಣಗುತ್ತಿದ್ದ ಗಂಟಲನ್ನು ತೇವ ಮಾಡಿಕೊಂಡೆ.

"ಅವರ ಹೆಸರನ್ನು ನಾನು ರಾಮನಾಥ ಅಂತ ಗುರುತು ಹಾಕಿಕೊಂಡಿದ್ದೇನೆ. ಹಾಗಾಗಿ ಮೊದಲ ಹಲ್ಲೆಯಿಂದ ಅವರು ಬಚಾವ್. ಈಗ ನೀನು ಉತ್ತರ ಕೊಡು"

"ಸರ್ ಕೆಂಪು+ಕೂದಲು ಎಂದು ಸಮಾಸಮಾಡಿ ಬರೆಯುವಾಗ ಕೆಂಪುಗೂದಲು ಆಗುತ್ತೆ. ಅದನ್ನು ನಾನು ಅನುಕರಿಸಿದ ಸಣ್ಣಕತೆಗಳ ಪಿತಾಮಹ ಶ್ರೀನಿವಾಸರು..." ಎನ್ನುತ್ತಿದ್ದಂತೆಯೇ,

"ಆ ಹಿರಿಯರನ್ನು ನಿನ್ನ ಸಮಾಸಸಮಸ್ಯೆಯ ಮಧ್ಯೆ ಎಳೆದುತರಬೇಡ" ಎಂದು ಆಜ್ಞಾಪಿಸಿದರು. ಅದೂ ಸರಿ ಎನ್ನಿಸಿತು.

"ಸರಿ ಸರ್, ನಾನು ಕೆಂಪು ಕೂದಲನ್ನು ಕೆಂಗೂದಲು ಮಾಡಬಹುದಿತ್ತು. ಇನ್ನೂ ಹಾಗೆ ನೋಡಿದರೆ, ಚೆಂಗೂದಲ ಮೊಲ ಎಂದು ಮಾಡಬಹುದಿತ್ತಲ್ಲಾ ಎಂದು ಅನಂತರ ನನಗೆ ಹೊಳೆಯಿತು..."

"ಏನು? ಚೆಂಗೂದಲೆ... ಬಲು ಚೆನ್ನಾಗಿದೆ ನಿನ್ನ ವಾದ!"

"ಯಾಕೆ ಸರ್? ಕೆಂಪು + ಹವಳವನ್ನು ಚೆಂಬವಳ ಎಂದು ಹೇಳುವುದಿಲ್ಲವೇ? ನಿಮ್ಮ ಶಾಲಾ ಕಾಲೇಜು ದಿನಗಳಲ್ಲಿ ನೀವು ಯಾವ ಹುಡುಗಿಗೂ ಚೆಂಗುಲಾಬಿ ಕೊಟ್ಟೇ ಇರಲಿಲ್ಲವೇ!?" ಎಂದೆ.

"ನಾನು ಏನು ಮಾಡಿದ್ದೆ, ಮಾಡಿರಲಿಲ್ಲ ಅನ್ನುವುದು ಇಲ್ಲಿಯ ಪ್ರಶ್ನೆಯಲ್ಲ. ಸುಮ್ಮನೆ ನೀನು 'ಸ್ಪರ್ಧೆಯಲ್ಲಿ ಇಲ್ಲದ ಕೆಂಚುಗೂದಲ ಮೊಲ ಎಂದು ಬರೆದದ್ದು ತಪ್ಪು' ಅಂತ ಬೇಷರತ್ತಾಗಿ ಒಪ್ಪಿಕೊಂಡು, ಒಂದು ಕ್ಷಮಾಪಣಾ ಪತ್ರವನ್ನು ಸಂಪಾದಕರಿಗೆ ಕಳಿಸಿಬಿಡು"

"ಅವರು ಅದನ್ನು ಪ್ರಕಟಿಸದೆ ಇದ್ದರೆ ನಾನು ಬರೆದು ಏನು ಪ್ರಯೋಜನ?"

"ಅದನ್ನು ನನಗೆ ಬಿಡು. ಮೊದಲು ಪತ್ರ ಬರಿ" ಎಂದು ಜೋರಾಗಿ ಹೇಳಿದರು.

"ಬರೆಯುವುದಿಲ್ಲ! ಏಕೆಂದರೆ ಮೊದಲನೆಯದಾಗಿ ಅವರು ಸ್ಪರ್ಧೆಯಲ್ಲಿ ಕೊಟ್ಟಿರುವ ಪದಪುಂಜವೇ ತಪ್ಪು!" ಎಂದು ಖಚಿತಪಡಿಸಲು ಹೇಳಿದೆ.

ಅವರು "ಆಂ..." ಎಂದು ತೆರೆದ ಬಾಯಿ ಮೊಬೈಲಿನಲ್ಲಿ ಧ್ವನಿಸಿತು.

"ಹೌದು ಮತ್ತೆ, 'ಬಿಳಿ ಕೂದಲ ಮೊಲ' ಅಂತ ಹೇಳ್ತೀರಾ? ಅದು 'ಬಿಳಿಮೊಲ' ತಾನೇ! ಹಾಗೆ ಇದು 'ಕೆಂಚುಮೊಲ' ಆಗಬೇಕಾಗಿತ್ತು. ಆ ಬೇಡದ ಕೂದಲನ್ನು ಎಳೆದು ತಂದದ್ದೇ ಮೊದಲ ತಪ್ಪು" ಎಂದು ನಿರ್ಧಾರವಾಗಿ ಹೇಳಿದೆ.

ಅವರು "ಥತ್, ಈಗಿನ ಪೀಳಿಗೆಯವರೇ ಇಷ್ಟು. ಉತ್ತರ ಸರಿಯಾಗಿ ಗೊತ್ತಿಲ್ಲದಿದ್ದರೂ ಪ್ರಶ್ನಪತ್ರಿಕೆಯಲ್ಲಿ ಎಷ್ಟು ತಪ್ಪುಗಳಿವೆ; ಎಷ್ಟು ಗ್ರೇಸ್ ಮಾರ್ಕ್ಸ್ ಬರುತ್ತೆ ಅಂತ ಮೊದಲೇ ಲೆಕ್ಕಹಾಕುತ್ತವೆ, ಬಚಾವಾಗಿಬಿಡುತ್ತವೆ" ಎಂದು ಕರೆ ಕುಕ್ಕಿದರು.

# ಚಪ್ಪಲಿಯ ಚಿಂತನೆಯಲ್ಲಿ....

ಗೀತಾ ಕುಂದಾಪುರ

ಬಿಸಿ, ಬಿಸಿ ಚಹಾ ಕುಡಿಯುತ್ತಾ ಪೇಪರ್ ಓದುತ್ತಿರುವಾಗ ಸುದ್ದಿಯೊಂದು ನನ್ನ ಪಿತ್ತ ನೆತ್ತಿಗೇರುವಂತೆ ಮಾಡಿತು, ನಟಿಯೊಬ್ಬಳ ಚಪ್ಪಲಿಯ ಬೆಲೆ ಎರಡು ಲಕ್ಷ ಎಂದು ಬರೆದಿತ್ತು, ಇಷ್ಟು ಸಾಕಾಯಿತು ನನ್ನ ನೆಮ್ಮದಿ ಕೆಡಲು. ಕಳೆದ ವಾರ ನನ್ನ ಚಪ್ಪಲಿ ಕಿತ್ತು ಕೈಗೆ ಬಂದಾಗ ಚಪ್ಪಲಿ ಅಂಗಡಿಗೆಯಲ್ಲಿ ಚೆಂದದ ಚಪ್ಪಲಿಯೊಂದನ್ನು ಇಷ್ಟ ಪಟ್ಟಿದ್ದೆ, ಅದರ ಬೆಲೆ ಒಂದೂವರೆ  ಸಾವಿರ ಎಂದು ತಿಳಿದ ಗಂಡ, ಚಪ್ಪಲಿ ನಿನ್ನ ಮುಖಕ್ಕೆ ಒಪ್ಪಬಹುದು ಕಣೇ, ನನ್ನ ಜೇಬಿಗಲ್ಲ, ಇದೇ ದುಡ್ಡಲ್ಲಿ ನಿನಗೊಂದು ಚೂಡಿದಾರ ತಗೋಬಹುದು' ಎನ್ನುತ್ತಾ 500 ರೂಪಾಯಿ ಚಪ್ಪಲ್ ಕೊಡಿಸಿದರು. ಒಂದು ಲಕ್ಷುರಿ ಕಾರಿಗಿಂತ, ಶ್ರೀಮಂತ ಬಡಾವಣೆಯಲ್ಲಿರುವ ಮನೆಗಿಂತ ಹೆಚ್ಚು ಬೆಲೆಯ ಚಪ್ಪಲಿಯೂ ಇದೆಯಂತೆ. ಮುಖ ನೋಡಿ ಮಣೆ ಹಾಕುವುದಲ್ಲ, ಹಾಕಿದ ಚಪ್ಪಲಿ ನೋಡಿ ಮಣೆ ಹಾಕುವ ಕಾಲವಿದು ಅಂದರೆ ಎಷ್ಟು ಬೆಲೆ ಬಾಳುವ ಚಪ್ಪಲಿಯೋ ಅದಕ್ಕನುಗುಣವಾಗಿ ಗೌರವ' ಇದು ಇತ್ತೀಚಿನ ಗಾದೆ ಎಂದಿದ್ದರು ನಮ್ಮ ಪಕ್ಕದ ಮನೆಯ ರಿಟೈರ್ಡ್ ಹೆಡ್ ಮಾಸ್ಟರ್.

ನನಗೂ ಪೆನ್ಸಿಲ್ ಮೊನೆಯಲ್ಲಂತಿದ್ದರೂ ಇಟ್ಟಿಗೆಯಂತಿರುವ ಹೈ ಹೀಲ್ಡ್ ಚಪ್ಪಲಿ ಹಾಕಿ ಬಳುಕುವಂತೆ ನಡೆಯಬೇಕೆಂಬ ಬಯಕೆ ಬಹಳ ದಿನಗಳಿಂದ ಕಾಡುತ್ತಿತ್ತು. ಮಾಡಲು ಕೆಲಸವಿಲ್ಲ ಎಂದಲ್ಲ, ಕೆಲಸದ ಮಧ್ಯೆಯೇ ಉರ್ಫೀ ಜಾವೇದ್ ಎನ್ನುವವಳ ರೀಲ್ಸ್ ನೋಡುತ್ತಿದ್ದೆ, ಅದರಲ್ಲವಳು ತಾನು ಎಲ್ಲೂ, ಹೇಗೂ ನಡೆಯಬಲ್ಲೆ, ನೋಡಿ ಎನ್ನುತ್ತಾ 5 ಇಂಚು ಎತ್ತರದ ಹೈ ಹೀಲ್ಡ್ ಚಪ್ಪಲಿಯಲ್ಲಿ ಮುಂಬೈಯ ಫುಟ್ ಪಾತಲ್ಲಿ ಓಡಿದಳು. ರಿಯಾಲಿಟಿ ಶೋ ಒಂದರಲ್ಲಿ ಸಿನೆಮಾ ತಾರೆ ಕರಿಷ್ಮಾ ಕಪೂರ್  4 ಇಂಚು ಎತ್ತರದ ಪೆನ್ಸಿಲ್ ಮೊನೆಯಷ್ಟೇ ಶಾರ್ಪ್ ಚಪ್ಪಲಿ ಹಾಕಿ ಡಾನ್ಸ್ ಮಾಡಿ ಕುಣಿದು ಕುಪ್ಪಳಿಸುವುದನ್ನು ನೋಡಿ ಹೈ ಹೀಲ್ಡ್ ಚಪ್ಪಲಿಯ ಬಗ್ಗೆ ಇದ್ದ ಮೋಹ ಜಾಗ್ರತವಾಯಿತು. ಯಾವತ್ತೂ ಹಪ್ಪಳದಂತಿರುವ ಫ್ಲಾಟ್ ಚಪ್ಪಲಿಯನ್ನೇ ಹಾಕುವವಳು ಎರಡಿಂಚು ಎತ್ತರದ ಚಪ್ಪಲಿ ಕೊಂಡೆ, ಅದನ್ನು ಹಾಕಿಕೊಂಡು ಮಾರ್ಕೇಟಿಗೂ ಹೋಗಿ ಬಂದೆ. ಅಷ್ಟಕ್ಕೆ ಶುರುವಾದ ಬೆನ್ನು ನೋವು ಏನೆಂದರೂ ಬೆನ್ನು ಬಿಡಲಿಲ್ಲ. ಕಡೆಗೆ ನೋವು ಕಡಿಮೆಯಾಗಿದ್ದು ಡಾಕ್ಟರ್ ಫೀಸ್, ನೋವಿನೆಣ್ಣೆ, ಕ್ರೀಮ್ ಎನ್ನುತ್ತಾ ಒಂದಿಷ್ಟು ದುಡ್ಡು ಕೈಬಿಟ್ಟಾಗಲೇ, ಅದರೊಂದಿಗೆ ಹೈ ಹೀಲ್ಡ್ ಚಪ್ಪಲಿಯ ಕನಸನ್ನು ಶಾಶ್ವತವಾಗಿ ಕೈಬಿಡಬೇಕಾಯಿತು.

ಇತ್ತೀಚಿನ ದಿನಗಳಲ್ಲಿ ಚಪ್ಪಲಿಯ ಕ್ರೇಝ್ ಜಾಸ್ತಿಯಾಗಿದೆ, ಸೀರೆ ಉಟ್ಟಾಗ ಒಂದು ತರಹದ ಚಪ್ಪಲಿಯಾದರೆ, ವೆಸ್ಟರ್ನ್ ಡ್ರೆಸ್ ಹಾಕಿಕೊಂಡಾಗ ಮತ್ತೊಂದು, ದೇವಸ್ಥಾನಕ್ಕೆ ಒಂದು, ಮಾಲ್ ಗೆ ಹೊರಟರೆ ಮತ್ತೊಂದು, ಗಂಡನೊಡನೆ ಹೊರಟಾಗ ಬೇರೊಂದು ತರಹದ ಚಪ್ಪಲಿ ಎನ್ನುತ್ತ ಮನೆಯಲ್ಲಿ 4 ನಾಲ್ಕು ಕಾಲುಗಳಿದ್ದರೂ 40 ಜೊತೆ ಇರುವುದು ಸಾಮಾನ್ಯ. ಸಾಮಾನ್ಯ ಜನರ ಪಾಡು ಇದಾದರೆ  ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿ. ಜಯಲಲಿತಾಳ ಮನೆಯನ್ನು ರೈಡ್ ಮಾಡಿದಾಗ 750 ಜೊತೆ ಚಪ್ಪಲಿ ಸಿಕ್ಕಿದ್ದು ದೊಡ್ಡ ಸುದ್ದಿ ಮಾಡಿತ್ತು. ಹಾಗೆಯೇ ಫಿಲಿಪ್ಪೈನ್ ದೇಶದ ಮಾಜಿ ರಾಷ್ಟ್ರಪತಿ ಫರ್ಡಿನೆಂಡ್ ಅವರ ಪತ್ನಿ ಮಾರ್ಕೋಸ್ ಇಮೆಲ್ಡಾ ಹತ್ತಿರ 3 ಸಾವಿರಕ್ಕೂ ಅಧಿಕ ಜೊತೆ ಚಪ್ಪಲಿಗಳಿದ್ದವಂತೆ. ಮನೆಯಿಂದ ಹೊರಗೆ ಹೊರಟಾಗೆಲ್ಲಾ ಸುದ್ಧಿಯಾಗುವ ಅನಿತಾ ಅಂಬಾನಿ' ಹತ್ತಿರ ಎಷ್ಟು ಜೊತೆ ಚಪ್ಪಲಿ ಇದ್ದಾವೆ ಎನ್ನುವ

ಸುದ್ದಿ ಇನ್ನೂ ಸದ್ದು ಮಾಡಿಲ್ಲ. ಸಿನೆಮಾ ತಾರೆಯರು ಒಮ್ಮೆ ತೊಟ್ಟ ಡ್ರೆಸ್ಸನ್ನು ಮತ್ತೊಮ್ಮೆ ತೊಟ್ಟಿದ್ದನ್ನು ನೋಡಿಲ್ಲ, ಪ್ರತಿಯೊಂದು ಡ್ರೆಸ್ಸಿಗೂ ಮ್ಯಾಚಿಂಗ್ ಚಪ್ಪಲಿಯಂತೂ ಹಾಕೇ ಹಾಕುತ್ತಾರೆ, ಹಾಗಾದರೆ ಎಷ್ಟು ಜೊತೆ ಚಪ್ಪಲಿ ಇರಬಹುದು ಅದನ್ನು ಎಲ್ಲಿಡಬಹುದು? ಹಳೆಯ ಚಪ್ಪಲಿಯನ್ನೇನು ಮಾಡುತ್ತಾರೆ ಎನ್ನುವುದು ನನ್ನ ಸದ್ಯದ ಚಿಂತೆ.

ಜೀವನಕ್ಕೆ 'ರೋಟಿ, ಕಪಡಾ ಔರ್ ಮಕಾನ್' ಸಾಕು, ಈ ಲಿಸ್ಟಿನಲ್ಲಿ ಚಪ್ಪಲಿ ಇಲ್ಲದಿದ್ದರೂ ಚಪ್ಪಲಿ ಸದಾ ಸದ್ದು ಮಾಡುತ್ತಿರುತ್ತದೆ. 'ಪ್ರದಾ' ಅಂತಾರಾಷ್ಟ್ರೀಯ ಕಂಪೆನಿಯೊಂದು ಇಟೆಲಿಯಲ್ಲಿ ನಡೆಯುವ ಫ್ಯಾಷನ್ ಶೋದಲ್ಲಿ ಕೊಲ್ಹಾಪುರದ ಚಪ್ಪಲಿಯನ್ನು ಕಾಪಿ ಮಾಡಿ ಬಳಸುತ್ತಾರೆನ್ನುವ ಸುದ್ದಿ ಗೊತ್ತಾಗುತ್ತಿದ್ದಂತೆ ಜಿಐ ಟ್ಯಾಗ್ ಇರುವ ಕೊಲ್ಹಾಪುರದ ಚಪ್ಪಲಿ ನಿರ್ಮಿಸುವವರು ಕೇಸ್ ಮಾಡಲು ಹೊರಟರಂತೆ. ಕೇಸ್‌ನಿಂದ ಬಚಾವಾಗಲು ಪ್ರದಾ ಕಂಪೆನಿಯವರು ಕೊಲ್ಹಾಪುರದ ಚಪ್ಪಲಿಯನ್ನು, ಅದನ್ನು ನಿರ್ಮಿಸುವವರನ್ನೂ ಹಾಡಿ ಹೊಗುಳುತ್ತಿದ್ದಾರಂತೆ. ಒಂದು ದೇಶಿಯ ಚಪ್ಪಲಿ ಅಂತಾರಾಷ್ಟ್ರೀಯ ಸುದ್ಧಿ ಮಾಡಬಹುದು ಎನ್ನುವುದಕ್ಕೇ ಈ ಘಟನೆಯೇ ಸಾಕ್ಷಿ.

ನಮ್ಮ ಬಾಲ್ಯದ ಕಾಲದತ್ತ ಹಿಂತಿರುಗಿ ನೋಡಿದರೆ ನಿಲಿ, ಬಿಳಿ ಬಣ್ಣದ ಹವಾಯ್ ಚಪ್ಪಲಿ ಕಾಣಿಸುತ್ತದೆ. ಚಪ್ಪಲಿ ಇಲ್ಲದ ಕಾಲುಗಳ ನಡುವೆ ಚಪ್ಪಲಿ ಇರುವ ಕಾಲುಗಳಿಗೆ ಘನತೆ ಜಾಸ್ತಿ' ಹಾಗಾಗಿ ಹವಾಯ್ ಹಾಕಿದರೂ ಗೌರವ ಸಿಗುತ್ತಿತ್ತು. ಈಗಲೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಕುವುದು ಹವಾಯ್ ಚಪ್ಪಲ್, ಅದನ್ನೇ ಹಾಕಿಕೊಂಡು ಅಂಬಾನಿಯ ಮಗನ ಮದುವೆಗೂ ಹೋಗಿದ್ದಳಂತೆ. ಮತ್ತೆ ಬಾಲ್ಯದ ಕಾಲವನ್ನು ನೆನಪು ಮಾಡಿಕೊಂಡರೆ.. ಕರಾವಳಿಯಲ್ಲಿ ಭರ್ತಿ 4 ತಿಂಗಳು ಮಳೆಗಾಲ, ಹವಾಯಿ ಚಪ್ಪಲಿ ಹಾಕಿಕೊಂಡು ಮಳೆಯ ನೀರಿನಲ್ಲಿ ನಡೆಯಬೇಕೆಂದರೆ ಪಟ, ಪಟ ನೀರು ಹಾರುತ್ತಿತ್ತು, ಹಾಗೆ ನೀರು ಹಾರಿಸಿ ನಡೆಯುವುದರಲ್ಲೂ ಖುಷಿ ಇತ್ತು. ಮಧ್ಯದಲ್ಲಿ ಚಪ್ಪಲಿಯ ಬಾರು ಕಿತ್ತು ಹೋಯಿತೆಂದರೆ ಒಂದ ಕಾಲಲ್ಲಿ ಚಪ್ಪಲ್ಲಿ ಮತ್ತೊಂದು ಕೈಯಲ್ಲಿ ಚಪ್ಪಲಿ ಇರುತ್ತಿತ್ತು. ಹವಾಯ್ ಚಪ್ಪಲಿಗಳ ಮಧ್ಯದಲ್ಲಿ ಚಪಪರ ಶಬ್ಧ ಮಾಡುವ ಚರ್ಮದ ಚಪ್ಪಲಿಗಳೂ ಇತ್ತು. ಕಾಲ ಬದಲಾದಂತೆ ಗಟ್ಟಿಮುಟ್ಟಾದ ಬಾಟಾ, ಸಾಂಡಕ್ ಚಪ್ಪಲಿ ಮಾರುಕಟ್ಟೆಗೆ ಬಂತು, ಅದರೆ ಕಾಲಿನ ಚಪ್ಪಲಿಯ ಬೆಲೆಯ ಬಿಸಿ ಕೈಗೆ ತಾಗುತ್ತಿತ್ತು. ಹಲ್ಲಿಲ್ಲದ ಚಪ್ಪಲಿಗಳು ಕಾಲು ಕಚ್ಚುವುದಿತ್ತು!! ಅಂದರೆ ಒರಟು ಹೊಸ ಚಪ್ಪಲಿಗಳು ಕಾಲಿಗೆ ಮಾಡುವ ಗಾಯ. ಚಪ್ಪಲಿಗಳು ಹಳತಾದಾಗಲೇ ಚಪ್ಪಲಿಯ ಬಾಯಿ ಚಪಲ ನಿಲ್ಲುತ್ತಿತ್ತು.

ಚಪ್ಪಲಿಯ ಕಳ್ಳತನ ಸರ್ವೇ ಸಾಮಾನ್ಯವಾಗುವ ಕಾಲವಿತ್ತು. ಚಪ್ಪಲಿಯನ್ನು ಹೊರಗೆ ಬಿಟ್ಟು ದೇವಸ್ಥಾನಕ್ಕೆ ಹೋದವರು ದೇವರಿಗಿಂತ ಚಪ್ಪಲಿಯನ್ನು ನೆನೆಯುವುದೇ ಜಾಸ್ತಿ, ಚಪ್ಪಲಿ ಕಾಯಲು ಯಾರಾದರೂ ಒಬ್ಬರನ್ನು ಹೊರಗೆ ನಿಲ್ಲಿಸುವುದೂ ಇತ್ತು. ನಾನಂತೂ ಚಪ್ಪಲಿಯನ್ನು ಬಿಡುವಾಗ ಒಂದು ಚಪ್ಪಲಿಯನ್ನು ಒಂದು ಕಡೆ, ಮೊತ್ತೊಂದನ್ನು ಮತ್ತೊಂದು ಕಡೆ ಬಿಡುತ್ತಿದ್ದೆ, ಹಾಗಾದರೂ ಚಪ್ಪಲಿ ಕಳೆದುಕೊಂಡದ್ದಿದೆ. ನನ್ನ ದೊಡ್ಡಮ್ಮನಿಗೆ ಮಗ ಒತ್ತಾಯ ಮಾಡಿ ಬಾಟಾ ಚಪ್ಪಲಿ ಕೊಡಿಸಿದ, ಅಪರೂಪಕ್ಕೆ ಅದನ್ನು ಹಾಕಿಕೊಳ್ಳುತ್ತಿದ್ದರು ದೊಡ್ಡಮ್ಮ, ಉಪಯೋಗಿಸಿದ ನಂತರ ಅದನ್ನು ಚೆನ್ನಾಗಿ ಒರೆಸಿ, ಹಳೆ ಬಟ್ಟೆಯಲ್ಲಿ ಸುತ್ತಿ ಕಪಾಟೊಂದರಲ್ಲಿ ಭದ್ರವಾಗಿ ಇಟ್ಟು ಬೀಗ ಜಡಿಯುತ್ತಿದ್ದರು.

ಈಗ ಬ್ರಾಂಡಡ್ ಚಪ್ಪಲಿಗಳು ಮೂಡ್ ಮತ್ತು ಸಂದರ್ಭಕ್ಕೆ ಹೊಂದುವ, ಹಾಕಿದ ಡ್ರೆಸ್ಸಿಗೆ ಒಪ್ಪುವ ಬಣ್ಣ, ಬಣ್ಣದ ಚಪ್ಪಲಿಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಐದಡಿ

ಎತ್ತರದವರನ್ನು ಐದುವರೆ ಅಡಿಯಷ್ಟು ಉದ್ದ ಮಾಡುವ, ಕಾಲಿಗೆ ಬಟ್ಟೆ ಸುತ್ತಿಕೊಂಡಂತಿರುವ; ಉಂಗುಷ್ಠವಿರುವ, ಉಂಗುಷ್ಠವಿರದ; ಬಕಲ್ ಇರುವ, ಇರದ ತರಹ, ತರಹದ ಚಪ್ಪಲಿಗಳು ಹವಾ ನಿಯಂತ್ರಿತ ಅಂಗಡಿಯಲ್ಲಿ ಮಾರಾಟಕ್ಕಿವೆ. ಮನೆಯೊಳಗೆ ಹಾಕುವ ಚಪ್ಪಲಿಯ ನಮೂನೆಯೇ ಬೇರೆ, ಹೊರಗಿನದ್ದು ಬೇರೆ. ಮನೆಯೊಳಗಿನ ಚಪ್ಪಲಿಗಳಿಗೆ ವಿಶೇಷ ಆಕರ್ಷಣೆ, ಹತ್ತಿಯಂತೆ ಹಗುರ, ಹೂವಿನಂತೆ ಮೃದು, ಮೇಲೆ ವಿವಿಧ ಪ್ರಾಣಿಗಳ ಮುಖ. ಹುಡುಗರ ಶೂಗಳೇನು ಕಡಿಮೆ!! ಕಪ್ಪು, ಬಿಳಿ ಬಣ್ಣದಲ್ಲಿ ಬರುತ್ತಿದ್ದ ಶೂಗಳೀಗ ಕೆಂಪು, ಕಿತ್ತಳೆ, ಹಳದಿ, ನೀಲಿ ಬಣ್ಣದಲ್ಲೂ ಇರುತ್ತದೆ. ಶೂಗಳ ಬೆಲೆಯಂತೂ ಕೇಳಲೇ ಬೇಡಿ, ಅದಕ್ಕೆ ವಿಶೇಷ ಲೋನ್ ಸಿಗದಿದ್ದರೂ ಇ.ಎಮ್.ಐ ಮೇಲೆ ಕೊಳ್ಳಬಹುದು. ನಡೆದಾಗ ಪೊಯ್, ಪೊಯ್ ಶಬ್ಧ ಮಾಡುವ, ಮಿಣಿ, ಮಿಣಿ ಲೈಟ್ ಬರುವ ಮಕ್ಕಳ ಚಪ್ಪಲಿ ಮಾರುಕಟ್ಟೆಗೆ ಬಂದು ದಶಕಗಳೇ ಕಳೆದಿದೆ.

ನನ್ನ ಅತ್ತೆಯ ಪ್ರಕಾರ ಚಪ್ಪಲಿ ಎಷ್ಟು ಚೆಂದವಿದ್ದರೇನಂತೆ ಕಾಲಿನಲ್ಲೇ ಇರುವುದು ತಾನೇ ? ತಲೆಯ ಮೇಲೇನೂ ಇಡುವುದಿಲ್ಲವಲ್ಲ, ಅದರ ಸ್ಥಾನ ಎಷ್ಟಾದರೂ ಮೂಲೆಯಲ್ಲೇ' ಎನ್ನುತ್ತಾರೆ. ಹಾಗಿದ್ದರೂ ಚಪ್ಪಲಿಗಳಿಗೂ ಸ್ಟಾಂಡರ್ಡ್ ಇದೆ, ಹಾಗೆಯೇ ಚಪ್ಪಲಿ ಕಳ್ಳತನಕ್ಕೂ. ಈಗ ಏನಿದ್ದರೂ ಬ್ರಾಂಡಡ್ ಶೂಗಳ ಕಳ್ಳತನ ಮಾತ್ರ ನಡೆಯುತ್ತದೆ.

ಮುಖಕ್ಕೆ ಹೊಂದುವ ಚಪ್ಪಲಿ ಹಾಕುವುದಿಲ್ಲವಾದರೂ ಹಾಕಿದವರ ಸ್ಟಾಂಡರ್ಡ್ ಗುರುತಿಸುವ ಕಾಲವಿದು!! ■

